FINANCIAL BUSINESS

General Discussion on the Budget For the Year 1982-83.

†SRI PRABHAKAR TELKAR (Chittapura).—Mr. Deputy Speaker Sir, while welcoming the budget presented by Sri M. Veerappa Moily, our Finance Minister, I really congratulate him for having taken the trouble to implement certain plans which are helpful to Harijans, Girijans, Backward Class and Minority people. I am really thankful to him as he has taken decision to construct about 100 hostels for Scheduled Castes and Scheduled Tribes, 50 hostels for Backward Class people, the scheme of building Guana Mandirs in two thousand villages, temporary jobs to scheduled castes and scheduled tribes people and backward class people and providing loans through the Karnataka State Backward Classes and Minorities Development Corporation, and other schemes like Griha Kalyana, Asha Kirana. Munnade, Sagara Deepa, etc. It is really a well considered thing that he has taken pains to find out ways to help the backward class, scheduled caste and Minority people who are the backbone of this Government. It is not that it has been simply enunciated or shown in this budget speech, but I request the hon. Finance Minister to see that these schemes are implemented to the core. The present Government is for these weaker sections of people and there should not be any hesitation in saying that this Government is helping this scheduled castes, backward class and Minority people as enunciated in our Government order issued in 1977. Now some arguments are being put forth that criterion for backwardness should be on monetary income. But I say that the present Government which has taken up plans to help these weaker sections of people on caste basis should continue the same. It is not going against the Constitution or any law. The Constitution has provided protection to these people and the Government is really taking steps to help these people and I, therefore, congratulate our Government and specialiy Sri M. Veerappa Moily, who has taken pains to find ways and means to help these people. With these observations I want to submit one or two points which are very important to be considered by our Hon'ble Finance Minister.

The result of the Census of 1981 are now available and I am sure the hon. members would be aware that the population of Karnataka has grown from 292.99 lakhs to 370.43 lakhs in 1981, It is an alarming situation. Karnataka is trying its best to deve op and uplift these people, but this question of population is coming in he way and therefore, the Government should think how to checs2 this population. The Government has to find out so many way

of taxing or getting taxes. We have got entertainment tax, professional tax, salas tax, property tax, wealth tax and so many other taxes. The Government has also to find out to tax the rural rich. But even after taxing or getting so many taxes the Government is unable to provide social benefits to the people because of increase in the population.

11-00 A.M.

In the year 1973 while speaking on the Budget I had suggested to the then Finance Minister Sri Ghorpade to bring in a taxation measure to levy tax on couples having more than two children. It has not been considered. Now time has come that we should think on those lines and it is very necessary also to keep an eye on the population control in our country. Therefore, I request the Hon'ble Minister for Finance to bring in taxation proposal atleast now and reduce the rate of population. Let the Government stop all the benefits to the couples having two or more children. It is also the duty of the Government to restrict increase in the population rate, which, in my opinion is going on slow pace. So, the Government must think of some repressive measure to out population rate in our country. Here I would like to quote a news item which indicate the steps taken in China. If this policy is considered and implemented in our State, I think the credit will go to our Government and it may follow suit. I qutote the news item appearing in Indian Express Dt. 18th Feb. 1982 under the heading 'New penalties to curb birth rate in China'.

> ' New penalties have been announced in Beijing making life even tougher for couples who have two or more children and even those who have just one child without the planning.
>
> Announcing this on Monday, the Beijing Radio said the new measures meant that for the first time couples were threatened with having their pay curtailed and losing social benefits too, if they lived in the country losing private cultivation land and having to yield more of their crop to the State......"

My Submission here is our Government should also think on those lines and draw up programmes. Of course, it may not be possible to apply those principles immediately but let it begin from Karnataka and let that credit come to our State in this regardo Therefore, my submission to the Hon'ble Finance Minister is that te examine the taxation measure that has been taken by the Chinese Government and also to examine how best this could be applied her.

so that there could be some check in the increase of population rate. Further, I would like to quote what has been stated at para 31 in the Budget Speech. It is stated.

> "On the Health front our aim is to ensure full utilisation of the facilities already created. Our thrust has necessarily, to be on creating among people a sense of urgency about population control. Our performance has been generally good on this front"

Except this nothing has been said. Our Government has not enunciated any new programmes to check population growth. If we do not enunciate new measures, I think we cannot give social benefits to the people and cannot take up developmental works in our State. Therefore, I urge upon the Government to have consaltation with the Central Government and formulate such measures in this behalf. Let this start with Karnataka.

Sir, the other point which I want to stress is regarding Forest. We in Hyderabad-Karnataka area have been facing drought every third or fourth year and our Government is spending crores of rupees but no concrete steps have been taken to minimise the drought occurring often in this area. No serious thought has been given to this problem. About this, I have been repeatedly requesting the Forest Department to have a special scheme to grow more forest in this area. Why I am saying this is, unless we have thick forest and trees all around, we will not get sufficient rains during the season and the result is we have to face drought conditions even during off seasons. Now, in order to get more rains the Forest Department should draw some special schemes just like one which our Hon'ble Finance Minister was kind enough to announce a scheme called 'NEGILU BHAGYA', GNANA MANDIRA :

ಶ್ರೀ ಎಂ. ವೀರಪ್ಪ ಮೊಯಿಲಿ. — ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಐದು ವರ್ಷದ ೩೦ ಕೋಟಿ ರೂಪಾಯಿನ ಯೋಜನೆ ಇದೆ.

SRI PRABHAKAR R. TELKAR.—I agree Sir, In addition to this the Forest Department, Agriculture and the Horticulture Department should join together and draw a schame to have more number of trees in this area. Unless this is done I am sure our Government cannot solve the drought conditions that are prevailing every year in Hyderabad-Karnataka area. I think this may not cost much to the Government and the Departments like Forest, Agriculture and Horticulture can do this job without much difficulty provided they c-oordinate the work among thameslves. Further, we must also alert the public to save the trees which are being unauthorisedly cut by the contractors and other people. In Utter Pradesh there is an

Association called Tree Lovers Association formed with the intention to prevent cutting of trees illegally and unauthorisedly. Such awareness must come to our people also add for this Government should draw some programmes. Apart from this, I also suggest to the Forest Department to come forward to have more and more plantations of trees. If this done I hope in this area we will have monsoon within a month's time, which in turn would able to solve the problems of the people of this area.

We have got the problem of manure and fuel. We can solve this problem if we plant the babul trees in our area; The Agricultural Department should supply saplings of babul trees freely to the agriculturists so that the problem of manure and fuel could be solved. Within a year, it grows to the height of 25-30 feet. Therefore, I request the Minister to give directions to the Department to supply these saplings to agriculturists. I also request the Hon. Finance Minister to provide sufficient funds so that we can plan to create forest in these areas. I also congratulate our Government for having created the Gulbarga Development Authority for this area. By this, the Government have come forward to eredicate the imbalance which was existing in this area. If sufficient funds provided, it will take its own course in developing this area. Now, Rs. 10 crores have been provided, for which I congratulate the Government Regarding Gulbarga University, I request the Hon. Finance Minister to provide more funds to it. As, so many construction works have to be taken up, I request the Government to provide more funds to this University.

One more thing regarding providing funds to medium irrigation projects in this area. There are several medium irrigation projects in this area. For exemple, there is Bennethora project. Last year they have given Rs. 80 lakhs and this year Rs. 35 lakhs. This is a multi-purpose irrigation project, which helps to irrigate 50,000 acres of land and provide drinking water to Gulbarga City. Even if you give Rs. 1 crore, it will take 20 years to complete. Therefore, I request the Hon. Finance Minister to enhance the grants and this year additional grants must be given to this project. Therefore, I once again request the Hon. Finance Minister to provide necessary and sufficient finance to this project.

With these few words I thank the Chair and conclude my speech.

† ಶ್ರೀ ಪಂಪಾಪತಿ.—(ದಾವಣಗೆರೆ) ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಅರ್ಥ ಸಚಿವರು ಮಂಡನೆ ಮಾಡಿದ ಆಯುವ್ಯಯಂ ಪತ್ರದಲ್ಲಿ ಕೆಲವೊಂದು ಘೋಷಣೆಗಳು ಇವೆ, ಈ ಘೋಷಣೆಗಳಿಂದಲೇ ಇವತ್ತು ಜನ ತೃಪ್ತಿಪಡಬೇಕೆನ್ನುವ ಅಭಿಪ್ರಾಯದಿಂದ ಈ ಘೋಷಣೆಗಳನ್ನು ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಘೋಷಣೆಗಳ ಹೆಸರುಗಳೇನೋ ಚೆನ್ನಾಗಿಯೇ ಇವೆ. ಆಶಾಕಿರಣ, ನೇಗಿಲಭಾಗ್ಯ, ಭಾಗ್ಯ ಜ್ಯೋತಿ, ಸಾಗರ ದೀಪ, ಈ ಹೆಸರುಗಳು ಬಹಳ ಚೆನ್ನಾಗಿ ಇವೆ. ಆದರೆ ಇವುಗಳ ಒಂದು ಅನುಕೂಲ ಎಷ್ಟರವಟ್ಟಿಗೆ ಜನರಿಗೆ ಸಿಗುತ್ತಿದೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದನ್ನೆಲ್ಲಾ ನೋಡಿದರೆ ಈ ಭಾಗ್ಯಜ್ಯೋತಿ ಎನ್ನುವುದು ನಮ್ಮ ಹಿಂದಿನ ಸರ್ಕಾರ ಇಟ್ಟಂತಹ ಹೆಸರು ಆಗಿದೆ. ಈ ಬಗ್ಗೆ ಈಗಾಗಲೇ ಸ್ವಲ್ಪಮಟ್ಟಿಗೆ ಕೆಲಸ ನಡೆಯುತ್ತಿದೆ. ದೀಪಗಳನ್ನು ಒದಗಿಸಿ ಕೊಡಂತ್ತಿದ್ದಾರೆ. ಇನ್ನು ನೇಗಿಲ ಭಾಗ್ಯ ಎಂದು ರೈತರ ಮೇಲೆ ನೇಗಿಲನ್ನು ಹೊರಿಸಿದ್ದಾರೆ. ಆದರಿಂದ ಏನೇನು ಸೌಲಭ್ಯಗಳನ್ನು ಕೊಡುತ್ತಾರೋ ಗೊತ್ತಿಲ್ಲ. ನಮ್ಮ ಹಿಂದಿನ ಸರ್ಕಾರದವರು ರೈತರಿಗೆ ಏನೇನೋ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿದ್ದರು. ಆನೇಕ ಸೌಲಭ್ಯಗಳಲ್ಲಿ ರಿಯಾಯಿತಿಯನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಏನನ್ನೂ ಕೊಡಲಿಲ್ಲ. ಅವರ ಮನೆಗಳನ್ನು ಜಪ್ತಿ ಮಾಡುತ್ತಿದ್ದಾರೆನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಹೀಗಾಗಿ ರೈತರಲ್ಲಿ ಅನೇಕ ತೊಂದರೆಗಳು ಇವೆ. ಅವುಗಳ ನಿವಾರಣೆ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂಬುದಕ್ಕೆ ವಿವರಣೆ ಇಲ್ಲ. ಬೆಲೆ ಏರಿಕೆಯ ಬಗ್ಗೆ ನಾವು ಇವತ್ತು ನೋಡುವುದಾದರೆ ಇವತ್ತು ಬೆಲೆ ದಿನದಿನಕ್ಕೆ ಏರಿಕೆಯಾಗುತ್ತಿದೆ, ಇವತ್ತು ಉತ್ಪನ್ನಗಳ ಸೂಚ್ಯಂಕ ಜಾಸ್ತಿಯಾಗುತ್ತಿದೆ. ೧೯೮೦ರಲ್ಲಿ ೫೧೧ ಸೂಚ್ಯಂಕ ಇದ್ದುದು ೧೯೮೧ ರಲ್ಲಿ ಇದು ೬೫೬ಕ್ಕೆ ಏರಿದೆ. ಇವತ್ತು ಇಷ್ಟೊಂದು ಬೆಲೆ ಜಾಸ್ತಿ ಆಗಿದೆ. ಇದೇ ರೀತಿ ಕಾರ್ಮಿಕ ವರ್ಗದ ಸೂಚ್ಯಂಕ ೧೯ ೦ರಲ್ಲಿ ೩೮೯ ಇದ್ದುದು ೮೧ರಲ್ಲಿ ೫೨೩ಕ್ಕೆ ಹೋಗಿದೆ. ೧ ವರ್ಷದಲ್ಲಿ ಎಷ್ಟೊಂದು ಬೆಲೆ ಹೆಚ್ಚಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಇದೇ ರೀತಿ ಪಟ್ಟಣಗಳಲ್ಲಿನ ಚಿಲ್ಲರೆ ಬೆಲೆ ಸೂಚ್ಯಂಕ ೧೯೮೦ರಲ್ಲಿ ೨೨೧ ಇದ್ದುದು ೮೧ರಲ್ಲಿ ಅದು ೨೮೧ಕ್ಕೆ ಏರಿದೆ. ಕೃಷಿ ಕಾರ್ಮಿಕರ ಬಗ್ಗೆ ಹೇಳುವುದಾದರೆ ೧೯೮೦ರಲ್ಲಿ ೩೪೦ ಸೂಚ್ಯಂಕ ಇದ್ದದ್ದು ೮೧ಕ್ಕೆ ೪೬೧ ಆಗಿದೆ. ಗ್ರಾಮೀಣ ಚಿಲ್ಲರೆ ಬೆಲೆ ೧೯೮೦ರಲ್ಲಿ ೨೪೫ ಇದ್ದುದು ೮೧ರಲ್ಲಿ ೩೨೭ ಆಗಿದೆ. ಇದನ್ನು ಸಾರಸಗಟ್ಟಾಗಿ ವಿಚಾರ ಮಾಡುವುದಾದರೆ ಇವತ್ತು ಬೆಲೆ ಜಾಸ್ತಿಯಾಗಿದೆ. ಗ್ರಾಮೀಣ ಚಿಲ್ಲರೆ ಸೂಚ್ಯಂಕ ಹೆಚ್ಚಾಗಿರುವುದನ್ನು ಕಂಡಾಗ, ಪಟ್ಟಣವಾಸಿಗಳಲ್ಲಿ ಅಥವಾ ಕೈಗಾರಿಕೆಗಳಲ್ಲಿ ಅಥವಾ ಸರ್ಕಾರಿ ಕೆಲಸದಲ್ಲಿರತಕ್ಕವರಿಗೆ ಸೂಚ್ಯಂಕಕ್ಕೆ ಅನುಗುಣವಾಗಿ ತುಟ್ಟಿಭತ್ಯ ಕೊಡುತ್ತೀರಿ. ಗ್ರಾಮಾಂತರಗಳಲ್ಲಿರತಕ್ಕ ಕೃಷಿ ಕಾರ್ಮಿಕರಿಗೆ ಅಲ್ಲಿ ಚಿಲ್ಲರೆ ಬೆಲೆ ಜಾಸ್ತಿಯಾಗಿದೆ ಅವರಿಗೆ ನಮ್ಮ ಸರ್ಕಾರ ಏನು ಸೂಚನೆ ಮಾಡಿದೆ? ಅವರ ಕೂಲಿಯನ್ನು ನಿಗದಿ ಪಡಿಸುವಾಗ ತುಟ್ಟಿಭತ್ಯವನ್ನು ವಿಚಾರ ಮಾಡಿದೆಯೇ? ಇಲ್ಲ. ನಮ್ಮ ಸರ್ಕಾರ ಕನಿಷ್ಟ ಕೂಲಿಯನ್ನು ನಿಗದಿ ಮಾಡಿದೆ. ಕನಿಷ್ಟ ಕೂಲಿಯನ್ನು ನಿಗದಿ ಮಾಡತಕ್ಕ ಸಂದರ್ಭದಲ್ಲಿ ಕನಿಷ್ಟ ಕೂಲಿ ನಿಗದಿ ಮಾಡತಕ್ಕ ಸಮಿತಿಯವರು ತುಟ್ಟಿಭತ್ಯವನ್ನು ಕೊಡಬೇಕೆಂದು ಸೂಚನೆ ಮಾಡಿದರೂ ಕೂಡ ತುಟ್ಟಿಭತ್ಯವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಸರ್ಕಾರದವರು ಏತಕ್ಕೆ ಈ ರೀತಿ ಯೋಚನೆ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ಸಾಮಾನ್ಯ ಜನರ ಮತ್ತು ಬಡವರ ಹೆಸರಿನಲ್ಲಿ ಸರ್ಕಾರದ ಆಡಳಿತವನ್ನು ನಡೆಸುವಾಗ ಬಡವರು ಕೊಳ್ಳತಕ್ಕ ಪದಾರ್ಥಗಳ ಬೆಲೆ ದಿನದಿನಕ್ಕೆ ಜಾಸ್ತಿಯಾಗುತ್ತಿರುವಾಗ ಬರತಕ್ಕ ಕಡಿಮೆ ಕೂಲಿಯಲ್ಲಿ ಜೀವನ ಮಾಡುವುದಾದರು ಹೇಗೆ? ಈ ವಿಚಾರದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ? ಬಡವರಿಗಾಗಿ ಮತ್ತು ಕೃಷಿ ಕಾರ್ಮಿಕರಿಗಾಗಿ ನೇಗಿಲ ಭಾಗ್ಯ ಎನ್ನತಕ್ಕ ಹೆಸರಿಟಿದ್ದೀರಿ ಒಪ್ಪುತ್ತೇನೆ. ಹೆಸರು ಚೆನ್ನಾಗಿದೆ. ನೇಗಿಲು ಹೊತ್ತಂತ ರೈತ ಎಲ್ಲಿಯುವರೆಗೆ ನೇಗಿಲನ್ನು ಹೊತ್ತುಕೊಂಡು ತಿರುಗಬೇಕು? ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕೆಲಸಗಾರರು ೩೦–೩೫ ವರ್ಷ ಕೆಲಸ ಮಾಡಿದರೆ ಗ್ರಾಚ್ಯುಯಟಿ ಬರುತ್ತೆ ಸರ್ಕಾರದಲ್ಲಿದ್ದು ೩೦–೩೫ ವರ್ಷ ಸೇವೆ ಸಲ್ಲಿಸಿದವರಿಗೆ ವಿಶ್ರಾಂತಿ ವೇತನ ಕೊಡುತ್ತೀರಿ. ಆದರೆ ನೇಗಿಲು ಹೊತ್ತು ಹೊತ್ತು ಸುಸ್ತಾಗಿ, ಸಾಕಾದಾಗ ಅವನಿಗೆ ಏನು ಪರಿಹಾರ ಕಂಡುಹಿಡಿದಿದ್ದೀರಿ ಕೇರಳ ಸರ್ಕಾರದಲ್ಲಿ ೫೫ ವರ್ಷವಾದ ಮೇಲೆ ತಂದೆ ತಾಯಿಗಳಿರಲಿ, ಇಲ್ಲದೇ ಇರಲಿ ವಿಶ್ರಾಂತಿ ವೇತನ ಕೊಡುತ್ತಾರೆ. ನಮ್ಮ ಸರ್ಕಾರದಲ್ಲಿ ೬೦ ವರ್ಷ ವಯಸ್ಸಾಗಿರಬೇಕು ಮಕ್ಕಳು ಯಾರು ಇರಬಾರದು ಮನೆ ಇರಬಾರದು ದಿಕ್ಕಿಲ್ಲದೇ ಇರತಕ್ಕವರಿಗೆ ಪರಿಹಾರ ಕೊಡಬೇಕೆಂದು ಸೂಚನೆ ಮಾಡಿದ್ದೀರಿ. ಸ್ವಾಮಿ,

† Indicates that remarks or speeches have not been revised by this member concerned.

೬೦ ವರ್ಷವಾದ ಮೇಲೆ ನೀವು ಕೊಡತಕ್ಕ ೪೦ ರೂಪಾಯಿ ಪರಿಹಾರ ತೆಗೆದುಕೊಂಡು ವಾಸ ಮಾಡು ವುದಕ್ಕಾಗುತ್ತದೆಯೆ? ಜೀವನ ಮಾಡುವುದಕ್ಕಾಗುತ್ತದೆಯೇ? ಅಥವಾ ಅಡಿಗೆ ಮಾಡಿಕೊಂಡು ಊಟ ಮಾಡುವುದಕ್ಕಾಗುತ್ತದೆಯೆ?

ಶ್ರೀ ಆರ್. ಗುಂಡೂರಾವ್.—ಎಷ್ಟು ಕೊಡಬೇಕು ಹೇಳಿ.

ಶ್ರೀ ಪಂಪಾಪತಿ.—ಕನಿಷ್ಠ ೧೦೦ ರೂಪಾಯಿ ಬೇಡವೆ ಸ್ವಾಮಿ. ಒಬ್ಬ ಮನುಷ್ಯನಿಗೆ ತನ್ನ ಗುಡಿಸಿಲಿನಲ್ಲಿ ಅಡಿಗೆ ಮಾಡಿಕೊಂಡು ಊಟ ಮಾಡಬೇಕೆಂದರೆ ೧೦೦ ರೂಪಾಯಿ ಇಲ್ಲದೇ ಸಾಧ್ಯವಾಗು ತ್ತದೆಯೇ? ಸ್ವಾಮಿ, ಸರ್ಕಾರಿ ಕೆಲಸದಲ್ಲಿರತಕ್ಕ ಹೆಣ್ಣು ಮಕ್ಕಳಿಗೆ, ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಹೆಣ್ಣು ಮಕ್ಕಳಿಗೆ ಅವರು ಗರ್ಭಿಣಿಯರಾಗಿ ಹೆರಿಗೆಯಾಗುವಂತ ಸಂದರ್ಭದಲ್ಲಿ ರಜಾ ಸೌಲಭ್ಯಗಳು ಇದೆ ಹೇಗೆ ಸಂದರ್ಭದಲ್ಲಿ ಪರಿಹಾರ ಕೊಡುತ್ತೀರಿ. ಅದೇರೀತಿ ಕೂಲಿ ಮಾಡತಕ್ಕ ಕೃಷಿ ಕಾರ್ಮಿಕರ ಹೆಣ್ಣು ಮಕ್ಕಳಿಗೆ. ರೈತರ ಹೆಣ್ಣು ಮಕ್ಕಳಿಗೆ, ಹಗಲು ರಾತ್ರಿ ಮಳೆ ಗಾಳಿ ಬಿಸಿಲು ಎನ್ನದೇ ದುಡಿಯುತಕ್ಕ ಗ್ರಾಮಾಂತರ ಪ್ರದೇಶಗಳ ಹೆಣ್ಣು ಮಕ್ಕಳಿಗೆ ಯಾವ ಸೌಲತ್ತುಗಳನ್ನು ಕೊಟ್ಟಿದ್ದೀರಿ. ಪ್ರಕೃತಿ ನಿಯಮದಂತೆ ಹೆಣ್ಣು ಮಕ್ಕಳು ಮದುವೆಯಾದಮೇಲೆ ಗರ್ಭಿಣಿಯರಾಗಿ ತಾಯಂದಿರಾಗುತ್ತಾರೆ. ಅವರ ಜನನ ಕಾಲದಲ್ಲಿ ಜೀವನ ಹೇಗೆ ಸಾಗಿಸಬೇಕು. ಮಕ್ಕಳನ್ನು ಆರೋಗ್ಯವಂತರನ್ನಾಗಿ ಮಾಡಬೇಕು. ದಷ್ಟಪುಷ್ಟರನ್ನಾಗಿ ಮಾಡಬೇಕು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಯೋಜನೆ ಸರ್ಕಾರದಲ್ಲಿದೆ. ಆದರೆ ಹೆಣ್ಣು ಮಕ್ಕಳ ಜನನ ಕಾಲದಲ್ಲಿ ಅವರ ಯೋಗಕ್ಷೇಮಕ್ಕೆ ಬಾಣಂತಿಯಾಗಿ ಜೀವನ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ಕೃಷಿ ಕಾರ್ಮಿಕರಾಗಿ ದುಡಿಯುತಕ್ಕ ಹೆಣ್ಣು ಮಕ್ಕಳೇನಿದ್ದಾರೆ, ಅವರಿಗೆ ಜಮೀನು ಇಲ್ಲ, ಏನೂ ಇಲ್ಲದ ನಿರ್ಗತಿಕರು, ಕೂಲಿ ಕೆಲಸವನ್ನು ಬಿಟ್ಟು ಬೇರೆ ಕೆಲಸ ಇಲ್ಲ, ಬಾಣಂತಿಯಾದಾಗ ಕನಿಷ್ಟ ಮೂರು ತಿಂಗಳು ಮನೆಯಲ್ಲಿರಬೇಕಾಗುತ್ತದೆ, ಆ ಮೂರು ತಿಂಗಳ ಕಾಲ ಅವರು ಜೀವನ ಹೇಗೆ ಮಾಡಬೇಕು ಅಂತವರಿಗೆ ಏನಾದರೂ ಸಾಲ ಸೌಲಭ್ಯದ ಅನುಕೂಲ ಕೊಟ್ಟಿ ದ್ದೀರಾ ಏನೂ ಇಲ್ಲ, ಇಂತವರ ಬಗ್ಗೆ ಸರ್ಕಾರ ಏತಕ್ಕೆ ಯೋಚನೆ ಮಾಡುತ್ತಿಲ್ಲವೆಂದು ನಾನು ಕೇಳು ತ್ತಿದ್ದೇನೆ.

ಇನ್ನು ದೊಡ್ಡದೊಡ್ಡ ಕೈಗಾರಿಕೆಗಳವರು ಜೀವವಿಮೆ ಮಾಡಿಸುತ್ತಾರೆ. ಲಾರಿಗಳಲ್ಲಿ ಸಾಮಾ ನುಗಳನ್ನು ತುಂಬಿಕೊಂಡು ಬಂದರೆ, ಲಾರಿ ಸಮೇತ ಸಾಮಾನು ಸುಟ್ಟು ಹೋಗಲಿ, ಬಿದ್ದು ಹೋಗಲಿ ಕೆಟ್ಟು ಹೋಗಲಿ, ಹಾಳಾಗಿ ಹೋಗಲಿ ಜೀವವಿಮೆಯಿಂದ ಅವರು ಪರಿಹಾರ ಪಡೆಯುತ್ತಾರೆ. ಆದರೆ, ಇವತ್ತು ರೈತನಾದವನು ಅದರಲ್ಲಿಯೂ ಸಣ್ಣ ಮತ್ತು ಮಧ್ಯಮ ವರ್ಗದ ರೈತ ಮಳೆಯನ್ನೇ ನಂಬಿ ವ್ಯವಸಾಯ ಮಾಡಿಕೊಂಡು ಜೀವನ ಮಾಡುತಾನೆ. ಮಳೆ ಬರದೇ ಇದ್ದರೆ ಬೆಳೆ ಇಲ್ಲ. ಕೃಷಿಗೆ ಏತಕ್ಕೆ ಇನ್ಷೂರೆನ್ಸ್ ಮಾಡಬಾರದು ಇನ್ಷೂರೆನ್ಸ್ ಮಾಡಿ ಸೂಕ್ತವಾದಂತ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ, ಖಂಡಿತವಾಗಿಯೂ ಕೂಡ ಮಳೆ ಬರದೇ ಇದ್ದರೂ ಬೆಳೆ ಆಗದೇ ಇದ್ದರೂ ಕೂಡ ಸರ್ಕಾರದಿಂದ ಸಹಾಯ ಸಿಗುತ್ತದೆಂದು ಜೀವನ ಮಾಡುತ್ತಾನೆ. ಇವತ್ತು ಮಳೆ ಹೋದರೆ ಬೇಸಾಯದ ಮೇಲೆ ಹಾಕಿದಂತ ಹಣವೂ ಇಲ್ಲ, ಬೆಳೆಯೂ ಇಲ್ಲ, ಅವನಿಗೆ ಜೀವನ ಮಾಡುವುದಕೇ ದಾರಿಯೇ ಇಲ್ಲ ಇಂಥ ಒಂದು ಪರಿಸ್ಥಿತಿ ಇದೆ.

ಶ್ರೀ ಆರ್. ಗುಂಡೂರಾವ್.—ನೀವು ಹೇಳಿದ್ದನ್ನು ಮಾನ್ಯ ಗಂಗಾಧರನ್ ಅವರು ಒಪ್ಪುವುದಿಲ್ಲ

ಶ್ರೀ ಪಂಪಾಪತಿ.—ನಾನು ಹೇಳುವುದು ನಮ್ಮ ಕರ್ತವ್ಯ, ಗಂಗಾಧರನ್‌ರವರು ಒಪ್ಪುತ್ತಾರೆ. ಒಳ್ಳೆಯ ಸಲಹೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದರೆ, ನಮ್ಮ ಕರ್ನಾಟಕ ರಾಜ್ಯ ಎಲ್ಲಾ ದೃಷ್ಟಿಯಿಂದಲೂ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಬದಲಿ ಅರಣ್ಯವನ್ನು ಮಾಡುತ್ತೇವೆಂದು ಹೇಳಿದ್ದೀರಿ. ನನಗೆ ಇದು ಅರ್ಥವಾಗಲಿಲ್ಲ. ಇರತಕ್ಕಂಥ ಅರಣ್ಯವನ್ನೆಲ್ಲಾ ಕಡಿದು ಹೊಸದಾಗಿ ಅರಣ್ಯ ಬೆಳೆಸುತ್ತೀರೇನೊ ಗೊತ್ತಿಲ್ಲ. ಒಂದು ಮರ ಕಡಿದರೆ ಒಂದು ಮರ ಬೆಳೆಸಬೇಕು. ಹತ್ತು ಮರ ಕೂಡ ಬೆಳೆಸಬಹುದು. ಅರಣ್ಯವನ್ನೆಲ್ಲಾ ಕಡೆದು ಬಿಟ್ಟಿದ್ದೀರಿ. ಅರಣ್ಯ ಹಾಕುವುದನ್ನು ಬೇಡ ಎಂದು ಯಾರು ಹೇಳಿದರು ಇವತ್ತು ಅರಣ್ಯ ಖಾಲಿಯಾಗಿದೆ. ಬೆಳೆಸಬೇಕಾದ ಅಗತ್ಯ ಇದೆ. ಅರಣ್ಯ ಒಂದು ಕಡೆ ಇರಲಿ, ಉತ್ತರ ಕರ್ನಾಟಕದಲ್ಲಿ ಅಂದರೆ ಹುಬ್ಬಳ್ಳಿ, ಬಿಜಾಪುರ, ಗುಲ್ಬರ್ಗ ಮತ್ತು ಬೀದರ್ ಭಾಗಗಳಲ್ಲಿ ರಸ್ತೆಯ ಬದಿಯಲ್ಲಿ ಸಾಲು ಮರಗಳು ಇಲ್ಲ. ಯಾವ ರಸ್ತೆಗಳಲ್ಲಿ ಹೋದರೂ ಮರಗಳು ಕಾಣುವುದಿಲ್ಲ. ಸ್ವಾಮಿ, ರಸ್ತೆ ಬದಿಗಳಲ್ಲಿ ಮರಗಳನ್ನು ಹಾಕುವುದಕ್ಕೆ ಏನು ಕಷ್ಟ? ಯಾವ ತೊಂದರೆ ಇದೆ? ಏತಕ್ಕೆ ಹಾಕಲಿಲ್ಲ? ಕೆಲವು ಭಾಗಗಳಲ್ಲಿ ಹಾಕಿದ್ದೀರಿ ಅದಕ್ಕಾಗಿ ಕೋಟ್ಯಾಂತರ ರೂಪಾಯಿ

ಗಳನ್ನು ಖರ್ಚು ಮಾಡಿದ್ದೀರಿ. ಸ್ವಲ್ಪ ಗುಂಡಿ ತೆಗೆದು ಗಿಡ ಇಟ್ಟು ಸುತ್ತಲೂ ಮುಳ್ಳು ಹಾಕಿದ್ದೀರಿ. ಇವತ್ತು ಪೂರಾ ಖಾಲಿಯಾಗಿದೆ ಈ ರೀತಿ ಮಾಡಿದರೆ ಅರಣ್ಯ ಬೆಳೆಯುವುದಕ್ಕಾಗುತ್ತದೆಯೆ? ರಸ್ತೆಯ ಬದಿಯಲ್ಲಿ ಗಿಡಗಳನ್ನು ಬೆಳೆಸುವುದಕ್ಕೆ ಆಗಲಿಲ್ಲವೆಂದರೆ, ಅರಣ್ಯವನ್ನು ಯಾವರೀತಿ ಬೆಳೆಸುತ್ತೀರಿ? ಈ ವಿಚಾರದಲ್ಲಿ ಸರ್ಕಾರ ತೀವ್ರವಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಒಂದು ಸಲಹೆ ಕೊಡುತ್ತೇನೆ. ಪ್ರತಿಯೊಂದು ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನೂ ಮತ್ತು ಗ್ರಾಮ ಪಂಚಾಯಿತಿಗೆ ಸೇರಿದಂತೆ ಅಧಿಕಾರಿಗಳನ್ನು ಕರೆಸಿ ನಿಮ್ಮ ನಿಮ್ಮ ವ್ಯಾಪ್ತಿಯಲ್ಲಿ ಬರತಕ್ಕ ಪ್ರತಿಯೊಂದು ರಸ್ತೆಗಳ ಬದಿಯಲ್ಲೂ ಗಿಡಗಳನ್ನು ಹಾಕಲೇ ಬೇಕು ನೆಡಲೇಬೇಕು ಕಾಪಾಡಲೇಬೇಕೆಂದು ಕಟ್ಟಾಜ್ಞೆಯನ್ನು ಮಾಡಿದರೆ ಇಡೀ ರಾಜ್ಯದಲ್ಲಿರುವ ರಸ್ತೆಗಳ ಬದಿಯಲ್ಲಿ ಗಿಡಗಳು ಬರುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಗ್ರಾಮಕ್ಕೆ ಸೇರಿದಂತ ಖಾಲಿ ಜಾಗಗಳಲ್ಲಿ ಮರಗಳನ್ನು ಬೆಳೆಸಬೇಕೆಂದು ತಿಳಿಸಿದರೆ ಅನುಕೂಲವಾಗುತ್ತದೆ ಅದನ್ನು ಬಿಟ್ಟು ಅರಣ್ಯ ಅಧಿಕಾರಿಗಳನ್ನು ನೇಮಿಸಿ ಅವರ ಮೂಲಕ ಗಿಡಗಳನ್ನು ಬೆಳೆಸುತ್ತೇವೆ ಎಂದರೆ ಅದು ಸಾಧ್ಯವಾಗುವುದಿಲ್ಲ, ಬರೀ ಹಣ ಪೋಲಾಗುತ್ತದೆ. ಇದರಿಂದ ಯಾವ ಸಾಧನೆಯನ್ನೂ ಮಾಡಿದಂತಾಗುವುದಿಲ್ಲ. ಈ ವಿಷಯದಲ್ಲಿ ನನಗೆ ಸಾಕಷ್ಟು ಅನುಭವ ಇದೆ. ದಾವಣಗೆರೆ ನಗರಸಭೆಯಲ್ಲಿ ಒಂದು ವರ್ಷದಲ್ಲಿಯೇ ೬,೦೦೦ ಗಿಡಗಳನ್ನು ನೆಟ್ಟಿದ್ದಾಯಿತು. ಯಾರಾದರೂ ಬಂದು ನೋಡಬಹುದು ೬ ೦೦೦ ಗಿಡಗಳ ಪೈಕಿ ಸುಮಾರು ೪,೦೦೦ ಗಿಡಗಳು ಒಂದು ವರ್ಷದಲ್ಲಿಯೇ ಬೆಳೆದು ದೊಡ್ಡವಾಗಿ ಹೂವಾಗಿವೆ ನೆರಳು ಕೊಡುತ್ತಿವೆ. ಮಾಡಬೇಕೆಂಬ ಮನಸಿಟ್ಟು ಕೆಲಸಮಾಡಿದರೆ ಖಂಡಿತವಾಗಿಯೂ ಆಗುತ್ತೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಭೂಮಿ ಇರುವುದರಿಂದ ಗಿಡಗಳು ಚನ್ನಾಗಿ ಒಳೆಯುತ್ತವೆ, ಅದರಿಂದ ಆದಾಯ ಕೂಡ ಬರುತ್ತದೆ. ಒಳ್ಳೆಯ ಗಾಳಿ ಬರುವುದರ ಜೊತೆಗೆ ನಮ್ಮ ಆರೋಗ್ಯ ದೃಷ್ಟಿಯಿಂದಲೂ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರ ಈ ಬಗ್ಗೆ ತೀವ್ರವಾದಂತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

೧೧-೩೦ ಎ. ಎಂ.

ಮಾನ್ಯ ಉಪಾಧ್ಯಕ್ಷರೆ. ಇನ್ನೊಂದು ವಿಷಯ ಬಡವರ ಬಗ್ಗೆ ಹೇಳಬೇಕು ಎಂದರೆ ನನಗನಿಸುತ್ತದೆ, ಗಣಿಯಲ್ಲಿ ಕಬ್ಬಿಣದ ಅದಿರು ತೆಗೆಯತಕ್ಕಂಥ ಕೆಲಸಗಾರರು ಬಹಳ ತೊಂದರೆಯಲ್ಲಿದ್ದಾರೆ. ಹಿಂದೆ ಪ್ರಧಾನ ಮಂತ್ರಿಯವರು ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಬೇಕೆಂದು ಒಂದು ಯೋಜನೆ ಹಾಕಿ ಅಡಿಗಲ್ಲು ಹಾಕಿ ಹೋದರು. ಅದು ನಮಗೆ ಬರಲಿಲ್ಲ. ಹಿಂದೆ ಇದೇ ಸದನದಲ್ಲಿ ಕೇಂದ್ರ ಸರ್ಕಾರದವರು ಈ ಯೋಜನೆಗೆ ೩೦ ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆಂದು ಅವರಿಗೆ ಧನ್ಯವಾದವನ್ನು ಅರ್ಪಿಸಿದೆವು, ಅದಕ್ಕೆ ಇವೊತ್ತು ಬೆಲೆ ಇಲ್ಲ, ಈ ಬಗ್ಗೆ ಸರ್ಕಾರ ತೀವ್ರವಾದಂಥ ಕ್ರಮವನ್ನು ಕೈಗೊಂಡಿಲ್ಲ. ಇದಕ್ಕೆ ಕಾರಣ ಏನು ಎಂದು ನಮ್ಮ ಸರ್ಕಾರದ ನಿರ್ಲಕ್ಷ್ಯತನ ಎಂದು ಹೇಳಿದರೆ ತಪ್ಪಿಲ್ಲ ಇವೊತ್ತು ನಮ್ಮ ದೇಶದಲ್ಲಿ ಮೂರು ಉಕ್ಕಿನ ಕೈಗಾರಿಕೆಗಳು ಇವೆ. ಒಂದು ಸೇಲಂನಲ್ಲಿದೆ, ಒಂದು ವಿಜಯನಗರದಲ್ಲಿದೆ, ಮತ್ತೊಂದು ವಿಶಾಖಪಟ್ಟಣದಲ್ಲಿದೆ, ಸೇಲಂನಲ್ಲಿ ಕೆಲಸ ಪ್ರಾರಂಭವಾಗಿದೆ, ವಿಶಾಖಪಟ್ಟಣದಲ್ಲಿ ಕೆಲಸ ಪ್ರಾರಂಭವಾಗಿದೆ, ಅದೇ ನಮ್ಮಲ್ಲಿರತಕ್ಕ ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭವಾಗಿಲ್ಲ ಇದಕ್ಕೆ ಕಾರಣ ಏನು ? ನಮ್ಮಲ್ಲಿ ಕೊರತೆ ಏನಿದೆ, ನಮ್ಮಲ್ಲಿ ಬೇಕಾದಷ್ಟು ಜನ ನಿರುದ್ಯೋಗಿಗಳು ಇದ್ದಾರೆ. ನಮ್ಮಲ್ಲಿ ಸಿಕ್ಕತಕ್ಕಂಥ ಕಬ್ಬಿಣದ ಅದಿರು ಏನಿದೆ ಅದು ಬಹಳ ಶ್ರೇಷ್ಟ ಮಟ್ಟದ್ದಾಗಿದೆ. ಒಂದು ಟನ್ ಕಬ್ಬಿಣದ ಅದಿರಿನಲ್ಲಿ ಕನಿಷ್ಟ ೭೦ ಪರ್ಸೆಂಟ್ ಕಬ್ಬಿಣ ಇದೆ ಎಂದು ಹೇಳುತ್ತಾರೆ. ಬಹಳ ಶ್ರೇಷ್ಟಮಟ್ಟದ ಕಬ್ಬಿಣದ ಅದಿರು ಇರತಕ್ಕ ಸ್ಥಳದಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆ ಪ್ರಾರಂಭ ಮಾಡಲಿಲ್ಲ ಅಂದರೆ ಈ ಬಗ್ಗೆ ಸರ್ಕಾರ ಸರಿಯಾದಂಥ ಪ್ರಯತ್ನ ಮಾಡಿಲ್ಲ. ಈ ಬಗ್ಗೆ ನಮ್ಮ ಸರ್ಕಾರ ಕೇಂದ್ರಸರ್ಕಾರದ ಮೇಲೆ ಒತ್ತಾಯ ತರುವಂಥ ಕೆಲಸ ಮಾಡಬೇಕು. ಕರ್ನಾಟಕದ ಜನತೆಯ ಬಗ್ಗೆ ವಿಚಾರ ಮಾಡತಕ್ಕಂಥ ಒಂದು ಪರಿಸ್ಥಿತಿಯನ್ನು ಸರ್ಕಾರ ಉಂಟು ಮಾಡಬೇಕು. ನಾವು ಕೇಂದ್ರಸರ್ಕಾರದಲ್ಲಿ ಧರ್ಮ ಕೇಳುವುದು ಬೇಡ. ನಮ್ಮ ರಾಜ್ಯದಿಂದ ಕೇಂದ್ರಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಾವು ಕೊಡುತ್ತಿದ್ದೇವೆ ಕೇಂದ್ರ ಸರ್ಕಾರ ನಮಗೆ ಒಂದು ಕೈಗಾರಿಕೆ ಕೊಡಲಿಕ್ಕೆ ಹಿಂದು ಮುಂದೆ ನೋಡುವುದಾದರೆ ಆ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ನಮ್ಮ ಕಬ್ಬಿಣದ ಅದಿರು ಜಪಾನ್‌ಗೆ ಹೋಗುತ್ತದೆ. ಆ ಕಬ್ಬಿಣದ ಅದಿರು ತೆಗೆಯುತಕ್ಕಂಥ ಜನರನ್ನು ನಾವು ನೋಡಬೇಕು, ಸುಮಾರು ೪೦ ರಿಂದ ೫೦ ಸಾವಿರ ಜನ ಗುಡ್ಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಸ್ಥಿತಿ ಏನು, ಅವರು ಯಾವರೀತಿ ಇದ್ದಾರೆ, ಅದನ್ನು

ನಾವು ನೋಡಬೇಕಾಗುತ್ತದೆ. ಇಲ್ಲ ಬಡವರು, ಹರಿಜನರು, ಅಲ್ಪಸಂಖ್ಯಾತರು ಎಂದು ಹೇಳುತ್ತೇವೆ. ಇವರೆಲ್ಲಾ ಇಲ್ಲಿ ಇದ್ದಾರೆ, ಅಲ್ಲಿ ಕೆಲಸ ಮಾಡತಕ್ಕ ಜನರಿಗೆ ೩-೪ ರೂಪಾಯಿ ಒಂದು ದಿವಸಕ್ಕೆ ಕೂಲಿ ಬರುತ್ತದೆ. ಆ ಒಂದು ಕೂಲಿಯನ್ನು ತೆಗೆದುಕೊಂಡು ಗುಡ್ಡದಲ್ಲಿ ಕೆಲಸ ಮಾಡಬೇಕು ಅವರು ಯಾವರೀತಿ ಇದ್ದಾರೆ ಎನ್ನುವುದನ್ನು ನಾನು ನೋಡಿದ್ದೇನೆ. ಅವರ ಬಗ್ಗೆ ನನಗೆ ಅನುಭವ ಇದೆ. ಅವರು ಸುಮಾರು ೧೦೦ ವರ್ಷಕ್ಕಿಂತಲೂ ಹಿಂದೆ ಇದ್ದಾರೋ ಏನೋ ಎನ್ನುವ ಭಾವನೆ ಬರುತ್ತದೆ ಅಷ್ಟೊಂದು ಕಷ್ಟದಲ್ಲಿ ಅವರು ಇದ್ದಾರೆ. ನಮ್ಮ ಸರ್ಕಾರ ಅವರಿಗಾಗಿ ಏನು ವ್ಯವಸ್ಥೆ ಮಾಡಿದೆ. ಇವೊತ್ತು ಆ ಒಂದು ಸಂಸ್ಥೆ ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ವಿದೇಶಿವಿನಿಮಯ ಒದಗಿಸಿಕೊಡತಕ್ಕಂಥ ಸಂಸ್ಥೆ. ಸುಮಾರು ೪೦-೬೦ ಕೋಟಿ ರೂಪಾಯಿ ವಿದೇಶೀವಿನಿಮಯ ಒದಗಿಸುತ್ತದೆ. ಆ ಸಂಸ್ಥೆಯಲ್ಲಿ ಕೆಲಸಮಾಡತಕ್ಕವರ ಯೋಗಕ್ಷೇಮದ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರಾ ? ಅವರುಗಳಿಗೆ ಮನೆಗಳನ್ನು ಕಟ್ಟಿಕೊಡಲಿಕ್ಕೆ ಏನಾದರೂ ಯೋಚನೆ ಮಾಡಿದ್ದಿರಾ ? ಅವರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಯೋಚನೆ ಮಾಡಿದ್ದೀರಾ ? ಅವರ ಆರೋಗ್ಯದ ಬಗ್ಗೆ ಯೋಚನೆ ಮಾಡಿದ್ದೀರಾ ? ತಾವು ಏನೂ ಯೋಚನೆ ಮಾಡಿಲ್ಲ, ಇವೊತ್ತು ಕೆಲವು ಕಂಟ್ರಾಕ್ಟರುಗಳು, ಕೆಲವು ರಾಜಕೀಯ ವ್ಯಕ್ತಿಗಳು ಅದರ ಪೂರ್ಣ ಫಲ ಪಡೆಯುತ್ತಿದ್ದಾರೆ, ಅಲ್ಲಿ ದುಡಿಯತಕ್ಕವರಿಗೆ ಯಾವ ರೀತಿಯ ಅನುಕೂಲ ಇಲ್ಲ. ಗಣಿ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಗಳು ಇದ್ದಾರೆ ಅವರಲ್ಲಿ ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ನಾನು ಏನೋ ಹೇಳುತ್ತಿದ್ದೇನೆ ಎಂದು ತಿಳಿದುಕೊಳ್ಳಬೇಡಿ. ತಾವು ಒಂದು ಸಾರಿ ಅಲ್ಲಿಗೆ ಭೇಟಿ ಕೊಟ್ಟು ಅವರ ಪರಿಸ್ಥಿತಿಯನ್ನು ನೋಡಬೇಕು. ಅವರಿಗೆ ಇರತಕ್ಕಂಥ ತೊಂದರೆಯನ್ನು ನಿವಾರಣೆ ಮಾಡತಕ್ಕಂತಾದು ತಮ್ಮ ಜವಾಬ್ದಾರಿ, ಇವೊತ್ತು ಗಣಿ ಮಾಲೀಕರು ಅಂದರೆ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡು ಕಾರುಗಳನ್ನು ಇಟ್ಟುಕೊಂಡು ಸುಖವಾಗಿ ಜೀವನ ಸಾಗಿಸುತ್ತಿದ್ದಾರೆ, ಅವರು ಯಾವುದೇ ರೀತಿ ಕೆಲಸ ಮಾಡುವುದಿಲ್ಲ. ಆದರೆ ಅದೇ ಗಣಿಯಲ್ಲಿ ಕೆಲಸಮಾಡುವವರಿಗೆ ಎರಡು ಹೊತ್ತು ಊಟ ಇಲ್ಲ. ಅವರು ಹಾಕಿದಂಥ ಬಟ್ಟೆಗಳನ್ನು ವಾರಗಟ್ಟಲೇ ತೆಗೆಯುವುದಿಲ್ಲ, ಅವರು ಬಟ್ಟೆಗಳನ್ನು ಏತಕ್ಕೆ ತೆಗೆಯುವುದಿಲ್ಲ ಎಂದರೆ ಅವರು ಬಟ್ಟೆಗಳನ್ನು ತೆಗೆಯಲಿಕ್ಕೆ ಹೋದರೆ ಅವೆಲ್ಲಾ ಕಿತ್ತು ಹೋಗುತ್ತವೆ. ಅಂಥ ಜನರ ಬಗ್ಗೆ ತಾವು ಏನು ಹೇಳಿದ್ದೀರಿ ಎಂದು ಕೇಳಬೇಕಾಗಿದೆ, ಇವೊತ್ತು ಒಂದು ಕೈಗಾರಿಕೆಯಲ್ಲಿ ಇರತಕ್ಕ ಜನರ ಸ್ಥಿತಿ ಈ ರೀತಿ ಆದರೆ ತಾವು ಯಾವ ಯೋಜನೆಗೋಸ್ಕರ ಈ ಆಯವ್ಯಯವನ್ನು ಪ್ರಕಟಿಸಿದ್ದೀರಿ. ಇನ್ನು ಕಬ್ಬಿಣದ ಅದಿರು ಜೊತೆಗೆ ಕೆಲವು ತಾಮ್ರದ ಗಣಿಗಳು ಕೂಡ ಇವೆ, ಚಿತ್ರದುರ್ಗ ಜಿಲ್ಲೆಯಲ್ಲಿ ತಾಮ್ರದ ಅದಿರು ಸಿಕ್ಕುತ್ತದೆ. ಆ ತಾಮ್ರವನ್ನು ಪರಿವರ್ತನೆ ಮಾಡಲಿಕ್ಕೆ ಯೋಜನೆ ಇದೆ. ಅದಕ್ಕೆ ಸರಿಯಾದಂಥ ಹಣವನ್ನು ಇವರು ಒದಗಿಸಿಲ್ಲ. ಇಲ್ಲಿ ತೆಗೆಯುತಕ್ಕ ತಾಮ್ರದ ಪುಡಿಯನು ಇವರು ಬೇರೆ ಕಡೆಗೆ ಕಳುಹಿಸುತ್ತಾರೆ. ಅವರು ಕೊಟ್ಟಷ್ಟು ದುಡ್ಡಿಗೆ ಇವರು ಮಾರಾಟ ಮಾಡುತ್ತಾರೆ. ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನಲ್ಲಿಯೂ ಕೂಡ ಈ ತರಹ ಅದಿರು ಸಿಕ್ಕತಕ್ಕದ್ದು ಇದೆ, ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಲಿಕ್ಕೆ ನಮ್ಮ ಸರ್ಕಾರ ಯೋಚನೆ ಮಾಡಬೇಕು, ಆದಾಯ ಬರಲಿಕ್ಕೆ ಎಲ್ಲೆಲ್ಲಿ ಅವಕಾಶ ಇದೆ ಅದನ್ನು ಪಡೆದುಕೊಳ್ಳಲಿಕ್ಕೆ ನಮ್ಮ ಸರ್ಕಾರ ಪ್ರಯತ್ನ ಮಾಡಬೇಕು. ಆ ರೀತಿಯ ಆದಾಯವನ್ನು ಪಡೆದುಕೊಂಡ ಮೇಲೆ ಆ ಗಣಿಯಲ್ಲಿ ಕೆಲಸ ಮಾಡತಕ್ಕ ಕೆಲಸಗಾರರಿಗೂ ಅನುಕೂಲವನ್ನು ಒದಗಿಸಿಕೊಡಬೇಕು, ಗಣಿಯಲ್ಲಿ ಕೆಲಸಮಾಡುವವರು, ಯಾರೇ ಆಗಲಿ ತಾಮ್ರದ ಗಣಿಯಲ್ಲಿ ಕೆಲಸಮಾಡತಕ್ಕವರೇ ಆಗಲಿ ಕಬ್ಬಿಣದ ಗಣಿಯಲ್ಲಿ ಕೆಲಸಮಾಡತಕ್ಕವರೇ ಆಗಲಿ, ಕೆಲಸ ಮಾಡತಕ್ಕಂಥ ಕೂಲಿಗಾರರಿಗೆ ಸವಲತ್ತು ಒದಗಿಸತಕ್ಕದ್ದು, ಅವರ ಭವಿಷ್ಯವನ್ನು ರೂಪಿಸತಕ್ಕದ್ದು, ಅನುಕೂಲ ಮಾಡಿಕೊಡತಕ್ಕದ್ದು ಸರ್ಕಾರದ ಕರ್ತವ್ಯ ಎಂದು ತಿಳಿದು ತಾವು ಯೋಚನೆ ಮಾಡಿದರೆ ಸಾಧ್ಯ. ಇವೊತ್ತು ಕೆಲಸಗಾರರ ಕೇಳುತ್ತಿದ್ದಾರೆ, ಅವರು ಕೇಳುವುದನ್ನೆಲ್ಲಾ ಹೀಗೆ ಕೊಡಲಿಕ್ಕೆ ಆಗುತ್ತದೆಂದು ವಿರೋಧ ವ್ಯಕ್ತಪಡಿಸಿದರೆ ಖಂಡಿತ ಅಭಿವೃದ್ಧಿಯಾಗುವುದಿಲ್ಲ. ಕೆಲಸಗಾರರಿಗೆ ಆಗತಕ್ಕ ತೊಂದರೆಯನ್ನು ನಿವಾರಣೆ ಮಾಡಲಿಕ್ಕೆ ಆಗುವುದಿಲ್ಲ. ನಿಮ್ಮ ಆಯವ್ಯಯಪಟ್ಟಿಯಲ್ಲಿ ಮಾತ್ರ ಸಲಹೆ ಸೂಚನೆಗಳನ್ನು ಕೊಟ್ಟಂತೆ ಆಗುತ್ತದೆಯೇ ಹೊರತು ಬೇರೆ ಏನೂ ಆಗುವುದಿಲ್ಲ. ಇನ್ನು ಗೃಹ ನಿರ್ಮಾಣ ಮಂಡಲಿಯ ಬಗ್ಗೆ ಹೇಳಬೇಕೆಂದರೆ ಇವೊತ್ತು ಇದು ನಮ್ಮ ಇಡೀ ರಾಜ್ಯದಲ್ಲಿ ಏನು ಮಾಡಿದೆ ಗೊತ್ತಿಲ್ಲ, ದಾವಣಗೆರೆ ಬೆಳೆಯುತಕ್ಕ ನಗರ. ಸುಮಾರು ಎರಡೂವರೆ ಲಕ್ಷ ಜನಸಂಖ್ಯೆ ಅಲ್ಲಿ ಬೆಳೆದಿದೆ, ಕೈಗಾರಿಕಾ ಕ್ಷೇತ್ರವಾಗಿದೆ, ವಿದ್ಯಾಸಂಸ್ಥೆಗಳಿಂದ ಕೂಡಿವೆ, ವ್ಯಾಪಾರ ಕೇಂದ್ರವಾಗಿದೆ. ಎಲ್ಲಾ ಅನುಕೂಲತೆಗಳಿದ್ದರೂ ಸಹ ಅಲ್ಲಿ ಗೃಹ ನಿರ್ಮಾಣ ಮಂಡಲಿಯವರು ಸರಿಯಾದಂಥ

ಕೆಲಸವನ್ನು ಮಾಡಿಲ್ಲ. ಹಿಂದಿನ ಅಧ್ಯಕ್ಷರು ಇದ್ದಾಗ ೭೦–೮೦ ಎಕರೆ ಜಮೀನು ತೆಗೆದುಕೊಂಡು ಅಲ್ಲಿ ಗೃಹನಿರ್ಮಾಣ ಮಂಡಲಿಯವರು ಮನೆ ಕಟ್ಟಿಸಬೇಕೆಂದು ಹೇಳಿದ್ದರು. ಈಗ ಅದು ಏನಾಗಿದೆಯೋ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಈ ಸಂಬಂಧವಾಗಿ ಕೇಳಿಕೊಳ್ಳುತ್ತೇನೆ ದಯಮಾಡಿ ಅಲ್ಲಿ ಮನೆಗಳನ್ನು ಕಟ್ಟಿಸುವಂಥ ಯೋಜನೆ ಮಾಡಿ. ಇವೊತ್ತು ಮನೆಗಳನ್ನು ಯಾರೂ ಕಟ್ಟಲಿಕ್ಕೆ ಹೋಗುವುದಿಲ್ಲ ಸಿಮೆಂಟ್ ದುಬಾರಿಯಾಗಿದೆ. ಹಣ ಇರತಕ್ಕವರು ಮನೆಗಳನ್ನು ಕಟ್ಟಿಸದೇ ಇರುವು ದರಿಂದ ಹೊರಗಡೆಯಿಂದ ಬರತಕ್ಕವರಿಗೆ ಮನೆಗಳು ಬಾಡಿಗೆಗೆ ಸಿಕ್ಕುವುದಿಲ್ಲ. ಊರು ದೊಡ್ಡದು ಆದಮೇಲೆ ಒಂದು ಬಸ್ ಡಿಪೋ ಮಾಡಿದ್ದೇವೆ. ಬೇರೆ ಕಡೆಯಿಂದ, ಡ್ರೈವರ್‌ಗಳು ಹಾಗು ಇತರೇ ಅಧಿಕಾರಿಗಳು ದಾವಣಗೆರೆ ಬರಲಿಕ್ಕೆ ಅಂಜುತ್ತಿದ್ದಾರೆ ಏಕೆಂದರೆ ಅಲ್ಲಿ ಮನೆಗಳ ಬಾಡಿಗೆ ದುಬಾರಿ ಇದೆ. ಇವೊತ್ತು ಅಲ್ಲಿ ಬಸ್ ಡಿಪೋ ಆಗಿದ್ದರೂ ಕೂಡ ಅಲ್ಲಿಗೆ ಡ್ರೈವರ್‌ಗಳು ಬರಲಿಕ್ಕೆ ಹಿಂಜರಿಯುತ್ತಿದ್ದಾರೆ. ಕಾರಣ ಇಷ್ಟೇ ಅಲ್ಲಿ ಮನೆಗಳು ಬಾಡಿಗೆಗೆ ಸಿಕ್ಕುತ್ತಿಲ್ಲ. ಗೃಹ ನಿರ್ಮಾಣ ಮಂಡಲಿಯವರು ಬೆಳೆಯು ತಕ್ಕ ನಗರಗಳಿಗೆ ಯಾವುದೇ ವ್ಯತ್ಯಾಸ ಇಲ್ಲದೇ ಎಲ್ಲಾ ಕಡೆ ಗೃಹ ನಿರ್ಮಾಣ ಮಾಡತಕ್ಕ ಯೋಜನೆ ಮಾಡಬೇಕು ಇವೊತ್ತು ಕೊಳಚೆ ನಿರ್ಮೂಲನಾ ಮಂಡಲಿ ಇದೆ. ಇದು ಮಾಡಿರತಕ್ಕ ಕೆಲಸ ಏನು ಎಂದು ಇವೊತ್ತು ಪ್ರಶ್ನೆ ಮಾಡಬೇಕಾಗುತ್ತದೆ ದಾವಣಗೆರೆಯಲ್ಲಿ ಸುಮಾರು ೭೦ ಕೊಳಚೆ ಪ್ರದೇಶಗಳಿವೆ. ಇಲ್ಲಿಯವರೆಗೆ ಆ ಕೊಳಚೆ ಪ್ರದೇಶಗಳಲ್ಲಿ ಏನೊಂದು ಇಂಪ್ರೂವ್‌ಮೆಂಟ್ ಮಾಡಿಲ್ಲಿಲ್ಲ ಅಂದರೆ ಈ ಕೊಳಚೆ ನಿರ್ಮೂಲನ ಮಂಡಳಿ ಕೆಲಸ ಏನು. ಅದಕ್ಕೆ ಒದಗಿಸಿದಂಥ ಹಣ ಏನಾಯಿತು. ಅವರಿಗೆ ಬೇಕಾದಂಥ ಕಡೆ ಹಣ ಉಪಯೋಗಿಸಿಕೊಳ್ಳುತ್ತಾರೆ. ರಾಜ್ಯದಲ್ಲಿ ಎಲ್ಲಾ ಕಡೆ ಒಂದೇ ಸಮ ನಾಗಿ ಕೊಳಚೆ ನಿರ್ಮೂಲನೆ ಮಾಡಲಿಕ್ಕೆ ಒಂದು ಯೋಜನೆ ಮಾಡಿದ್ದೀರಾ ಅದರ ಬಗ್ಗೆ ಪ್ರಶ್ನೆ ಕೇಳಬೇಕಾ ಗಿದೆ. ಈ ಎಲ್ಲಾ ಪ್ರಶ್ನೆಗಳನ್ನು ನಾವು ನೋಡಿದರೆ ಎಲ್ಲೋ ಕೆಲವು ಕಡೆಗಳಲ್ಲಿ ಮಾಡಿಬಿಟ್ಟು ಅದನ್ನು ನೀವು ಇಡೀ ರಾಜ್ಯಕ್ಕೆ ಅನ್ವಯಿಸುತ್ತಿದ್ದೇವೆ ಎನ್ನತಕ್ಕ ಯೋಜನೆಯಲ್ಲಿ ಇದನ್ನು ನುಂಡಿಸಿದರೆ ಇದು ಯಾರಿಗೆ ಉಪಯೋಗವಾಗುತ್ತದೆ ?

ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಈಗ ೨೦ ಅಂಶಗಳ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ. ಆದರೆ ಈ ಕಾರ್ಯಕ್ರಮ ಯಾವ ರೀತಿ ಕಾರ್ಯಗತವಾಗುತ್ತಿದೆ ಎಂಬುದನ್ನು ಹಿರಿಯ ಸದಸ್ಯರಾದ ಮಾನ್ಯ ಜಿ. ರಾಮೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಇವತ್ತು ನಿಮ್ಮ ಅಧಿಕಾರಿಗಳು ಈ ೨೦ ಅಂಶಗಳ ಕಾರ್ಯಕ್ರಮವನ್ನು ಕಾರ್ಯಗತ ಮಾಡುವ ದಿಸೆಯಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿಲ್ಲ.

ಸ್ವಾಮಿ, ಉದಾಹರಣೆಗೆ ಹೇಳುವುದಾದರೆ, ನಮ್ಮ ದಾವಣಗೆರೆಯಲ್ಲಿ ಒಂದು ತೋಟಗಾರಿಕೆ ಇಲಾಖೆ ಇದೆ. ಈ ಇಲಾಖೆಗೆ ೧೦ ಎಕರೆ ಜಮೀನು ಇದೆ. ಇದರಲ್ಲಿ ತೆಂಗಿನ ಗಿಡಗಳನ್ನು ಹಾಕಿದ್ದಾರೆ. ಕಳೆದ ಸಾರಿ ಈ ತೆಂಗಿನ ಗಿಡದ ಫಸಲನ್ನು ಕೇವಲ ೧೦೦ ರೂ.ಗೆ ಹರಾಜು ಮಾಡಿದ್ದಾರೆ. ಆದರೆ ಆ ತೋಟಗಾರಿಕೆ ಇಲಾಖೆಯಲ್ಲಿ ತಜ್ಞರು ಇದ್ದುಕೊಂಡು ಅಷ್ಟೊಂದು ಜಮೀನಿನಲ್ಲಿ ತೆಂಗನ್ನು ಬೆಳೆದಿದ್ದು ಇಷ್ಟು ಕಡಿಮೆ ದುಡ್ಡಿಗೆ ಹರಾಜು ಮಾಡಿದ್ದಾರೆಂದರೆ ಇನ್ನು ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾ ರೆಂಬುದನ್ನು ತಾವೇ ಯೋಚನೆ ಮಾಡಿ ನೋಡಿ. ಇಂಥವರ ಹತ್ತಿರ ಯಾವ ರೈತ ತಾನೆ ಸಲಹೆ ಕೇಳಲು ಬರುತ್ತಾನೆ? ಇದೇ ಜಮೀನು ಬೇರೆ ಯಾವನಿಗಾದರೂ ರೈತನಿಗೆ ಇದ್ದಿದ್ದರೆ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದರು. ಆದ್ದರಿಂದ ನಿಮ್ಮ ಅಧಿಕಾರಿಗಳು ಯಾರೂ ಕೂಡ ಸರಿಯಾಗಿ ಗಮನ ಹರಿಸಿ ಕೆಲಸ ಮಾಡುತ್ತಿಲ್ಲ. ಈ ಅಧಿಕಾರಿಗಳು ತಮಗೆ ಬೇಕಾದಂಥ ರೀತಿಯಲ್ಲಿ ದನ, ಕರು, ಎಮ್ಮೆ, ಇವುಗಳನ್ನು ಬಹಳ ಚೆನ್ನಾಗಿ ಸಾಕಿಕೊಳ್ಳುತ್ತಾರೆ. ಸಾರ್ವಜನಿಕರಿಂದ ತೆಗೆದುಕೊಂಡ ಹಣವನ್ನು ತಾವು ಈ ರೀತಿ ಖರ್ಚು ಮಾಡುತ್ತಿದ್ದೀರಿ. ಈ ಇಲಾಖೆಯ ಮೇಲೆ ಮಂತ್ರಿಗಳ ಹತೋಟಿ ಏನಾದರೂ ಇದೆಯೆ? ಜಮೀನು ಇರತಕ್ಕ ರೈತರ ಮಕ್ಕಳಿಗೆ ಈ ಇಲಾಖೆಯಲ್ಲಿ ತರಬೇತಿ ಕೊಡುತ್ತಾರೆ. ಅಲ್ಲಿ ತರಬೇತಿ ಪಡೆಯತಕ್ಕವರಿಗೆ ೧೫೦ ರೂ. ಸ್ಟೈಪೆಂಡರಿ ಕೊಡುತ್ತಾರೆ. ನನಗೆ ತಿಳಿದ ಮಟ್ಟಿಗೆ ಹೇಳು ವುದಾದರೆ ಈ ತೋಟಗಾರಿಕೆ ಇಲಾಖೆಯಲ್ಲಿ ಯಾರು ಹುಡುಗರಿಗೆ ತರಬೇತಿ ಕೊಡುತ್ತಾರೋ ಅವರಿಗೇ ವಿಚಾರ ಸರಿಯಾಗಿ ಗೊತ್ತಿಲ್ಲ. ಇಂಥವರು ರೈತರ ಮಕ್ಕಳನ್ನು ಕರೆದುಕೊಂಡು ಹೋಗಿ ಗುಂಡಿ ತೆಗೆಸುವುದು, ಗೊಬ್ಬರ ಹಾಕಿಸುವುದು, ನೀರು ಹೊರಿಸುವುದು ಮಾಡುತ್ತಾರೆ...

ಶ್ರೀ ಎಂ. ಸಿ. ನಾಣಯ್ಯ.—ಸ್ವಾಮಿ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ಈ ಸದನದಲ್ಲಿ ಆಯವ್ಯಯ ಪಟ್ಟಿಯ ಮೇಲೆ ಯಾವ ಪುರುಷಾರ್ಥಕ್ಕೋಸ್ಕರ ನಾವು ಮಾತನಾಡಬೇಕೆಂದು ಕೇಳ ಬಯಸುತ್ತೇನೆ. ಈ ಬಡ್ಜೆಟ್ ವಿಚಾರದಲ್ಲಿ ಹಲವಾರು ಉಪಯುಕ್ತ ಸಲಹೆಗಳನ್ನು ಕೊಡುವ ಸಲುವಾಗಿ

ನಾವು ಇಲ್ಲಿ ಬಂದಿದ್ದೇವೆ. ಆದರೆ ಇಲ್ಲಿ ಮಾನ್ಯ ಅರ್ಥ ಮಂತ್ರಿಗಳಾಗಲಿ, ಇತರೇ, ಬೇರೆ ಮಂತ್ರಿಗಳಾಗಲಿ ಅಥವಾ ಇಲಾಖೆಗಳ ಅಧಿಕಾರಿಗಳಾಗಲಿ ಯಾರು ಕೂಡ ಇಲ್ಲ. ನಾವು ಕೊಡತಕ್ಕ ಸಲಹೆಗಳನ್ನು ಯಾರು ಬರೆದುಕೊಳ್ಳುತ್ತಾರೆ? ನಾವು ಇಲ್ಲಿ ಚರ್ಚೆ ಮಾಡುವಾಗ ಇಲಾಖೆಗಳ ಅಧಿಕಾರಿಗಳು ಈ ಸದನವನ್ನು ಇಷ್ಟೊಂದು ನಿಕೃಷ್ಟಭಾವನೆಯಿಂದ ಕಾಣುವುದಾದರೆ ನಾವಾದರೂ ಇಲ್ಲಿ ಏತಕ್ಕೆ ಮಾತನಾಡಬೇಕು? ಎಲ್ಲಾವರೂ ಹೊರಗಡೆ ಹೋಗುವುದು ಒಳ್ಳೆಯದು. ಈ ಸದನದ ಕೆಲಸಕ್ಕಿಂತ ಮಹತ್ವದ ಕೆಲಸ ಈ ವಿಧಾನಸೌಧದ ಇನ್ನೇ ಮಹಡಿಯಲ್ಲಿ ಏನಿದೆ. ಮಾನ್ಯ ಆರ್ಥಿಕ ಮಂತ್ರಿಯವರಿಗೆ ಏನಾದರೂ ತುರ್ತು ಕೆಲಸವಿದ್ದರೆ, ಬೇರೆ ಯಾವ ಮಂತ್ರಿಗಾದರೂ ತಮ್ಮ ಕೆಲಸವನ್ನು ಒಪ್ಪಿಸಿ ಹೋಗಬೇಕಾಗಿತ್ತು.

ಮಾನ್ಯ ಉಪಾಧ್ಯಕ್ಷರೆ, ತಾವು ದಯವಿಟ್ಟು ಸರ್ಕಾರೀ ಇಲಾಖೆಗಳ ಅಧಿಕಾರಿಗಳಿಗೆ ಹೇಳಿಕಳುಹಿಸಿ. ಅಧಿಕಾರಿಗಳೇ ಇಲ್ಲದಿದ್ದರೆ ನಾವು ಈ ೪ ಗೋಡೆಗಳಿಗೆ ಭಾಷಣ ಮಾಡಬೇಕೆ? ಇದಕ್ಕಿಂತಲೂ ಹೊರಗಡೆ ಲಾಂಜ್‌ನಲ್ಲಿ ಹೋಗಿ ಮಾತನಾಡುವುದು ಒಳ್ಳೆಯದಲ್ಲವೆ? ಇದು ಬಹಳ ಗಂಭೀರವಾದ ಪ್ರಶ್ನೆ. ಮಾನ್ಯ ಸದಸ್ಯರಿಗೆ ಅಗೌರವವನ್ನು ತೋರಿಸುವುದಾದರೆ ವಿರೋಧ ಪಕ್ಷದವರಾದ ನಾವು ಸಭಾತ್ಯಾಗ ಮಾಡ ಬೇಕಾಗುತ್ತದೆ. ತಾವು ಮೊದಲು ಅಧಿಕಾರಿಗಳಿಗೆ ಮೊದಲು ಹೇಳಿಕಳುಹಿಸಿ ಕರೆಸಿ. ಪರಿಸ್ಥಿತಿ ಈ ಮಟ್ಟಕ್ಕೆ ಹೋಗಿರುವುದಕ್ಕೆ ವಿಷಾದಿಸಿ ಇವರ ಬಗ್ಗೆ ತಾವು ಒಂದು ರೂಲಿಂಗ್ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ, ಯಾರಾದರೂ ಸಚಿವರು ಬರುತ್ತಾರೆಯೆ?

ಉಪಾಧ್ಯಕ್ಷರು,—ತಾವು ಪ್ರಾರಂಭಿಸಿ, ಸಚಿವರು ಈಗ ಬರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಚಿವರು ಫೈಲ್ಸ್ ಕ್ಲಿಯರ್‌ನ್ಸ್‌ಗೆ ಹೋಗಿದ್ದಾರೆ.

ಶ್ರೀ ಪಂಪಾಪತಿ.—ಸ್ವಾಮಿ, ನಮ್ಮ ದಾವಣಗೆರೆಯಲ್ಲಿರತಕ್ಕ ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುತ್ತಿದ್ದೆ. ಇವತ್ತು ಈ ತೋಟಗಾರಿಕೆ ಇಲಾಖೆ ಬಹಳ ಮಹತ್ತರವಾದ ಇಲಾಖೆ. ಆದರೆ ನಮ್ಮ ಸರ್ಕಾರ ಇದನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಸರಿಯಾಗಿ ಅರ್ಥಮಾಡಿಕೊಂಡರೆ ನಮ್ಮ ರಾಜ್ಯದಲ್ಲಿ ಉತ್ತಮ ಬೆಳೆಯನ್ನು ತೆಗೆಯುವುದಕ್ಕೆ ಸಾಧ್ಯ. ಈ ವ್ಯವಸಾಯ ಇಲಾಖೆಯಲ್ಲಿ ಅನುಭವ ಇರತಕ್ಕ ಅಧಿಕಾರಿಗಳಿಲ್ಲ. ಒಂದು ವೇಳೆ ಇದ್ದರೂ ಅಂಥವರಿಗೆ ಅವಕಾಶವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಈ ಇಲಾಖೆ ಇರುವುದರಿಂದ ಈ ಅವ್ಯವಸ್ಥೆ ಆಗಿದೆ.

ಮಾನ್ಯ ಉಪಾಧ್ಯಕ್ಷರೆ, ಇನ್ನು ಬಂಧೀಖಾನೆಯ ವಿಚಾರ ಹೇಳುವುದಾದರೆ, ಈ ಬಂಧೀಖಾನೆಯಲ್ಲಿ ಮಾಜಿ ಖೈದಿಗಳ ಸಂಘ ಇದೆ. ಆ ಸಂಘದ ಒಂದು ಸೊಸೈಟಿ ಇದೆ. ಆದರೆ ಆ ಸೊಸೈಟಿಯಲ್ಲಿ ಮಾಜಿ ಖೈದಿಗಳು ಯಾರೂ ಇಲ್ಲ. ಯಾರೋ ಕೆಲವು ಅಧಿಕಾರಿಗಳು ತಮಗೆ ಬೇಕಾದವರನ್ನು ಅಲ್ಲಿ ಇಟ್ಟು ಕೊಂಡಿದ್ದಾರೆ. ಸಾಮಾನ್ಯವಾಗಿ ೫-೧೦ ವರ್ಷ ಶಿಕ್ಷೆ ಅನುಭವಿಸಿಕೊಂಡು ಹೊರಗೆ ಬಂದರೆ ಅವರಿಗೆ ಎಲ್ಲೂ ಕೆಲಸ ಸಿಕ್ಕುವುದಿಲ್ಲ. ಆದ್ದರಿಂದ ಇಂಥವರು ಸಮಾಜದಲ್ಲಿ ಜೀವನ ನಡೆಸಲು ಅನುಕೂಲವಾಗು ವಂತೆ ಈ ಸೊಸೈಟಿಯನ್ನು ಹಿಂದಿನ ಮಹಾರಾಜರು ಪ್ರಾರಂಭಿಸಿದರು. ಈ ಸೊಸೈಟಿಯಲ್ಲಿ ಬಡಗಿ ಕೆಲಸ ಬಟ್ಟೆ ನೇಯುವುದು, ಚಾಪೆ ನೇಯುವುದು, ಕಂಬಳಿ ನೇಯುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಇಲ್ಲಿ ನನ್ನ ಹತ್ತಿರ ಒಂದು ಫೋಟೋ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇವತ್ತು ಏನಾಗಿದೆ ಎಂದರೆ ಈ ಖೈದಿಗಳ ಸಂಘದ ಕಟ್ಟಡ ಏನಿದೆ ಇದರಲ್ಲಿ ಯಾವ ಮಾಜಿ ಖೈದಿಗಳೂ ಇಲ್ಲ. ಆ ಕಟ್ಟಡದಲ್ಲಿ ಯಾವ ಕೆಲಸವೂ ನಡೆಯುತ್ತಿಲ್ಲ. ಅದನ್ನು ಬೇರೆ ಯಾರಿಗೋ ಬಾಡಿಗೆಗೆ ಕೊಟ್ಟು ಬಂದ ಹಣವನ್ನು ಅಧಿಕಾರಿಗಳೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಬಾಡಿಗೆ ಹಣವನ್ನು ವಸೂಲ್ಮಾಡಿ ಏನು ಮಾಡಲಾಗುತ್ತಿದೆ ಎಂಬ ಬಗ್ಗೆ ಲೆಕ್ಕವನ್ನೂ ಕೂಡ ಇಟ್ಟಿಲ್ಲ. ಅಲ್ಲದೆ ಇದನ್ನು ಕೇಳುವವರೂ ಯಾರು ಇಲ್ಲ. ಖೈದಿಗಳಿಗೆ ಉಪಯೋಗವಾಗುವಂಥ ಒಳ್ಳೆಯ ಯೋಜನೆಗಳನ್ನು ನಮ್ಮ ಸರ್ಕಾರದವರು ಹಾಕಿಕೊಳ್ಳುವುದಾದರೆ ಆ ಖೈದಿಗಳು ಬಹಳ ಒಳ್ಳೆಯ ಪ್ರಜೆಗಳಾಗಿ ಸಮಾಜ ದಲ್ಲಿ ಬದುಕುತ್ತಾರೆ. ಇಲ್ಲದೇ ಹೋದರೆ ಅವರನ್ನು ಪೋಲೀಸರು ಎಲ್ಲಾದರೂ ಕಂಡರೆ ಕೂಡಲೇ ಹಿಡಿದುಕೊಂಡು ಬಂದು ಮತ್ತೆ ಜೈಲಿಗೆ ಹಾಕುತ್ತಾರೆ.

ಆದ್ದರಿಂದ ನಾನಾದರೂ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಹಿಂದಿನ ಮಹಾರಾಜರು ೧೯೩೭ನೇ ಇಸವಿಯಲ್ಲಿ ಮಾಜಿ ಖೈದಿಗಳಿಗೋಸ್ಕರ ಏನು ಕಟ್ಟಡವನ್ನು ಕಟ್ಟಿಸಿದ್ದಾರೆ ಅದರ ಉಪಯೋಗ ವನ್ನು ಈ ಖೈದಿಗಳಿಗೆ ಒದಗಿಸಿ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಇನ್ನು ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಸಾಮಾನ್ಯವಾಗಿ ಯಾರಾದರೂ ಒಬ್ಬ ಖಾಸಗಿಯವನು ಒಂದು ಬಸ್ಸನ್ನು ಇಟ್ಟರೆ ೨-೩ ವರ್ಷಗಳಲ್ಲೇ ಇನ್ನೊಂದು ಬಸ್ಸನ್ನು ತೆಗೆದುಕೊಳ್ಳುತ್ತಾನೆ. ಆದರೆ ನಮ್ಮ ಸಾರಿಗೆ ಸಂಸ್ಥೆಯಲ್ಲಿ ಸಾವಿರಾರು ಬಸ್ಸುಗಳಿದ್ದರೂ ಬರೀ ನಷ್ಟದಲ್ಲೇ ನಡೆಯುತ್ತಿದೆ. ಈ ರೀತಿ ನಷ್ಟ ಏತಕ್ಕೆ ಆಗುತ್ತಿದೆ ಎನ್ನುವ ಬಗ್ಗೆ ಒಂದು ಸಾರಿ ಪೇಪರ್‌ನಲ್ಲೂ ಬಂದಿದೆ. ಇವತ್ತು ನಾನು ಆ ಪತ್ರಿಕೆಯನ್ನು ತರಲಿಲ್ಲ. ತಮಗೆ ಬೇಕಾದರೆ ತಂದುಕೊಡುತ್ತೇನೆ. ಅದು ಏನೆಂದರೆ ಕೋಲಾರದ ಡಿಪೋದಲ್ಲಿ ಒಬ್ಬ ಮ್ಯಾನೇಜರ್ ಮೂಲಕ ಈ ಅವ್ಯವಹಾರ, ಅಕ್ರಮಗಳು ನಡೆಯುತ್ತಿವೆಯಂತೆ. ಡೂಪ್ಲಿಕೇಟ್ ಟಿಕೆಟ್‌ಗಳನ್ನು ಪ್ರಿಂಟ್ ಮಾಡಿ ಉಪಯೋಗಿಸುತ್ತಿದ್ದಾರಂತೆ. ಇದು ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂದಿದೆ. ಆದರೂ ಅವರ ಮೇಲೆ ಸರ್ಕಾರದವರು ಯಾವುದೇ ಉಗ್ರವಾದ ಕ್ರಮವನ್ನೂ ತೆಗೆದುಕೊಂಡಿಲ್ಲ.

ಈವತ್ತಿನ ದಿವಸ ಈ ರೀತಿಯಾಗಿ ಅವ್ಯವಹಾರ ನಡೆಯುತ್ತಿದೆ. ಈ ರೀತಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದವರಿಗೆ ಗೊತ್ತಿದ್ದಾಗ್ಯೂ ಕೂಡ ಇದನ್ನು ತಹಬಂದಿಗೆ ತರುವುದಕ್ಕೆ ಪ್ರಯತ್ನ ಮಾಡದಿದ್ದರೆ ಈ ಒಂದು ಇಲಾಖೆಯಿಂದ ಲಾಭಬರುವುದಾದರು ಹೇಗೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ವರ್ಷ ವರ್ಷಕ್ಕೂ ಖಾಸಗಿ ಬಸ್ ಮಾಲೀಕರಿಗಿಂತಲೂ ಸರ್ಕಾರಿ ಬಸ್‌ಗಳಲ್ಲಿ ಬೆಲೆಯನ್ನು ಜಾಸ್ತಿಮಾಡಿಕೊಂಡೇ ಹೋಗುತ್ತಿರುತ್ತಾರೆ. ಆದ್ದರಿಂದ ಇಂಥ ಎಲ್ಲ ವಿಷಯಗಳನ್ನು ಕೂಡ ತಾವು ತಡೆಗಟ್ಟುವುದಾದರೆ ಈವತ್ತಿನ ದಿವಸ ಕೊರತೆ ಬಡ್ಜೆಟ್ ಎಂದು ಏನು ಇರುತ್ತದೆ ಅದು ಕೊರತೆಯಾಗುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುತ್ತೇನೆ. ಕೊರತೆಯ ಬಡ್ಜೆಟ್ ಇಟ್ಟುಕೊಂಡು ಜನರ ಮೇಲೆ ಹೊರೆಯನ್ನು ಹೀಗೆ ಹೊರಿಸತಕ್ಕಂಥ ವ್ಯವಸ್ಥೆ ಏನು ಇದೆ ಈ ವ್ಯವಸ್ಥೆಯನ್ನು ತಡೆಯಬೇಕಾದರೆ ಇಂಥ ಹಲವಾರು ಸಮಸ್ಯೆಗಳನ್ನು ಸರಿಯಾದಂಥ ರೀತಿಯಲ್ಲಿ ವಿಚಾರಮಾಡಿ ಕೆಲಸ ಮಾಡಿದರೆ ಪರಿಹರಿಸಲು ಸಾಧ್ಯವಾಗುತ್ತದೆ. ಮಾನ್ಯ ಅಧ್ಯಕ್ಷರೇ ಈವತ್ತು ನಮ್ಮ ಸಾಮಾನ್ಯ ರೈತರ ಮೇಲೆ ಹಾಕಿರತಕ್ಕಂಥ ತೆರಿಗೆಗಳ ಬಗ್ಗೆ ಮಾನ್ಯ ದೇವೇಗೌಡರು ಪ್ರಸ್ತಾಪ ಮಾಡಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅಶ್ವಾಸನೆಯನ್ನು ಕೊಟ್ಟಿದ್ದಾರೆ. ರೈತರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿರುತ್ತಾರೋ ಅದೆಲ್ಲವನ್ನೂ ಜಾಗ್ರತೆಯಾಗಿ ಕೊಡಬೇಕು. ತಾವು ವರದಿಯಲ್ಲಿ ಕೊಟ್ಟಿರತಕ್ಕಂಥ ಕೆಲವು ಅಂಶಗಳನ್ನು ನಾವು ಒಪ್ಪಿಕೊಂಡರೂ ಕೂಡ ಅನೇಕ ಅಂಶಗಳು ಇಲ್ಲದಂತಾಗಿದೆ. ಅಂಥ ಹಲವಾರು ಸಮಸ್ಯೆಗಳನ್ನು ಹೇಳಿದ್ದೀರಿ. ನಮಗೆ ಇರತಕ್ಕಂಥ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಈವತ್ತು ಕೆಲಸ ಮಾಡತಕ್ಕಂಥವರು ಯಾರೆಂದರೆ ಅಧ್ಯಕ್ಷರೇ ಅಲ್ಲಿ ಹಿಂದುಳಿದಿರತಕ್ಕಂಥ ಜನಾಂಗದವರು, ಹರಿಜನರು ಲಂಬಾಣಿಗರು, ಬೋವಿ ಜನಾಂಗದವರು, ನಾಯಕರು. ಇಂಥ ಜನಾಂಗದವರಿಗೆ ಯಾವ ಸಹಾಯವು ದೊರೆಯುತ್ತಿಲ್ಲ. ಇಂಥ ಜನಾಂಗದವರಿಗೆ ಸಹಾಯ ಮಾಡಿದರೆ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅನೇಕ ಜನರು ಮನೆಗಳು ಇಲ್ಲದಂಥವರು ಪ್ರೊನ್‌ಷನ್ ಹೊರಟು ವಿನಂತಿ ಮಾಡಿಕೊಂಡರೂ ಸಹ ಸರ್ಕಾರದವರು ಇವರ ಬಗ್ಗೆ ಯೋಚನೆಯನ್ನು ಮಾಡುತ್ತಿಲ್ಲ. ಅದ್ದರಿಂದ ಈವತ್ತಿನ ದಿವಸ ಸಾಮಾನ್ಯ ಜನರು, ಹಿಂದುಳಿದ ಜನರ ಕಲ್ಯಾಣಕ್ಕಾಗಿ ಸರ್ಕಾರ ವಿಚಾರ ಮಾಡಬೇಕು. ಆ ರೀತಿ ಯೋಚನೆ ಮಾಡಿದರೆ ಮಾತ್ರ ಬಡತನವನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಸಮ್ಮನೆ ಘೋಷಣೆ ಮಾಡುವುದರಿಂದ ಯಾವ ಸಾಧನೆಯನ್ನು ಮಾಡಿದಂತಾಗುವುದಿಲ್ಲ ಅದ್ದರಿಂದ ಸರ್ಕಾರ ಈ ಎಲ್ಲ ವಿಷಯಗಳನ್ನು ಕೂಡ ಗಮನದಲ್ಲಿ ತಂದುಕೊಂಡು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳಿ ನನಗೆ ಇಲ್ಲಿಯವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI K. BHASKAR NAIDU (Bellary). —Hon. Deputy Speaker, I rise before you to speak on the budget estimates mentioned in the speech of Sri M. Veerappa Moily, Minister for Finance and Tourism. At the outset. I would like to call this budget, a brilliant budget but I have a criticism, being the ruling party member that, being on election year, I thought he would do us some favour which is the usual way for the Government to give promises during election year. But I really congratulate Sri Veerappa Moily for his good and fair

judgement because all party members can fight and say equally. He did not say that he would give this and that. Because of this we are at disadvantageous position. Anyway, he has done some good things. I am really happy that the plan size has increased from Rs. 419 crores to 470 crores. Rs. 30 crores exclusively for the Cauvery Basin. It is a good thing. I will also congratulate him that he has said special attention being paid to the removal of regional imbalances, which has played a havrc in our state. At least now it has been realised by the hon Chief Minister that the people have suffered in Gulbarga division. I am very happy to say that they have allotted Rs. 300 anc odd crores for our division which belongs to you and me. But the only thing is that it should come to shape immediately. why I say immediately is because the improved drinking water has been coming from the Dam. Mr. Muthina pendimath was talking about drinking water and it should be a reality because drinking water for 30 years should not be a myth. Inspite of the foundation stone laid, the Hon. Finance Minister Sri Moily is doing his best to see that it is started in a month. I once again think the Chief Minister for the consideration he has shown towards the Gulbarga Division which is nothing but like a Saharadesert. At least they have realised that something must be done.

The revised estimate for 1981-82 indicates substantial increase in revenue and revenue surplus consequent to the increase in collecti on in commercial tax and other things. There should be some improvement in this. Though the people do not have a square Meal a day, they only want entertainment. I find that in no time any picture has starved for want of picture goers. You can find queues and queues tanding there but I say sir there is a lot of malpractices in the picture houses. The checking portion it has been given to most of the police force in Municipalities. It seems they do not take real action about it. Sir, why I say this is, after all the removal of octroi is a blunder that has been committed by the last Government. It has left the municipalities high and dry. The only reason they gave was that of corruption. I cannot understand that word. Corruption n everywhere. why it should only be refered to Municipalities Becaus of Octroi, to-day's position is such that it would not have alum fos water. Sri Nanaiah was speaking about this. I know they cannot noe even pay the salary for the staff. This has become the story. I woulr suggest that at least some cities must go back to the Octroi systemit

MR. DEPUTY SPEAKER.—It is already 12 Noon. You take fiftee. more minutes and finish.

SRI BHASKAR NAIDU.—I need just half-an hour to complete.

MR. DEPUTY SPEAKER.—You can continue your speech at 3-00 O' Clock.

At 12 noon

MR. DEPUTY SPEAKER.—This House stands adjourned to meet at 3 p.M. to-day afternoon.

(The House adjourned at One minute past Twelve of the Clock to meet at Three of the Clock)

(*The House reassembled at 3-12 p.m*)

(Mr Speaker in the Chair)

MR. SPEAKER.—I call upon hon. Member Sri K. Bhaskar Naidu to resume his speech.

SRI K. BHASKAR NAIDU.—Sir, if you are satisfied with attendance in the treasury benches and the official gallery I have no objection to continue my speech.

MR. SPEAKER.—Please commence your speech.

SRI K. BHASKAR NAIDU.—Thank you Sir. I won't like to insist you about their presence. Now, I wish the Finance Minister were present here because I have to say to something on the State Finance and I have to say something on the Co-operation. I am not going to speak on Rural Development, Transport and other things. Anyway, Sir, continuing my speech on the budget, I think I was talking about the fraud that is being done by the cinema owners and the loss to the Government, we find people stand in the queues for 4-5 shows. Electricity is being supplied to them without any cut. Even important industries suffer from electricity cut but the cinema industry runs all at the shows without any sort of electricity cut. But at the same time if we see the tax collection from this industry it is very poor. No doubt you increase 2% tax every year but I do not know what collection is being done so far as entertainment tax is concerned. As far as I am concerned I definitely say that there is lot of fraud being committed by these big cinema owners. They sell and resell the tickets and avoid sales tax thus windling the money that should come to the corpus of the Government.

Sir, I had been telling about small concession that has been shown in this budget particularly surcharge and sales-tax on kerosen drugs, cereals. I wish the Finance Minister to be present here because I have to say something about the dearness allowance. Now you have abolished the octroi. By this I tell you the Municipalities are not able to survive. They have no income. So, they are not able to pay the dearness allowance announced to its employees. The practice is whenever it is ordered it has to be given to the Municipal Staff also. when they cannot give the salary itself, I do

not know how they are going to increase Dearness Allowence and because they give a dose of increase of D.A. every third or fourth month it is very difficult for the municipalities to pay by themselves Once again, I would say that you may call barbaric tax or whatever tax it is, perhaps to please a few rich section of the people you have removed. But, here in the budget you have introduced once again, the old toll-gate system of collecting money on the bridges. You know it is difficult for you to bring in a tax, but it is easy to remove it. To bring in a tax, I know that the Government would feel it difficult. In these days when you talk of corruption, corruption every day in and day out a few rupees of loss in the octroi in the munici-palities would not have made much. I do not know why it is removed. The citizens depend upon the municipalities for their health. water, and sanitary conditions. Now, it has almost come to a stop. I remember one night within one minute by prestige has gone up. In railways they never wanted third class citizen. So, they removed third class and called it second class. All of a sudden overnight we became the second class citizens. Son, my status has increased. why I am telling is that it is something like removing octroi and introdsing a new tax. I cannot understand the way in which the people think of it. The other day Sri Rame Gowda was talking about adulteration. Adulteration is not as dangerous as pollution in our country. By pollution it is not the rich man who is hit. It is the poor man thathas to suffer right from the morning. The very food that he cooks is polluted, I mean water. God has given us beautiful rivers. we have in our State the Kali, the Tunga Bhadra, the Kabini, the Cauvery. But, what is happening? We have polluted them. Polluted, to what extent? What is happening to the people who drink this water? Go to Harihar Polyfibres. A rich man has established a fabry. Some day he comes here and takes a permit. What has happened to Kali Nadi? Godess Kali is known as furious. Actually the water has turned completely into black. In a small country like Israel where they have also paper machines and paper factories and other things, before they could obtain a licence from the Government what is the most important thing is that they ask him as to where he leaves the waste water. First he is asked whether the provision is made in the factory that the waste water is left. In Israel they have a different system of agriculture where they pump the water over the hillock. plains and forest. The pipe-line carries all the water to the big forest and they are only allowed to cut after 30 years. But, here to my horros I thought it was only polyfibres and Dandeli Paper Mills. But, it has come to my notice that in Kabini you have permitted a silk factory. What is it? I cannot understand, knowing what damage the pollution is doing on the poor people. If I remember correctly Rs. 8 crores or

so have been set for prevention and control of diseases. This amount is not good enough even for one day if you are going to allow this pollution to go on like this. who are the people who are polluting our State? It is only men who are in power. Rivars are being polluted because overnight permits are given for the establishment of the factories. who is the sufferrer? It is the poor person who drinks water The rich persons have been given licence also to kill people in their way. If I had any power with me I would have booked these people, and punished. They do not deserve any sympathy. what is the use of pity? Are you justified in doing this? I would have asked the Health Minister is this the way he wants to keep the health of the vulnerable section of our country?

Sir, I had been asking for some particulars from the Electricity Minister, because I wanted to pay compliments to him. But, he has not given me anything. I am very happy that at least they have made earnest effect for collecting tariff from the rich factories. But, if the poor-man just fails to pay Rs. 2 of meter charges his connection is removed and he has to go without even a single lig t that is given to him. But, I know a man who has a factory down my place has arrears in lakhs and crores. No interest was charged for him. If MLAs were to be dishonest because we indulge perhaps in a small cup of coffee here and there, but these guys can save Rs. 40 lakhs in one factory and for how many terms and how many people can contest in election? They can throw moneys like that, because the system of voting is by men and a poor man is naturally tempted by money. What happens if he accumlates Rs. 40 lakhs every year. For five years it is something like Rs. 2 crores. Then anybody can become an MLA. It is not very difficult, because our people have not reached the stage of understanding what the voting is. Naturally he comes here. another sort of investment for making money. So, in this way we have been only encouraging people. That is why I asked the Electricity Minister to give me some particulars. well, he has not given. I do not know the rsason. Anyway it is the Finance Minister.............

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಬಹಳ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕೈಗಾರಿಕೊಧ್ಯಮಿಯಿಂದ ಸುಮಾರು ೪೦ ಲಕ್ಷ ರೂಪಾಯಿಗಳ ವಿದ್ಯುತ್ಚಕ್ತಿಯು ಬಾಕಿ ಬರಬೇಕೆಂದು ಹೇಳಿದ್ದಾರೆ. ಮತ್ತು ಶ್ರೀಮಾನ್ ಬಸವಲಿಂಗಪ್ಪನವರು ಮಾತನಾಡುವಾಗ ೨-೩-ವಿಷಯಗಳನ್ನು ಹೇಳಿದ್ದಾರೆ. ಆರಣ್ಯ ಇಲಾಖೆಯ ಒಬ್ಬ ಕಂಟ್ರಾಕ್ಟ್ ದಾರರು ಸುಮಾರು ೧೨ ಕೋಟಿ ರೂಪಾಯಿಗಳ ಬಾಕಿ ಇದೆಯೆಂದು ಹೇಳಿದ್ದಾರೆ. ಶಿವಮೊಗ್ಗ ಫುಡ್ ಕಾರ್ಪೋರೇಷನ್ ಮುಂಖೇನ ೫ ಕೋಟಿ ರೂಪಾಯಿಗಳ ಬಾಕಿ ಇದೆಯೆಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಗಮನಕ್ಕೆ ಬಂದಿದೆಯೆಂದು ಹೇಳಿದರು. ಆದರೆ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕಂತಹ ರೈತರು ೫೦೦—೧೦೦೦ ರೂಪಾಯಿಗಳು ಕಟ್ಟಬೇಕಾಗಿದ್ದರೆ ಅದನ್ನು ಸರ್ಕಾರದವರು ಉಗ್ರವಾಗಿಕ್ರಮ ತೆಗೆದುಕೊಂಡು ವಸೂಲು ಮಾಡುತ್ತಿದ್ದಾರೆ. ಬಹುಶಃ ಇದಕ್ಕಿಂತ ಗುರುತರವಾದಂಥ

ಈ ದಿವಸ ವಿಷಯವು ತೆಗೆದುಕೊಂಡಿಲ್ಲ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಈ ಸಭೆಗೆ ಕರಾರುವಾಕ್ಕಾಗಿ ಅಥವಾ ಯಾವತ್ತು ಉತ್ತರ ಕೊಡುತ್ತಾರೆ, ಸರ್ಕಾರದ ಪತಿಯಿಂದ ಉತ್ತರ ಕೊಡುವುದಕ್ಕೆ ತಾವು ಆದೇಶ ಕೊಡಬೇಕು, ಮಾನ್ಯ ಅರ್ಥ ಸಚಿವರು ಸಭೆಯಲ್ಲಿಲ್ಲ: ಆದ್ದರಿಂದ ತಾವು ಸೂಚನೆ ಕೊಡುವುದುಸೂಕ್ತ ಎಂದು ನಾನು ಭಾವಿಸಿಕೊಳ್ಳುತ್ತೇನೆ.

SRI K. BHASKAR NAIDU.—The hon. Member Sri B. Basavalingappa was a bit critical about the officials, He said that the entire blame should go to officials. I compliment most of the officers. Most of them are good, able and efficient, The other day, my learned friend Sri H. D. Devegowda correctly said.

"ಸವಾರಿ ಮಾಡುವವನ ಕೈಯಲ್ಲಿ ಲಗಾಮು ಇದ್ದರೆ ಕುದುರೆ ಹೇಗೆ ತಿರುಗಬೇಕು ಅಂದರೆ ಹಾಗೆ ತಿರುಗುತ್ತದೆ.

Therefore, it purely depends on the mon who is controlling the Government. Well, the hon. Member Sri B. Basavalingappa after a decade being in the Ministry occupying certain very important portfolios has this to say, I am very sorry Sir,

ಒಬ್ಬ ಸದಸ್ಯರು.—ಮಾನ್ಯ ಭಾಸ್ಕರನಾಯುಡ್ಡರವರು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತಾರೆ, ಕನ್ನಡದಲ್ಲಿ ಮಾತನಾಡಲಿ.

ಶ್ರೀ ಕೆ. ಭಾಸ್ಕರನಾಯುಡು.—ಈ ರಾಜ್ಯದಲ್ಲಿ ಕನ್ನಡರಿಗೆ ಎಷ್ಟು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇದೆ ಎಷ್ಟು ಫ್ಯಾಕ್ಟರೀಸ್ ಇದೆಯೆಂದು ಗುರುತಿಸಿದ್ದೀರಾ. ಕನ್ನಡ ಮಾತನಾಡಿದರೆ ಊಟ ಸಿಗುತ್ತದೆಯೇ ಕನ್ನಡದವರು ಯಾವ ಫ್ಯಾಕ್ಟರಿಯಲ್ಲೂ ಇರಲಿಲ್ಲ ಎಲ್ಲಾ ಉತ್ತರ ಇಂಡಿಯಾದಿಂದ ಬಂದಿದ್ದಾರೆ, ಅದನ್ನು ಗಮನಿಸಿದ್ದೀರಾ, ಜಾನ್ಸನ್ ಕಂಪನಿ ಇದೆಯೆಲ್ಲಾ, ಅದರ ಏಜೆನ್ಸಿ ಕೂಡ ಉತ್ತರ ಇಂಡಿಯಾದವಲ್ಲಿದೆ.

MR. SPEAKER.—Do not switch over to other language. A Member should speak in a language in which he starts

SRI K. BHASKAR NAIDU.—Therefore Sir, 'Johnson & Johnson' a Company which produces heaters and other things in Karnataka State. They do not have our own Kannada representatives. A small heater which may be costing them hardly about Rs. 100/-, they are charging about Rs. 1,000/- They have monopolised the trade. Our people only think of language Language could be in a sign. Language could be in love. I would just wink at a woman and make her understand. That is all language. It is not necessary that I should talk in a particular language. The only thing is I must be able to communicate what I want to say. Have you thought of a Kannadiga having a factory in your own State ? Why not we give some rights to Kannadigas ? Let the Government come forward to help them. They do not do that.

Lastly Sir. I would speak only on one subject. Sir, there is a Bank known as 'Bellary District Central Co-oparative Bank'. I may be given some time to explain about the fraud in that Bank. It is a wonderful thing to know how one individual could swindle to tune

of Rs. forty to fifty lakhs. If I refer the name you may say that he is an individual. But, I have got records here and I do not think that mentioning his name will be wrong.

This is a report from the Joint Registrar of Co-operative Societies wherein he has clearly said thus :

> "Rs. six lakhs and odd that has been swindled by the society must be collected and the concerned people must be booked."

What action has been taken Sir, I do not know, I do not understand, how this matter has been kept in Almirah for all these days. The Registrar of Co-operative Societies has categorically said in his final concluding remarks that.

> "Action must be taken against all the Directors".

Perhaps in the Indian Criminal Code, there may not be any section. A man goes from here to the BDCC Bank just because he had political power and he became the President of the Bank. He gives loan to the people. He says. you go and buy fertilisers from a particular dealer in fertiliser. After a thorough search, the concerned people and the police could not find that fertiliser dealer at all. The Registrar has said that this is a new invention by this man and this has to be collected,

Further he observes thus ;

> "Sri So & So, the President of the BDCC Bank, Hospet shall be proceeded against for showing favouritism and flouting the procedures altogether. The concerned authorities will look at the detailed probe into the affairs of the BDCC Bank."

Then Sir, in BDCC Bank another new thing has been created, "Mine Owners" Association". This gentleman is the President of the Mine Owners' Association. Here it is said thus ;

> "Four Members of the Mine Owners Association and the Second Signatory, is a member of the Association and who is also BDCC Bank President"———

This is going on in our State. Favourtism, nepotism, corruption, everything has been continuing from that day to this day, But compared to this present day, it is nothing, Rs. Elven lakhs were taken. I have got the photostat copies. These papers were kept in almirah for six years and afterwords, they said that the time was barrad and the cannot, claim it. It has been accumulated and when I asked them last time, they said it was Rs.

14 lakhs. Here are they necessary papers: These are all big peeple wh sare involved in this swindling of money. They were all once repr eenting the people. It was all with the help of the high-ups in the Government at that time.

SRI MICHAEL B. FERNANDEZ.-That is how, under different names. the Ruling party has survived during the last twenty five years all over the country. The Congress party has survived through corruption of this kind.

SRI K. BHASKAR NAIDU.—I am afraid that in these days he claims to be the leader of your party That is why I told you to be very careful. But a good thing he does is that he is a Janatha party man, his son is a Congressman and his wife............

MR. SPEAKERr—You are trying to bring son, wife............

SRI K. BHASKAR NAIDU.— Sir, it is there.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ಭಾಸ್ಕರ ನಾಯ್ಡುರವರು ಏನಾದರೂ ಬಹಳ ಸರಳವಾದ ಮನೋಭಾವನೆಯಿಂದ ಹೇಳಿದರೋ ಗೊತ್ತಿಲ್ಲ. ನಮ್ಮವರು ಎಂದು ಹೇಳಿದರು. ಆದರೆ ನಾನು ವಿರೋಧ ಪಕ್ಷದ ಮುಖಂಡನಾಗಿದ್ದಾಗ ಇಂಥಾ ವಿಷಯ ನನ್ನ ಗಮನಕ್ಕೆ ಬಂದಿರಲಿಲ್ಲ. ಇಂಥಾ ಹಲವಾರು ವಿಷಯಗಳು ನಡೆದಿರಬಹುದು, ಅಂಥವುಗಳು ನಮ್ಮ ಗಮನಕ್ಕೆ ಬಾರದಿರ ಬಹುದು. ಯಾವುದೇ ಪಾರ್ಟಿಯವರು ಆ ರೀತಿಯ ತಪ್ಪು ಮಾಡಿರಲಿ, ನಾನು ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿಯಾದ ವಿವರಣೆಯನ್ನು ಕೊಡುವಾಗ ಸರಿಯಾದ ರೀತಿಯಲ್ಲಿ ಕೊಡುವುದು ಒಳ್ಳೆಯದು ತಪ್ಪು ಕಲ್ಪನೆಗೆ ಅವಕಾಶ ಕೊಡುವುದು ಬೇಡ, ಶ್ರೀ ಬೇಗಾನೆ ರಾಮಯ್ಯನವರು, ಬಳ್ಳಾರಿ ಜಿಲ್ಲೆಯವರು, ನಮ್ಮವರು ಎಂದು ಕಲ್ಪನೆಗೆ ಅವಕಾಶಕೊಡುವುದು ಬೇಡ. ಏತಕ್ಕೆಂದರೆ ನಾನು ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಯಾವುದೇ ಪಕ್ಷಕ್ಕೆ ಸೇರಿದಂಥವರು ಇಂಥಾ ದರೋಡೆ ಮಾಡಿದಾಗ ಅದನ್ನು ಯಾವ ಸದಸ್ಯರೂ ಕೂಡ ಸಮರ್ಥಿಸುವುದಕ್ಕೆ ಹೋಗಲಾರದು, ಸರ್ಕಾರ ಇಂಥವರ ಬಗೆ ಕ್ರಮ ತೆಗೆದುಕೊಳ್ಳುವುದಾದರೆ ಯಾರೂ ಅದಕ್ಕೆ ಅಡ್ಡಿ ಬರುವುದಕ್ಕೆ ಸಾಧ್ಯವಿಲ್ಲ. ೬ ಲಕ್ಷ ೮ ಲಕ್ಷವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದರು...

SRI K. BHASKAR NAIDU.—Including interest, it has now become Rs. fourteen lakhs These are the three papers of On-demand pronote dated 19th July 1964. I have got the photostat copies also.

ಅಧ್ಯಕ್ಷರು.—ಅದು ಯಾರು ಎಂಬುದನ್ನು ಹೇಳಿ. ನಿಮ್ಮವರು ಎಂದು ಹೇಳುತ್ತಿದ್ದಿರಲ್ಲಾ ?

ಶ್ರೀ ಕೆ. ಭಾಸ್ಕರ ನಾಯ್ಡು.—ನಿಮ್ಮವರೇ ಎಂದರೆ, ಕಾಂಗ್ರೆಸ್ ಪಾರ್ಟಿಯಲ್ಲಿ ಬೆಳೆದು ಬಂದಂಥವರು ಇವತ್ತು ನಿಮ್ಮ ಜನತಾ ಪಾರ್ಟಿಯೊಳಗೆ ಸೇರಿದ್ದಾರೆ ನೀವು ಅವರ ಒಳಗೆ ಸೇರಿದ್ದೀರಿ ಎಂದು ಹೇಳುತ್ತಿದ್ದೇನೆ. ಅದಕ್ಕೇ ನಿಮ್ಮವರು ಎಂದು ಹೇಳಿದ್ದು. ಅಂಥವರನ್ನೆಲ್ಲಾ ನೀವು ಸೇರಿಸಿ ಕೊಂಡಿದ್ದೀರಿ. ಅವರ ಹೆಸರನ್ನು ಹೇಳಬೇಕೆಂದರೆ Sir. I can give you the names. One is Sri V. Nagappa, who was M. L. A. for three terms. Another person is Sri Allam Karibasappa and then Sri M. Lingoji Rao who is expired now. There is one more person and he is by name Sri K. Channabasappa. But I don't know him. I am passing three papers to the Government through the Chair and let me see what the Government is going to do in this respect.

Then Sir. Hon'ble Member Sri Ramappa raised another important issue involving Rs. 12 lakhs. That is about Hirehadagali Suga

factory which has been liquidated now. In the course of the C. O. D enquiry, the concerned person somehow or the other got out of it. You know what happens in a local police enquiry The Registrar has used all the strong language but finally ಎಳ್ಳು ನೀರು ಬಿಟ್ಟ ಹಾಗೆ ಬಿಟ್ಟು ಬಿಟ್ಟರು. Do you know what he has written ?

> "The accumulated loss year by year is Rs. twelve lakhs sixty seven thousand and seventy eight thus wiping out the entire working capital of the society. The audit reports depict the dismal picture of mismanagement, maladministration and misapplication."

He has used these words barring the particular word 'Misappropro-ation.' This case is about Rs, twelve lakhs. So, totally 14+12+6=32 lakhs. About this Hirehadagali Sugar factory, here also the poor farmers are the victims. Their bills have not been paid though they have supplied Sugarcane long back. The enquiry was ordered and one small employee who was dismissed and one small director were brought to book. The architect, the villain is left scotfree to roam about in the streets with all the luxury. The amount swindled by him comes to Rs. six lakhs. Then regarding misappropriation of funds belonging to Basaragodu, a man, who is the director repre senting the B. D. C C. was involved. Once again the prosecution went against a very small man and left this gentleman scotfree. Sir, regarding education, unfortunately we came from Madras State and in Madras they never got a college by the Government. But there were Christian Institutions. But there is a particular 'Sangha' which is a dominating feature of education in Bellary with all the help from the Government. They never allowed any other college or school to come up with a particular motive. The have been patronised. I have got a letter here. Chief Minister came to Bellary in the year 1969. They wanted to start 'Kitoor Chennamma College' for women. One good friend wanted to see that his wife's name should come in the college. His wife was also an M. L. A. So what he did is he said that he would give a cheque for Rs. one lakh to run the college in the name of his wife. He gave a cheque in the morning. The Hon'ble Chief Minister took the cheque in his left hand and gave it in the right hand to the organisers. In the evening the cheque was not debited to the account of the person who gave it. The same was taken back by the man who gave it. When the people started questioning him, he said that he had no money. He further asked them to give a loan of Rs. One lakh from the Sangha. He took Rs. one lakh from the Sangha and gave it to the Sangha again in the name of his wife. But the most interesting point is that till today has not paid the loan of Rs. one lakh to the

Sangha. The Government is meeting the expenses by means of salary to staff etc., and it is not the individual who is paying.

MR. SPEAKER.—You have already taken 40 minutes. In this way you may take all the time of your colleagues.

SRI K. BHASKAR NAIDU.—Sir, I know that you have been very kind to me. I hope that you will spare me another ten minutes.

MR. SPEAKER.—I have got a list from your party. There are 14 people to speak and the Finance Minister will have to reply today.

SRI K. BHASKAR NAIDU.—Sir, somebody said that he is not replying. That is why I am...

MR. SPEAKER.—Even otherwise also you cannot take that much of time.

SRI K. BHASKAR NAIDU.—Then Sir, this man is know for his luxurious way of living, Rolls Royce living. Even he started a society and got loan for a mini bus and gave it away. I will unearth some more facts. My friends from Kottur and Kudligi with the help of Mr. Jathappa can unearth a lot. I only hope that he will try to help me. So, this is as far as it is Sir. I only want to send this to the Co-operation Minister not to keep this in his almirahs, but I want a C. O. D. enquiry into this by an officer of good character. I want him to enquire into the allegations that I have made. I am sending the photostat copies also.

Sir, regarding Vjaynagar steel, I have still hope because as long as Sri. Gundu Rao is there as Chief Minister he will do somthing

Why I have brought all this is, as I told you earlier, Sri Bhaskar Naidu does anything, some people make it very big issue and sabotage it. In papers they try to publish in big headlines. Pepers will also say that B. Bhaskar Naidu also spoke. When it comes against me they put in headlines that this man who has collected and swindled, has given 5,000 rupees towards one lakh contribution that was given to a big leader. They say that moneys were collected from pimps, moneyes were collected from bootleggers and moneyes were collected from rich and poor people. Happily that party takes cheque for Rs 1 lakh and comes here and today they boast so much about themselves. I say this should not be allowed. When a man criticises others he should be above criticism. Mr. Rambhat, Let me just tell you, when you want to criticise me you should be above me but when you are doing all these things and run your party, what moral right have you got to criticise any other party? So Sir, this is one thing.

SRI K. RAMBHAT.—No. I have not said anything.

SRI K. BHASKAR NAIDU.—I am just telling you as an example. Sir, here we have very good officers. We have good police. Regarding I. A. S. officers I only want them to maintain their standard, as they have been maintaining now. If any body asks them let them say that I. A. S. means Indian Administration not "I Agree Sir". I. A. S. does not mean I agree Sir. I. A. S. means Indian Administration. Sir, though there is five minutes, with your right hand going to the bell and looking at the left, with these few words I take my seat, Sir.

† ಶ್ರೀ ಎಂ. ಸಿ. ನಾಣಯ್ಯ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿರತಕ್ಕ ಈ ಒಂದು ಆಯುವ್ಯಯ ಪತ್ರ ಏನಿದೆ ಇದರಲ್ಲಿ ಅವರು ೬೭ ಕೋಟಿ ರೂಪಾಯಿಗಳ ಖೋತಾ ಬಡ್ಜೆಟ್ಟನ್ನು ತೋರಿಸಿದ್ದಾರೆ. ಮಾನ್ಯ ಅರ್ಥ ಮಂತ್ರಿಗಳು ಈ ಒಂದು ಆಯವ್ಯಯವನ್ನು ಮಂಡಿಸಿದಾಗ ಬಹುಶಃ ಅವರಿಗೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗಿದೆ ಮತ್ತು ಖೋತಾ ಮುಂಗಡ ಪತ್ರವನ್ನು ಖಂಡಿತ ಮಂಡಿಸುವುದಿಲ್ಲ ಎಂಬ ಭಾವನೆ ಇತ್ತೆಂದು ಈ ಒಂದು ಮುಂಗಡ ಪತ್ರದಿಂದ ತಿಳಿದುಬರುತ್ತದೆ. ಆದರೆ ವಾಸ್ತವವಾಗಿ ಅವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನಾವು ಸ್ವಲ್ಪ ಅಮೂಲಾಗ್ರವಾಗಿ ನೋಡಿದರೆ ಅವರು ೬೭ ಕೋಟಿ ರೂಪಾಯಿಗಳ ಖೋತಾ ಮುಂಗಡ ಪತ್ರವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ನನ್ನ ಒಂದು ಅಂಕಿ ಅಂಶಗಳ ಆಧಾರದ ಮೇಲೆ ಇದು ಖಂಡಿತವಾಗಿಯೂ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಅಲ್ಲವೆಂದು ಹೇಳುತ್ತೇನೆ ಅಲ್ಲದೆ, ತಮ್ಮ ಮುಂದೆ ಕೆಲವು ಅಂಕಿ ಅಂಶಗಳನ್ನು ಇಡಬಯಸುತ್ತೇನೆ. ಅಂದಾಗ ರಾಜ್ಯದ ಮುಂಗಡ ಪತ್ರದಲ್ಲಿ ನಿಮ್ಮ ಆರ್ಥಿಕ ಖೋತಾ ೧೯೮೨-೮೩ಕ್ಕೆ ೧೬೭ ಕೋಟಿ ರೂಪಾಯಿಗಳು ಆಗಲೇ ಬೇಕು. ಇದು ಹೇಗೆ ಎಂದು ನೀವು ಪ್ರಶ್ನೆ ಮಾಡಬಹುದು. ನೀವು ೧೭-೩-೧೯೮೨ ರಂದು ಮುಂಗಡ ಪತ್ರವನ್ನು ಸಭೆಯ ಮುಂದೆ ಮಂಡಿಸಿದಾಗ ೧೯೮೧-೮೨ನೇ ಸಾಲಿನ ನಿಮ್ಮ ಓಪನಿಂಗ್ ಡಿಫಾಸಿಟ್ ೫೧ ಕೋಟಿ ೯೮ ಲಕ್ಷ ರೂಪಾಯಿಗಳು ಇರಬೇಕಾಗಿತ್ತು. ಆದರೆ ನೀವು ಅದನ್ನು ರಿವೈಸ್ ಮಾಡಿದಾಗ ಅದು ೩೭ ಕೋಟಿ ೨೯ ಲಕ್ಷಕ್ಕೆ ಇಳಿಯಿತು. ಅಂದರೆ ನನ್ನ ೧೩ ದಿನಗಳಲ್ಲಿ (ಮಾರ್ಚ್ ೧೭ ರಿಂದ ಏಪ್ರಿಲ್ ೧ ರವರೆಗೆ) ಖೋತಾ ಎಷ್ಟಾಗುತ್ತದೆಂದರೆ, ೮ ಕೋಟಿ ೯ ಲಕ್ಷ ರೂಪಾಯಿ ಎಂಬುದನ್ನು ನಿಮ್ಮ ಓಪನಿಂಗ್ ಬ್ಯಾಲೆನ್ಸ್‌ನಲ್ಲಿ ತೋರಿಸಿದ್ದೀರಿ. ನಿಮ್ಮ ರಿವೈಸ್ಡ್ ಬಡ್ಜೆಟ್‌ನಲ್ಲಿ ಏಪ್ರಿಲ್ ಒಂದಕ್ಕೆ ೮ ಕೋಟಿ ೯ ಲಕ್ಷ ರೂಪಾಯಿ ಖೋತಾ ಬಡ್ಜೆಟ್ ಇರುತ್ತದೆಂದು ಯಾವ ಆಧಾರದ ಮೇಲೆ ತೋರಿಸಿದಿರಿ ? ೧೭ ರಿಂದ ೩೧ ರವರೆಗೆ ಅಂದರೆ ೧೩ ದಿನಗಳಲ್ಲಿ ನಿಮ್ಮ ರಾಜ್ಯದ ಬೊಕ್ಕಸಕ್ಕೆ ೨೯ ಕೋಟಿ ರೂಪಾಯಿಗಳನ್ನು ವಸೂಲು ಮಾಡುತ್ತೇವೆಂದು ಹೇಳುವ ಆಧಾರದ ಮೇಲೆ ಇರಲೇಬೇಕು ಅಲ್ಲವೆ ? ಈಗ ಮಾನ್ಯ ಅರ್ಥ ಮಂತ್ರಿಗಳು ಇದಿದ್ದರೆ ಚೆನ್ನಾಗಿರುತ್ತಿತ್ತು. ಅವರು ಕೊಟ್ಟಿರತಕ್ಕ ಅಂಕಿ ಅಂಶಗಳಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಖೋತಾ ಇದೆ ಎಂದು ತಿಳಿಸಿದ್ದಾರೆ. ಈ ಅಂಕಿ ಅಂಶಗಳನ್ನು ನೋಡಿದರೆ ಈ ಒಂದು ಅಂಶವನ್ನು ತಿಳಿಸುವುದಕ್ಕೆ ಕೊಟ್ಟಿದ್ದಾರೆಯೇ ವಿನಹ ಮತ್ತೆ ಬೇರೇನು ಅಲ್ಲ ಅನ್ನಿಸುತ್ತದೆ. ವಾಸ್ತವವಾದ ಅಂಕಿ ಅಂಶಗಳನ್ನು ನೋಡಿದರೆ ಇದು ನಮ್ಮ ರಾಜ್ಯದ ನಿಜವಾದ ಮುಂಗಡ ಪತ್ರ ಅಲ್ಲ ಅನ್ನಿಸುತ್ತದೆ. ತಾವು ದಯಮಾಡಿ ಹೇಳಬೇಕು. ೧೭ ರಂದು ಮುಂಗಡ ಪತ್ರವನ್ನು ಮಂಡಿಸಿದಾಗ ಮಾರ್ಚ್ ೧೭ಕ್ಕೆ ರಾಜ್ಯದ ಬೊಕ್ಕಸಕ್ಕೆ ರೆವಿನ್ಯೂ ಅಕೌಂಟ್ಸ್‌ನಿಂದ ಬಂದಿರತಕ್ಕ ಹಣ ಎಷ್ಟು ? ಹೀಗೆ ಮಾರ್ಚ್ ತಿಂಗಳಲ್ಲಿ ಮಂಡಿಸಿರಬೇಕಾದರೆ ಮಾರ್ಚ್ ಒಂದಕ್ಕೆ ರಾಜ್ಯದ ಬೊಕ್ಕಸಕ್ಕೆ ಬಂದಿರತಕ್ಕ ಹಣ ಎಷ್ಟು ? ರೆವಿನ್ಯೂ ಅಕೌಂಟ್ಸ್‌ನಲ್ಲಿ ಬಂದಿರತಕ್ಕ ಹಣ ರೆವಿನ್ಯೂ ಅಕೌಂಟ್‌ನಲ್ಲಿ ಸಿಕ್ಕಲೇಬೇಕು. ಮಾರ್ಚ್ ಒಂದಕ್ಕೆ (೧೯೮೧-೮೨ರಲ್ಲಿ) ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಎಂಬುದು ನಿಮ್ಮ ಹತ್ತಿರ ಲೆಕ್ಕ ಸಿಗಬೇಕು. ಹಾಗಾದರೆ ೧೭ ರಂದು ಮುಂಗಡ ಪತ್ರವನ್ನು ಮಂಡಿಸಿದಾಗ ೩೭ ಕೋಟಿ ರೂಪಾಯಿ ಖೋತ ಎಂದು ಹೇಳಿರಬೇಕಾದರೆ ಕೇವಲ ೧೩ ದಿವಸಗಳಲ್ಲಿ ೨೯ ಕೋಟಿ ರೂಪಾಯಿಗಳನ್ನು ಯಾವ ಲೆಕ್ಕದಲ್ಲಿ ನಿಮ್ಮ ರಾಜ್ಯದ ಬೊಕ್ಕಸಕ್ಕೆ ತುಂಬುತ್ತೀರಿ ? ೧೩ ದಿನಗಳಲ್ಲಿ ೨೯ ಕೋಟಿ ರೂಪಾಯಿಗಳನ್ನು ರಾಜ್ಯದ ಬೊಕ್ಕಸಕ್ಕೆ ತುಂಬುತ್ತೇವೆಂಬ ಭರವಸೆ ಮೇಲೆ ಏಪ್ರಿಲ್ ಒಂದಕ್ಕೆ ನಿಮ್ಮ ಬ್ಯಾಲೆನ್ಸ್ ೮ ಕೋಟಿ ೯೦ ಲಕ್ಷ ರೂಪಾಯಿ ಎಂದು ತೋರಿಸಿದ್ದೀರಿ.

೪-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಈ ಲೆಕ್ಕವನ್ನು ಯಾವುದೇ ಒಬ್ಬ ಸಾಮಾನ್ಯ ಮನುಷ್ಯನಿಗೆ ತೋರಿಸಿದರೂ ಅರ್ಥ ಮಾಡಿಕೊಳ್ಳುತ್ತಾರೆ. ೨+೨=೪ ಎಂಬ ಅರ್ಥ ಮಾಡಿಕೊಳ್ಳುವವನಿಗೂ ಅರ್ಥವಾಗುತ್ತದೆ ನಿಮ್ಮ ಖೋತಾ ೧೯೮೨ನೇ ಏಪ್ರಿಲ್ ೧ನೇ ತಾರೀಖಿಗೆ ೮ ಕೋಟಿ ೯೫ ಲಕ್ಷ ರೂಪಾಯಿ ಆಗುವುದಿಲ್ಲ ವೆಂದು. ಖೋತಾ ೩೭ ಕೋಟಿಯಲ್ಲೇ ಉಳಿದುಕೊಳ್ಳುತ್ತದೆ. ಎರಡನೆಯದಾಗಿ ರೆಸೀಟ್ ಐಟಂನಲ್ಲಿ ಕೆಲವು ವಿಷಯಗಳನ್ನು ಕೊಟ್ಟಿದ್ದಾರೆ. ಇದನ್ನು ತಾವುನೋಡಬೇಕು. ೫೦೭ ಕೋಟಿ ರೂಪಾಯಿಸ್ಟೇಟ್ ಟ್ಯಾಕ್ಸ್ ಅನ್ನು ರಿವೈಸ್ಡ್ ಎಸ್ಟಿಮೇಟ್ ಮಾಡಿದಾಗ ೫೪೬ ಕೋಟಿ ರೂಪಾಯಿಗೆ ಏರಿಸಿದ್ದಾರೆ. ಅಂದರೆ ೧೯೮೧-೮೨ರಲ್ಲಿ ೫೦೭ ಕೋಟಿ ರೂಪಾಯಿ ಸ್ಟೇಟ್ ಟ್ಯಾಕ್ಸಸ್‌ನಲ್ಲಿ ವಸೂಲು ಮಾಡಬೇಕಾಗಿದ್ದು ಅದನ್ನು ರಿವೈಸ್ ಮಾಡಿರುವ ಹಿನ್ನೆಲೆಯಲ್ಲಿ ನೋಡಿದಾಗ ೫೪೭ ಕೋಟಿ ರೂಪಾಯಿ ಆಗುತ್ತದೆಂದು ತೋರಿಸಿದ್ದಾರೆ. ಇದಕ್ಕೆ ಈ ರೀತಿ ವಿವರಣೆ ಕೊಟ್ಟಿದ್ದಾರೆ We have introducrd buoyancy and efficiency in the Sales Tax Department ಎಂದು ಹೇಳಿದ್ದಾರೆ. ಮತ್ತು ಹೆಂಡದ ಮಾರಾಟದಿಂದ ೩೦-೪೦ ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಕಳೆದ ವರ್ಷ ಬಜೆಟ್ ತಂದಾಗ ಹೆಂಡದ ಬೆಲೆ ಇಷ್ಟು ಮೇಲೆ ಹೋಗುತ್ತದೆಂದು ಯಾರಿಗೂ ಗೊತ್ತಿರಲಿಲ್ಲ. ಆದರೆ ಹೆಂಡದ ವ್ಯಾಪಾರ ಮಾಡಿದಾಗ ೩೦-೪೦ ಕೋಟಿ ರೂಪಾಯಿ ಜಾಸ್ತಿ ಬಂತು. ಅದನ್ನು ಸೇರಿಸಿರುವುದರಿಂದ ೫೪೬ ಕೋಟಿ ರೂಪಾಯಿ ಆಗಿದೆ. ಹೆಂಡದ ವ್ಯಾಪಾರವನ್ನು ನೋಡಿದರೆ ಬರುವ ವರ್ಷದಲ್ಲಿ ಹೆಂಡ ಕುಡಿಯತಕ್ಕ ಸಾಮಾನ್ಯ ಮನುಷ್ಯ ಇಂಡಿಯನ್ ಮೇಡ್ ಫಾರಿನ್ ಲಿಕ್ಕರನ್ನು ಕುಡಿಯುವ ಸ್ಥಿತಿಯಲ್ಲಿಲ್ಲ. ಇದು ಮಾನ್ಯ ಭಾಸ್ಕರಶೆಟ್ಟಿಯವರಿಗೆ ಗೊತ್ತಿದೆ. ನಾವು ನೀವು ಕುಡಿಯುತ್ತಿದ್ದ ಮಧ್ಯಮವರ್ಗದ ಹೆಂಡದ ಬೆಲೆ ಎರಡು ವರ್ಷದ ಹಿಂದೆ ಒಂದು ಬಾಟಲಿಗೆ ೪೦ ರೂಪಾಯಿ ಇದ್ದದ್ದು ಈಗ ೮೨ ರೂಪಾಯಿಂಗೆ ತಲು ಪಿದೆಯಲ್ಲಾ ಹೀಗಾದರೆ ನಮ್ಮಿಂದ ನಿಮ್ಮಿಂದ ಇದನ್ನು ಕುಡಿಯುವುದಕ್ಕೆ ಸಾಧ್ಯವೇ ? ಹೀಗಿರುವಾಗ ಆದಾಯವನ್ನು ೫೪೬ ಕೋಟಿ ರೂಪಾಯಿಂದ ಮುಂದಿನವರ್ಷಕ್ಕೆ ೬೪೪ ಕೋಟಿ ರೂಪಾಯಿಗಳಿಗೆ ಏರಿಸಿದ್ದಾರಲ್ಲ ಈ ೫೦ ಕೋಟಿ ರೂಪಾಯಿ ಹೆಚ್ಚಿನ ಆದಾಯವನ್ನು ರಾಜ್ಯದ ಬೊಕ್ಕಸಕ್ಕೆ ಯಾವ ಬಾಬಿನಲ್ಲಿ ತುಂಬುತ್ತೀರಿ ಎಂಬ ಬಗ್ಗೆ ವಿವರಣೆ ಕೊಡಬೇಕು. ಒಂದು ವೇಳೆ ಇದನ್ನು ತುಂಬುವುದಕ್ಕೆ ಸಾಧ್ಯವಾಗದೇಹೋದರೆ ಇನ್ನು ಎರಡು ಮೂರು ತಿಂಗಳಲ್ಲಿ ಮತ್ತೆ ಇವರು ಹೆಂಡದ ವ್ಯಾಪಾರ ಮಾಡುತ್ತಾರೆ. ಬಹುಶಃ ಆದರಿಂದ ಇನ್ನೂ ೪೦ ಕೋಟಿ ರೂಪಾಯಿ ಜಾಸ್ತಿ ತುಂಬುವುದಕ್ಕೆ ಸಾಧ್ಯವಾಗಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಅದೇರೀತಿ ಸೇಲ್ಸ್‌ಟ್ಯಾಕ್ಸ್‌ನಲ್ಲಿ ಬರುವುದಕ್ಕೆ ಸಾಧ್ಯವಿರಬಹುದು. ಕೇಂದ್ರಸರ್ಕಾರದಿಂದ ಬರತಕ್ಕ ಗ್ರಾಂಟ್ಸ್ ೧೯೮೧-೮೨ ರಲ್ಲಿ ೮೭ ಕೋಟಿ ರೂಪಾಯಿ ಇದ್ದರೆ ಈ ವರ್ಷ ೯೫ ಕೋಟಿ ರೂಪಾಯಿ ಇದ್ದು ಮುಂದಿನ ವರ್ಷಕ್ಕೆ ೧೦೪ ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಇದರಲ್ಲಿ ೮ ಕೋಟಿ ರೂಪಾಯಿ ಜಾಸ್ತಿ ತೋರಿಸಿದ್ದಾರೆ. Share of Central Taxes ೨೧೮ ಕೋಟಿ ಇದ್ದದ್ದು ೨೨೨ ಕೋಟಿಗೆ ರಿವೈಸ್ ಆಗಿ ಈ ವರ್ಷಕ್ಕೆ ೨೪೭ ಕೋಟಿ ರೂಪಾಯಿ ತೋರಿಸಿದ್ದಾರೆ. ಅಂದರೆ ಇದರಲ್ಲಿ ಕೂಡ ಹೆಚ್ಚು ತೋರಿಸಿದ್ದಾರೆ. ಸಾಮಾನ್ಯವಾಗಿ ಇವರು ಏನು ಮಾಡುತ್ತಾರೆಂದರೆ ನಾನ್ ಟ್ಯಾಕ್ಸ್ ರೆವಿನ್ಯೂನಲ್ಲಿ ಜಾಸ್ತಿ ತೋರಿಸುತ್ತಾರೆ. ಹಣ ಬರದೇ ಇರುವಾಗ ಖೋತಾ ತುಂಬ ಬೇಕಾದರೆ ರೆವಿನ್ಯೂ ಅಕೌಂಟಿನಲ್ಲೇ ಹೆಚ್ಚಿಗೆ ಸೇರಿಸಬೇಕಾಗುತ್ತದೆ. ನಾನು ಇವತ್ತು ಅರ್ಥಮಂತ್ರಿಗಳು ಇಲ್ಲಿದ್ದಿದ್ದರೆ ಅವರನ್ನೇ . ನ ರವಾಗಿ ಕೇಳುತ್ತಿದ್ದೆ ತಾವು ದಯಮಾಡಿ ಲೆಕ್ಕ ಪತ್ರಗಳನ್ನು ನೋಡಿದ್ದೀರಾ ಎಂದು. ಲೆಕ್ಕಪತ್ರಗಳನ್ನು ದಯವಿಟ್ಟು ನೋಡಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದನ್ನು ಹೇಳಿ ಎಂದು ಹೇಳುತ್ತಿದ್ದೇನೆ. ಡಿಸೆಂಬರ್ ಆಖೈರಿನಲ್ಲಿ ಅಥವಾ ಮಾರ್ಚಿ ೧ನೇ ತಾರೀಖಿನಲ್ಲಿ ರಾಜ್ಯದ ಬೊಕ್ಕಸಕ್ಕೆ ಬಂದಿರುವ ನಿಜವಾದ ಹಣ ಎಷ್ಟು ? ಇದಕ್ಕೆ ಲೆಕ್ಕ ಬೇಕಲ್ಲ. He has presented on 17th March. As on 1st March they should have the revenue account and expenditure account. They should have furnished the figaures before the House. This is called jugglery of figures. Why ? ರಾಜ್ಯಸರ್ಕಾರ ಬಜೆಟ್ ಮಂಡನೆ ಮಾಡುವ ಕಾಲಕ್ಕೆ ನಿಜವಾಗಿ ಖರ್ಚಾಗಿರತಕ್ಕ ಹಣ ಎಷ್ಟು, ನಿಜವಾಗಿ ರಾಜ್ಯದ ಬೊಕ್ಕಸಕ್ಕೆ ಬಂದಿರತಕ್ಕ ಹಣ ಎಷ್ಟು ಎಂಬ ಲೆಕ್ಕ ಕೈಯಲ್ಲಿರುವಾಗ ಆಕ್ಚುಯಲ್ಸ್ ಮಂಡನೆ ಮಾಡದಿರುವುದರಿಂದ ಈ ರೀತಿ ಜಗ್ಲರಿ ಆಫ್ ಫಿಗರ್ಸ್ ಬಂದಿದೆ. ಮಾರ್ಚ್ ೧೭ನೇ ತಾರೀಖು ಬಜೆಟ್ ಮಂಡನೆ ಮಾಡುವ ಮುನ್ನ ರಾಜ್ಯದ ಬೊಕ್ಕಸಕ್ಕೆ ಬಂದಿರತಕ್ಕ

ಹಣ ಎಷ್ಟು, ಖರ್ಚಾಗಿರತಕ್ಕ ಹಣ ಎಷ್ಟು ಎಂಬ ಬಗ್ಗೆ ಅಂಕಿಅಂಶಗಳನ್ನು ಸದನದ ಮುಂದಿಡಿ. ಆಗ ಮುಂದಿನ ವರ್ಷದ ಕೊರತೆ ೧೭೮ ಕೋಟಿ ರೂಪಾಯಿಗಳಿಗಿಂತ ಕಡಿಮೆಯಾಗುವುದಕ್ಕೆ ಸಾಧ್ಯವಿಲ್ಲ. ಎರಡನೆಯದಾಗಿ ನಾನ್-ಟ್ಯಾಕ್ಸ್ ರೆವಿನ್ಯೂನಲ್ಲಿ ೧೯೮೧-೮೨ಕ್ಕೆ ೨೨೩ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಅದನ್ನು ರಿವೈಸ್ ಮಾಡಿದಾಗ ೨೩೬ ಕೋಟಿ ರೂಪಾಯಿಗೆ ಹೋಯಿತು. ೧೯೮೨-೮೩ಕ್ಕೆ ೨೫೪ ಕೋಟಿ ರೂಪಾಯಿ ತೋರಿಸಿದ್ದಾರೆ. ಅಂದರೆ ನಾನ್ ಟ್ಯಾಕ್ಸ್ ರೆವಿನ್ಯೂನಲ್ಲಿ ೨೦ ಕೋಟಿ ರೂಪಾಯಿ ಹೆಚ್ಚಿಗೆ ಆದಾಯ ಬರಬೇಕಾದರೆ ಯಾವ ಬಾಬಿನಿಂದ ಬರಬೇಕು ? ಈ ಬಗ್ಗೆ ಮಾನ್ಯ ಅರ್ಥಮಂತ್ರಿಗಳು ವಿವರಣೆಯನ್ನು ಕೊಡುತ್ತಾರೆಯೇ ? ಈ ಬಜೆಟ್ ಭಾಷಣದಲ್ಲಿ ಇದಕ್ಕೆ ವಿವರಣೆ ಎಲ್ಲೂ ಕೊಟ್ಟಿಲ್ಲ. ಒಂದು ಕಡೆ ಮಾತ್ರ ನಾನ್ ಟ್ಯಾಕ್ಸ್ ರೆವಿನ್ಯೂಗೆ ವಿವರಣೆ ಕೊಡುತ್ತಾ ಅರಣ್ಯದಿಂದ ಬರುತ್ತದೆಂದು ಹೇಳಿದ್ದಾರೆ. ಸೀನಿಯರೇಜ್ ವ್ಯಾಲ್ಯೂ ಎಷ್ಟು ಕಡಿಮೆ ಮಾಡಿದ್ದಾರೆ ಇದರಿಂದ ಹಣ ಏತಕ್ಕೆ ಬರುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದೇನೆ. ೧೩೫೦ ಕೋಟಿ ರೂಪಾಯಿ ಇರುವ ರೆವಿನ್ಯೂ ಅಕೌಂಟನ್ನು ೧೨೭೮ ಕೋಟಿ ರೂಪಾಯಿ ಎಂದು ಮಾಡಿ ರೆವಿನ್ಯೂ ಅಕೌಂಟ್ಸಿನಲ್ಲಿ ೭೨ ಕೋಟಿ ರೂಪಾಯಿ ಸರ್‌ಪ್ಲಸ್ ತೋರಿಸಿದ್ದಾರೆ. ರೆವಿನ್ಯೂ ಅಕೌಂಟಿನಲ್ಲಿ ೭೨ ಕೋಟಿ ರೂಪಾಯಿ ಸರ್‌ಪ್ಲಸ್ ತೋರಿಸದೇಹೋದರೆ ಈ ಕೊರತೆ ತುಂಬುವುದಕ್ಕಾಗುವುದಿಲ್ಲ. ಆದ್ದರಿಂದಲೇ ರೆವಿನ್ಯೂ ಅಕೌಂಟಿನಲ್ಲಿ ಯಾವಾಗಲೂ ಸರ್‌ಪ್ಲಸ್ ತೋರಿಸಿ ಹಿಂದೆ ಅದನ್ನು ವಜಾ ಮಾಡುತ್ತಾರೆ. ನಾನು ಇದನ್ನು ಒಪ್ಪುವುದಿಲ್ಲ. ಕಾರಣವೇನೆಂದರೆ ಓಪನಿಂಗ್ ಬ್ಯಾಲೆನ್ಸ್ ೩ ಕೋಟಿ ರೂಪಾಯಿ ಕೊರತಾದಲ್ಲೇ ಉಳಿದುಕೊಳ್ಳುತ್ತದೆ. ಸೇಲ್ಸ್‌ಟ್ಯಾಕ್ಸ್‌ನಲ್ಲಿ ನಾಲ್ಕು ಕೋಟಿ, ಸೆಂಟ್ರಲ್ ಗ್ರ್ಯಾಂಟ್ಸ್‌ನಲ್ಲಿ ೮ ಕೋಟಿ ಮತ್ತು ನಾನ್ ಟ್ಯಾಕ್ಸ್ ರೆವಿನ್ಯೂನಲ್ಲಿ ೨೦ ಕೋಟಿ ರೂಪಾಯಿ ವಸೂಲಾತಿ ಮಾಡದೇಹೋದರೆ ಈ ಹಣವನ್ನು ರೆವಿನ್ಯೂ ಅಕೌಂಟಿನಲ್ಲಿ ತೆಗೆದರೆ ಉಳಿದುಕೊಳ್ಳತಕ್ಕ ಹಣ under the revenue account is only ೧೭.೯ ಕೋಟಿ ರೂಪಾಯಿಗಳು. ರೆವಿನ್ಯೂ ಅಕೌಂಟಿನಲ್ಲಿ ಬರುತ್ತಾ ಇರತಕ್ಕ ಸರ್‌ಪ್ಲಸ್ ಬರೀ ೧೭ ಕೋಟಿ ರೂಪಾಯಿಗಳು ಮಾತ್ರ. ಈ ೧೭ ಕೋಟಿ ರೂಪಾಯಿ ರೆವಿನ್ಯೂ ಅಕೌಂಟಿನಲ್ಲಿ ಸರ್‌ಪ್ಲಸ್ ಬರುವುದಿದ್ದರೆ ಜನರಲ್ ಅಕೌಂಟನ್ನು ತೆಗೆದುಕೊಂಡು ನೋಡಿ. ಡಿಸ್ಬರ್ಸ್‌ಮೆಂಟ್ ತೆಗೆದುಕೊಂಡು ಹೇಳಿ. ಕ್ಯಾಪಿಟಲ್ ಅಕೌಂಟಿನಲ್ಲಿ ಒಂದು ಹೆಡ್‌ನಲ್ಲಿ ೨೦-೨೫ ಕೋಟಿ ರೂಪಾಯಿ ಜಾಸ್ತಿ ಬರುತ್ತದೆಂದು ಕೆಲವು ವರ್ಷದಿಂದ ತೋರಿಸುತ್ತಲೇ ಬಂದಿದ್ದಾರೆ. ರೆಕವರಿ ಆಫ್ ಲೋನ್ಸ್‌ನಿಂದ ೧೯೮೧-೮೨ಕ್ಕೆ ೭೦ ಕೋಟಿ ರೂಪಾಯಿ ಬರುತ್ತದೆಂದು ಎಸ್ಟಿಮೇಟ್ ಮಾಡಿ ರಿವೈಸ್ ಮಾಡಿದಾಗ ೬೬ ಕೋಟಿ ರೂಪಾಯಿ ತೋರಿಸಿ ನಾಲ್ಕು ಕೋಟಿ ರೂಪಾಯಿ ಜಾಸ್ತಿ ಸಿಗುತ್ತದೆಂದು ಹೇಳಿದ್ದಾರೆ. ನಾಲ್ಕು ಕೋಟಿ ಜಾಸ್ತಿ ಬರುತ್ತದೆಂದು ಹೇಳಿ ಇದನ್ನು ಮಾರ್ಚ್ ೩೧ಕ್ಕೆ ಖಜಾನೆಗೆ ತುಂಬುತ್ತೇವೆಂದು ತೋರಿಸಿದ್ದಾರೆ. ಮುಂದಿನ ವರ್ಷ ಖಜಾನೆಗೆ ೮೦ ಕೋಟಿ ರೂಪಾಯಿ ಬರುತ್ತದೆಂದು ಹೇಳಿದ್ದಾರೆ. ಇದು ಯಾವ ಬಾಬಿನಲ್ಲಿ ಬರುತ್ತದೆ ? ಏತಕ್ಕೋಸ್ಕರ ಇಂಥ ಅಂಕಿಅಂಶಗಳನ್ನು ಕೊಡುತ್ತೀರಿ ? ೧೯೮೧-೮೨ಕ್ಕೆ ರೆಕವರಿ ಆಫ್ ಲೋನ್ಸ್ ಅಂಡ್ ಅಡ್ವಾನ್ಸಸ್ ೬೬ ಕೋಟಿ ರೂಪಾಯಿ ಅಂದಾಜು ಮಾಡಿದ್ದು ಮುಂದಿನ ವರ್ಷಕ್ಕೆ ೮೦ ಕೋಟಿ ರೂಪಾಯಿ ಸಿಗುತ್ತದೆಂದರೆ ಬರತಕ್ಕ ವ್ಯತ್ಯಾಸ ೧೪ ಕೋಟಿ ರೂಪಾಯಿಗಳು. ಇದನ್ನು ಕ್ಯಾಪಿಟಲ್ ಅಕೌಂಟನಲ್ಲಿ ತೆಗೆದರೆ ಕಡೆಯದಾಗಿ ಬರುವುದು ಕ್ಯಾಪಿಟಲ್ ಅಕೌಂಟ್ ಡಿಫಿಸಿಟ್ ನೋಡಿದಾಗ ೧೬೨.೯೬ ಕೋಟಿ ರೂಪಾಯಿ ಬರುತ್ತದೆ. ಅದರಲ್ಲಿ ೭೨.೯ ಕೋಟಿ ರೆವಿನ್ಯೂ ಅಕೌಂಟ್‌ನಲ್ಲಿ ಯಾವುದು ಸರ್‌ಪ್ಲಸ್ ಇತ್ತು ಅದನ್ನು ಕಳೆಯುತ್ತಾರೆ. ಕಳೆದು ೯೧.೮೭ ಕೋಟಿ ರೂಪಾಯಿ ಎಂದು ಹೇಳುತ್ತಾರೆ. ನಾನು ಹೇಳುತ್ತಿದ್ದೇನೆ ಕಳೆಯುವುದಕ್ಕೆ ಇರತಕ್ಕದ್ದು ೧೬೩.೯೬ ಕೋಟಿ ಅಲ್ಲ, ೧೬೦ ಕೋಟಿ ಒಂದು, ಇನ್ನೊಂದು ೩೭ ಕೋಟಿ. ಇದನ್ನು ಕಳೆದರೆ ೧೯೭ ಕೋಟಿ ೩೫ ಲಕ್ಷ ರೂಪಾಯಿ ಇವರಿಗೆ ನಿಜವಾಗಿ ಬರತಕ್ಕ ಡಿಫಿಸಿಟ್. ಇದನ್ನು ಹೇಗೆ ತುಂಬುತ್ತೀರಿ ? ೨೫ ಕೋಟಿ ರೂಪಾಯಿ ಕರಭಾರ ಹಾಕಿದ್ದೀರಿ. ರಾಜ್ಯದ ಬೊಕ್ಕಸಕ್ಕೆ ಬರುವ ೧೧ ಕೋಟಿ ರೂಪಾಯಿ ಹಣವನ್ನು ಸರ್ಕಾರಿ ನೌಕರರಿಗೆ ನಾಲ್ಕು ಕಂತು ತುಟ್ಟಿಭತ್ಯ ಕೊಡುವುದಕ್ಕೆ ಈ ವರ್ಷಕ್ಕೆ ಇಂಪೌಂಡ್ ಮಾಡುತ್ತೀರಿ. Having impounded the DA payable to employees for the year 1982-83, You have taken this to the Revenue Account. Is it not a liability on the State Government ? You have to pay this money to them if not to-day, tomarrow. It is a deferred payment. When it is deferred payment, how can you take this into Revenue Account.? For some reason yoa have taken it to your receipt item. You wanted to fill it up.

ತಾವು ಈ ೧೧ ಕೋಟಿ ರೂಪಾಯಿಗಳನ್ನು ಅವರಿಗೆ ಕೊಡುವುದಿಲ್ಲ, ಅದನ್ನು ಕೊಡುವುದಿಲ್ಲವಾದ್ದರಿಂದ ತಾವು ೧೧ ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೀರಿ. ಇದನ್ನು ರೆಸೀಟ್ ಐಟಂಗ್ ತೆಗೆದುಕೊಂಡರೂ ಕೂಡಾ ೧೯೨.೧೫ ಕೋಟಿಯಿಂದ ೨೫ ಕೋಟಿ ರೂಪಾಯಿ ಕರಭಾರವನ್ನು ಹಾಕಿದ್ದಾರೆ. ೨೫ ಕೋಟಿ ರೂಪಾಯಿ ಟ್ಯಾಕ್ಸ್ ಬರುತ್ತದೆಂದು ಹೇಳಿದ್ದೀರಿ. ಅದನ್ನು ತೆಗೆದುಕೊಂಡರೆ ೧೭೮.೧೫ ಕೋಟಿ ೧೧ ಕೋಟಿ ರೂಪಾಯಿ ನೌಕರರಿಗೆ ಕೊಡತಕ್ಕ ೪ ಕಂತುಗಳ ತುಟ್ಟಿಭತ್ಯವನ್ನು ತೆಗೆದುಕೊಂಡು ನೀವು ಅದನ್ನು ಕಳೆದರೆ ನಿಮ್ಮ ನೈಜವಾದ ನಿಜವಾದ ಖೋತಾ ೧೬೭.೧೫ ಕೋಟಿ ರೂಪಾಯಿಗಳಾಗುತ್ತವೆ. ಏಕೆ ೬೭ ಲಕ್ಷ ರೂಪಾಯಿ ಎಂದು ಹೇಳುತ್ತೀರಿ ? ರಾಜ್ಯದ ಜನತೆಗೆ ನಿಮ್ಮ ಆರ್ಥಿಕ ಪರಿಸ್ಥಿತಿ ಯಾವುದು ಉಂಟು, ನಮ್ಮ ನೈಜ ಚಿತ್ರ ಯಾವುದು ಉಂಟು ಅದನ್ನು ಕೊಡದೇ ಹೋದರೆ ಅದು ಸರಿಯಲ್ಲ. ಪ್ರತಿ ವರ್ಷವೂ ತಾವು ಈ ಜಗ್ಲರಿ ಆಫ್ ಫಿಗರ್ಸ್‌ನ್ನು ಮಾಡಿಕೊಂಡು ಮಾರ್ಚಿ ಅಂತ್ಯದ ವರೆಗೆ ತಾವು ಏನು ಮಾಡುತ್ತೀರಿ ? ಕ್ಯಾಪಿಟಲ್ ಔಟಲೇ ಕೊಟ್ಟಿದ್ದೇವೆ ಎನ್ನುತ್ತೀರಿ, ಎಕ್ಸ್‌ಪೆಂಡೀಚರ್‌ನಲ್ಲಿ ೧೧೭೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಇದೆಲ್ಲಾ ಎಲ್ಲಿಗೆ ತಲುಪುತ್ತದೆ ? ಡಿಸೆಂಬರ್‌ನಲ್ಲಿ ಪ್ರಾರಂಭ ಆಗುತ್ತದೆ ನಿಮ್ಮ ಎಕಾನಮಿ ಮೆಷರ್. ಡಿಸೆಂಬರ್‌ನಿಂದ ಮಾರ್ಚಿಯವರೆಗೆ ಎಲ್ಲಿಯೂ ಹಣ ಖರ್ಚಾಗುವುದಿಲ್ಲ. ಆದುದರಿಂದ ಹೇಳುತ್ತೇನೆ, ಮಾರ್ಚಿ ೧ನೇ ತಾರೀಖಿನಲ್ಲಿ ಕಳೆದ ವರ್ಷ ೮೧-೮೨ ರಲ್ಲಿ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಖರ್ಚು ಮಾಡಲು ಈ ಒಂದು ಸದನದ ಸಮ್ಮತಿಯನ್ನು ತೆಗೆದುಕೊಂಡಿದ್ದು ಆ ಬಗ್ಗೆ ಖರ್ಚು ಮಾಡಿದ್ದಕ್ಕೆ ನೈಜವಾದ, ನೇರವಾದ ಸಾಧನೆಯನ್ನು ಸದನದ ಮುಂದೆ ಇಡಿ ಆಗ ಗೊತ್ತಾಗುತ್ತದೆ ಕಳೆದ ವರ್ಷ ಎಷ್ಟು ಖರ್ಚು ಮಾಡಿದ್ದೀರಿ ಎಂಬುದು. ಹಣವನ್ನು ಖರ್ಚು ಮಾಡದೆ ಯಾವ ಬಾಬಿಗೆ ಖರ್ಚು ಮಾಡಬೇಕಾಗಿತ್ತೋ ಆ ಹಣವನ್ನು ನಿಮ್ಮ ಖೋತಾಕ್ಕೆ ತುಂಬಿಸಿಕೊಂಡು ಏಪ್ರಿಲ್ ಮೊದಲ ದಿನದ ಬ್ಯಾಲೆನ್ಸ್ ಏನಿದೆ ಅದನ್ನು ತಾವು ಕಮ್ಮಿ ಮಾಡುತ್ತಿದ್ದೀರಿ. ದಯವಿಟ್ಟು ಹೇಳಿ. ಜಗ್ಲರಿ ಆಫ್ ಫಿಗರ್ಸ್ ಮಾಡುವುದಕ್ಕೆ ಹೋಗಬೇಡಿ. This is not good economics, This will not reflect the economic position of the State. On the other hand come forward with a clear statement. Tell the people that this is the real deficit that we are facing now. The real deficit according to me is Rs. 167 15 crores, I would request the Hon. Minister to come-forward with a clear statement giving complete picture of it including receipts as on the 15th March. 1982 expenditure as on 15 March 1982 and than as on 31st March, 1982 with full receipts and expenditures. That would give the real picture of the finances of our State. ಆದುದರಿಂದ ಮಾನ್ಯ ಅಧ್ಯಕ್ಷರೆ ನಾನು ಹೇಳುತ್ತಿದ್ದೇನೆ, ೧೬೭ ಕೋಟಿ ರೂಪಾಯಿಗಳ ಖೋತಾ ಬಜೆಟ್ಟನ್ನು ನೀವು ಮಂಡಿಸಿದರೆ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ ಎಷ್ಟು ಕಠಿಣ ಆಗಿದೆಯೋ ಎಂದು ಹೇಳತಕ್ಕ ಶಂಕೆ ಬೇರೆ ರಾಜ್ಯದವರಿಗೆ ಬಂದೀತು ಎಂದು ಜನತೆಯನ್ನು ಮೋಸ ಮಾಡುವುದಕ್ಕೆ ಹೋಗಬಾರದು. ಎಕಾನಮಿ ಆಫ್ ದಿ ಸ್ಟೇಟ್‌ನಲ್ಲಿ ಜಗ್ಲರಿ ಮಾಡಬೇಡಿ ಎಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಮಂತ್ರಿಗಳು ಎಲ್ಲಾ ಬಾಬುಗಳಿಗೂ ಸಂಪೂರ್ಣವಾದ ವಿವರಣೆಯನ್ನು ಕೊಡಬೇಕು. In the from of a White Paper he should present it to the House If it is not done then we must take it for granted that the rea deficit of the State is Rs. 167 crores and not Rs. 67 crores as presented by the Hon. Minister and this is not the real true picture of the economic condition of the State. ಇಷ್ಟು ಮೇಲೆ ೧೬೭ ಕೋಟಿ ರೂಪಾಯಿ ಖೋತಾ ಬಜೆಟ್ ಅದರ ಮೇಲೆ ಇನ್ನೂ ಏನನ್ನು ಇವರು ಹಾಕುತ್ತಾರೆ ? ೧೬೭ ಕೋಟಿ ರೂಪಾಯಿ ಅದರ ಮೇಲೆ ೨೫ ಕೋಟಿ ರೂಪಾಯಿಗಳ ಕರಭಾರವನ್ನು ಹಾಕಿದ್ದಾರೆ. ೨೫ ಕೋಟಿ ರೂಪಾಯಿಗಳ ಕರಭಾರವನ್ನು ಯಾರ ಮೇಲೆ ಹಾಕಿದ್ದಾರೆ ? ತಾವು ಹಾಕಿರತಕ್ಕ ಕರಭಾರವನ್ನು ನೋಡಿದರೆ ಅದರಲ್ಲೇ ಗೊತ್ತಾಗುತ್ತದೆ. ತಾವು ಹಾಕಿರತಕ್ಕದ್ದು Sales Tax, Profession Tax. Tax on Entry of Goods. Entertainment Tax. Excise duties, Passengaer tax

on State Carriages, Shops and Commercial Establishment Act, Court Fee Toll on bridges, and indirect taxes ultimately on whom? They are ultimately on the consumers only. ೧೬೧ ಕೋಟಿ ರೂಪಾಯಿಗಳ ನಿಜವಾದ ಖೋತಾ ಇದ್ದರೂ ಕೂಡ ಅದನ್ನು ೬೭ ಕೋಟಿ ಎಂದು ತೋರಿಸಿಕೊಳ್ಳುವುದಕ್ಕೆ ಈ ೬೦ ಪುಟಗಳ ಬಡ್ಜೆಟ್ಟನ್ನು ಮಂಡನೆ ಮಾಡಬೇಕಾಗಿರಲಿಲ್ಲ, ಈ ಕೆಲಸವನ್ನು ೫ ಪುಟ್ಟಗಳಲ್ಲಿ ಮಾಡಬಹುದಾಗಿತ್ತು. ಈ ೨೫ ಕೋಟಿ ಕರಭಾರವನ್ನು ಏನು ಹಾಕಿದ್ದೀರಿ ಇದು ನೇರವಾಗಿ ಜನತೆಯ ಮೇಲೆ ಬೀಳುತ್ತದೆ. ಇದರ ಬದಲು ೧೬೧ ಕೋಟಿ ರೂಪಾಯಿಗಳ ಖೋತಾವನ್ನು ತುಂಬುವುದಕ್ಕೆ ದಾರಿ ಇದೆ. ಆ ದಾರಿಯನ್ನು ಏಕೆ ಸರ್ಕಾರ ಹುಡುಕುವುದಿಲ್ಲ? ಸರ್ಕಾರಕ್ಕೆ ಇದು ಗೊತ್ತಾಗ ವುದಿಲ್ಲವೆ? ಸರ್ಕಾರಕ್ಕೆ ಇದು ಗೊತ್ತಿದ್ದರೂ ಕೂಡಾ ಈ ಒಂದು ೧೬೧ ಕೋಟಿ ಖೋತಾವನ್ನು ತುಂಬವ ದಾರಿಯನ್ನು ಹಿಡಿದರೆ ಅವರು ನಿಮಗೆ ಕೊಡುತ್ತಾ ಇರತಕ್ಕದಾರಿಯನ್ನೆಲ್ಲಾದರೂ ಬಂದ್ ಮಾಡುತ್ತಾರೆಂದು ಇದನ್ನು ಮಾಡು ವುದಿಲ್ಲ. ಈ ಬಗ್ಗೆ ನಿಜವಾದ ಚಿತ್ರವನ್ನು ನಾನು ಇಡುತ್ತೇನೆ. ಈ ಖೋತಾವನ್ನು ತುಂಬುವುದಕ್ಕೆ ಇರುವ ದಾರಿ ಹೆಂಡದ ದಾರಿ, ಸರ್ಕಾರ ಈ ಹೆಂಡದ ಉದ್ಯಮವನ್ನು ರಾಜ್ಯದಲ್ಲಿ ರಾಷ್ಟ್ರೀಕರಣ ಮಾಡಲಿ. ಇದನ್ನು ರಾಷ್ಟ್ರೀಕರಣ ಮಾಡಿದರೆ ರಾಜ್ಯದ ಬೊಕ್ಕಸಕ್ಕೆ ೨೫೦ ಕೋಟಿ ರೂಪಾಯಿಗಳು ಬರುತ್ತವೆ. ಏಕೆ ಇದನ್ನು ಮಾಡುವುದಿಲ್ಲ? ೮೨ ರೂಪಾಯಿಯು ಮಧ್ಯ ೧೦೦ ರೂಪಾಯಿ ಆದರೂ ಕುಡಿಯುವವನು ಕುಡಿದೇ ಕುಡಿಯುತ್ತಾನೆ, ಇದು ಎಷ್ಟು ಆದರೂ ನಾನೂ ಕುಡೀತೀನಿ, ಸದನದಲ್ಲಿ ಇರುವವರೆಲ್ಲರೂ ಕುಡಿಯುತ್ತಾರೆ. ಯಾರೂ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ,

ಅಧ್ಯಕ್ಷರು.—ಎಲ್ಲರೂ ಕುಡಿಯುವುದಿಲ್ಲ.

ಶ್ರೀ ಎಂ. ಸಿ. ನಾಣಯ್ಯ.—ಇದರಲ್ಲಿ ಅಧ್ಯಕ್ಷರು ಸೇರುವುದಿಲ್ಲ. ನಾನು ತಪ್ಪು ಹೇಳಿದೆ.

ಅಧ್ಯಕ್ಷರು.—ಇಲ್ಲಾ, ಕುಡಿಯುವವರು ಕುಡಿಯುತ್ತಾರೆ.

ಶ್ರೀ ಎಂ. ಸಿ. ನಾಣಯ್ಯ.—ಅಧ್ಯಕ್ಷರು ಕುಡಿಯುವುದಿಲ್ಲವೆಂದು ನನಗೆ ಪೂರ್ತಿ ಗೊತ್ತಿದೆ. ಬೇಕಾದರೆ ಜನತೆ ಕುಡಿಯುವುದಿಲ್ಲವೆಂದು ಹೇಳಲಿ. ಯಾರು ಬೆಳ್ಳಿ ಕಪ್‌ಗಳನ್ನು ಇಟ್ಟುಕೊಂಡು ಕುಡಿಯುತ್ತಾರೆ. ಅವರು ಕುಡಿಯುವುದಿಲ್ಲವೆಂದು ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ. ೧ ಲೀಟರ್ ಸರಾಯಿ ಬೆಲೆ ಅದನ್ನು ತಯಾರಿಸುವಾಗ ಕೇವಲ ೩೧ ಪೈಸೆ ಬೀಳುತ್ತದೆ. ಅದರ ಬೆಲೆ ಇವತ್ತು ಪೇಟೆಯಲ್ಲಿ ೨೪ ರೂಪಾಯಿ ಇದೆ. ಆದೂ ೭೫೦ ಮಿಲೀ ಲೀಟರ್‌ನ ಒಂದು ಬಾಟಲ್ಲಿಗೆ ೩೧ ಪೈಸೆಯ ಸರಾಯಿ ೨೧ ರಿಂದ ೨೪ ರೂಪಾಯಿಗೆ ಇವತ್ತು ಜನಸಾಮಾನ್ಯರಿಗೆ ಮಾರಲಾಗುತ್ತಿದೆ. ಇನ್ನು ಎರಡನೆಯದಾಗಿ, ಇಂಡಿಯನ್ ಮೇಡ್ ಫಾರಿನ್ ಲಿಕರ್ಸ್ ಯಾವುವು ಇವೆ ಅವುಗಳ ಬಗ್ಗೆ ಬಹುಶಃ ಅಧಿಕಾರಿಗಳಿಗೆ ಗೊತ್ತಿರಬಹುದು. ಏಕೆಂದರೆ, ಯಾವ ಅಧಿಕಾರಿಯೋ ಆಗಲಿ, ಯಾವ ಸಾಮಾನ್ಯ ಪ್ರಜೆಯೋ ಆಗಲಿ ಮಧ್ಯಮ ಹಾಗೂ ಸ್ವಲ್ಪ ಮಧ್ಯಮದಿಂದ ಮೇಲ್ಪಟ್ಟದಲ್ಲಿ ಇರುವ ವರ್ಗದವರು ಇದನ್ನು ಕುಡಿಯುತ್ತಾರೆ. ಇದರ ಎಕನಾಮಿಕ್ಸ್ ನನಗೆ ಗೊತ್ತಿದೆ. ಪೀಟರ್ ಸ್ಕಾಚ್ ವಿಸ್ಕಿ, ಮ್ಯಾಕ್‌ಡ್ವೆಲ್ ವಿಸ್ಕಿ ಮಾಕ್‌ಡ್ವೆಲ್ ಬ್ರ್ಯಾಂಡಿ ಇವುಗಳು ರಾಜ್ಯದಲ್ಲಿ ಪಾಪ್ಯುಲರ್ ಬ್ರ್ಯಾಂಡ್ಸ್ ಆಗಿವೆ. ಇವುಗಳ ಒಂದು ಲೀಟರನ ಬೆಲೆಗಳು ಎಷ್ಟು ಅಧ್ಯಕ್ಷರೇ? ೧ ಲೀಟರ್‌ಗೆ ಮೂರೂವರೆ ರೂಪಾಯಿ ಆಗುತ್ತದೆ. ಈ ೧ ಲೀಟರ್ ಮಧ್ಯದ ಒಂದು ಬಾಟಲಿಗೆ ೧೦೫ ರೂಪಾಯಿಗಳನ್ನು ಕೊಟ್ಟು ಕುಡಿಯಬೇಕಾಗಿದೆ. ಮ್ಯಾನುಫ್ಯಾಕ್ಚರರ್ಸ್ ಯಾರು ಇದ್ದಾರೆ ಅವರಿಂದ ಸರ್ಕಾರ ನೇರವಾಗಿ ಅದನ್ನು ಪಡೆದುಕೊಂಡು ಅಂಗಡಿಗಳನ್ನು ತೆಗೆದು ರಾಜ್ಯದ ಉದ್ದಗಲ ಮಾರಾಟ ಮಾಡಿದರೆ ಇವತ್ತು ರಾಜ್ಯದ ಬೊಕ್ಕಸಕ್ಕೆ ಬರುವ ಹಣ ಅಪಾರವಾದುದು. ಹೀಗೆ ಮಾಡುವುದರಿಂದ ೨೪ ರೂಪಾಯಿ ಮಾರಾಟವಾಗುತ್ತಿರುವುದನ್ನು ೧೦ ರೂಪಾಯಿಗೆ ಮಾರಬಹುದು. ಹೀಗೆ ಮಾಡುವುದರಿಂದ ಇವತ್ತು ಆಗುತ್ತಿರತಕ್ಕಂತಹ ಕಳ್ಳಬಟ್ಟಿ ದುರಂತಗಳು ಸಂಪೂರ್ಣವಾಗಿ ಬಂದ್ ಆಗುತ್ತವೆ, ಕಳ್ಳಬಟ್ಟಿ ರಾಜರು ಯಾರೂ ಉಳಿಯುವುದಿಲ್ಲ. ಸರ್ಕಾರ ಏಕೆ ಇದನ್ನು ಮಾಡುವುದಿಲ್ಲ? ಈ ಕಡೆ ಸರ್ಕಾರ ಏಕೆ ಗಮನಹರಿಸುವುದಿಲ್ಲ. ಬೆಲೆ ಜಾಸ್ತಿಯಾಗಿರುವುದರಿಂದ ಜನ ಕುಡಿಯುವುದನ್ನು ನಿಲ್ಲಿಸುತ್ತಿದ್ದಾರೆ ಎನ್ನುವ ವಾದವನ್ನು ಯಾರೂ ಒಪ್ಪುವುದಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಅಧಿಕಾರಿಗಳು ಸಲಹೆ ಮಾಡಲಿ. ಈ ರೀತಿ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ೨೫೦ ಕೋಟಿಗೂ ಹೆಚ್ಚು ಹಣ ಬರುತ್ತದೆಂದು ನೈಜವಾದ ಚಿತ್ರವನ್ನು ಅಧಿಕಾರಿಗಳು ಸರ್ಕಾರಕ್ಕೆ ಕೊಟ್ಟರೆ ಖಂಡಿತ ಸರ್ಕಾರ ಅದನ್ನು ಒಪ್ಪುವುದಕ್ಕೆ ಸಾಧ್ಯ.

ಒಂದು ವೇಳೆ ಒಪ್ಪದೇ ಹೋದರೆ ಅದಕ್ಕೆ ಕಾರಣ ಏನು ? ಅದು ಗೊತ್ತು, ಏಕೆಂದರೆ ನಮ್ಮ ರಾಜಕೀಯ ಪರಿಸ್ಥಿತಿಯಲ್ಲಿ ಅಧ್ಯಕ್ಷರೆ ಇಡೀ ರಾಷ್ಟ್ರದಲ್ಲಿ ಇವತ್ತು there are three powerful lobbies in our country.

They are, (1) Liquor lobby (2) Sugar Lobby and (3) Tandulis (Beedi leaves) of Madhya Pradesh. These three lobbies control the entire body politic of our country. If these three lobbies are controlled by the Government everything will come down, the prices will come down and the common man will definitely have a happy time. The Government need not rely on a paltry sum of Rs. 25 crores by taxing the common man. I would rather appeal to the Government, and I think Mr. Y. Ramakrishna will straightaway agree with me when I make the suggestion to nationalise this liquor trade at least in Karnataka and open the eyes of other States and you claim that Karnataka stands first in everything. Let Karnataka make a beginning by nationalising this liquor trade. Let all other States follow. Why we should not do that ? ಇದರ ಬಗ್ಗೆ ತಾವು ಗಮನ ಹರಿಸಿ., ಇದರ ಬಗ್ಗೆ ಗಮನಹರಿಸಿದರೆ, ಜನಸಾಮಾನ್ಯರ ಮೇಲೆ ಚಿಕ್ಕಪುಟ್ಟ ಕರಭಾರವನ್ನು ಹಾಕತಕ್ಕಂಥ ಪರಿಸ್ಥಿತಿ ಬರುವುದಿಲ್ಲ. ದಯವಿಟ್ಟು ಈ ಕಡೆ ಗಮನಹರಿಸಿ ಎಂದು ಇರತಕ್ಕ ನೈಜ ಚಿತ್ರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾದೇಗೌಡರು ಇಲ್ಲಿಯೇ ಇದ್ದಾರೆ, ಬಹಳ ಸಂತೋಷ. ಕಾಡುಗೋಡಿಯಲ್ಲಿ ವರ್ಲ್ಡ್ ಫಾರೆಸ್ಟ್ ಡೇ ಆಚರಿಸಿ, ಅಲ್ಲಿನ ನರ್ಸರಿಗೆ ಶಾಸಕರನ್ನೆಲ್ಲಾ ಕರೆದುಕೊಂಡು ಹೋಗಿದ್ದೀರಿ, ನಾನು ಕೂಡ ಬರಬೇಕೆಂದು ಬಹಳ ಆಸೆ ಪಟ್ಟೆ, ಮಧ್ಯಾಹ್ನ ಮಾಡಿ ಬಿಟ್ಟರಲ್ಲವೆಂದು ಮನಸ್ಸಿನಲ್ಲಿ ನೊಂದು ಕೊಂಡೆ. ಕಾರಣ, ನಾವು ಆಯವ್ಯಯ ಪತ್ರದ ಮೇಲೆ ಮಾತನಾಡಲಿಕ್ಕೆ ತಯಾರಿ ಮಾಡಿಕೊಳ್ಳಬೇಕಾಗಿತ್ತು, ದಯವಿಟ್ಟು ಮನ್ನಿಸಿ. ತಾವು ವರ್ಲ್ಡ್ ಫಾರೆಸ್ಟ್ ಡೇ ಮಾಡಿದ್ದೀರಿ, ತಾವು ಜಾರಿ ಮಾಡಿರತಕ್ಕ ಪತ್ರಗಳನ್ನು ನೋಡಿ, ಕವರ್‌ಗಳನ್ನು ಸರ್ಕಾರದ ಮುಖಾಂತರ ಹಂಚಿದ್ದೀರಿ. 'Tree for survival' ಎಂದು ಹಾಕಿದ್ದಾರೆ. Survival for whom ? Survival of human race, survival of flora and fauna of this country. ಇದರ ಬಗ್ಗೆ ಗಮನಕ್ಕೆ ತಂದರೆ, ಇವತ್ತು ಏನು ಮಾಡುತ್ತಿದ್ದೀರಿ, ಫಾರೆಸ್ಟ್ ಡೇ ಮಾಡುತ್ತಿದ್ದೀರಿ. ಮೈಸೂರಿನಲ್ಲಿ ಜನವರಿಗೆ ಮೂರನೇ ತಾರೀಖು ಶ್ರೀಮತಿ ಇಂದಿರಾಗಾಂಧಿಯವರು "ಸೈನ್ಸ್ ಕಾಂಗ್ರೆಸ್" ಉದ್ಘಾಟನೆ ಮಾಡಿದರು. ಇದರಲ್ಲಿ ರಾಷ್ಟ್ರದ ಉದ್ದಗಲದಿಂದ ವಿಜ್ಞಾನಿಗಳು ಬಂದು ಎಲ್ಲಾ ಸಮಸ್ಯೆಗಳನ್ನು ಚರ್ಚೆ ಮಾಡುವುದರ ಜೊತೆಗೆ ಅರಣ್ಯದ ಬಗ್ಗೆ ದೀರ್ಘವಾದ ಚರ್ಚೆ ಮಾಡಿ, ಮೂರು ದಿವಸಗಳ ನಂತರ ಒಂದು ದೊಡ್ಡ ಠರಾವನ್ನು ಮಾಡಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. They have said, with a view to survive the human race, to maintain the ecological balance in the country where it has gone under rapid change and with a view to protect the top soil of the country, we make a request to the Government to stop cutting of trees in three regions - Himalayan region, Vindhyan region and Western Ghats for a period of 25 years. They say not even a single tree shall be cut in these three regions if at all you want that human race to survive. ಇದರ ಬಗ್ಗೆ ಯಾರಾದರೂ ಕಲ್ಪನೆ ಮಾಡಿದ್ದಾರೆಯೆ ? ಕಳೆದ ಎರಡು ವರ್ಷದಿಂದ ವಿಧಾನ ಸಭೆಯಲ್ಲಿ ಮತ್ತು ಹೊರಗಡೆ ಪಶ್ಚಿಮಘಟ್ಟದ ಅರಣ್ಯವನ್ನು ದಯಮಾಡಿ ಉಳಿಸಿ, ರಕ್ಷಣೆ ಮಾಡಿ ಎಂದು ಕೇಳಿಕೊಳ್ಳುತ್ತಲೇ ಇದ್ದೇನೆ. ಕಾವೇರಿ ನದಿಯ ಅಚ್ಚುಕಟ್ಟಿನಲ್ಲಿ ೩೬ ಸಾವಿರ ಎಕರೆಯಲ್ಲಿ ೨೬,೦೦೦ ಎಕರೆ ಈಗಾಗಲೇ ಬರಡಾಗಿದೆ, ೧೦,೦೦೦ ಎಕರೆ ಮಾತ್ರ ಉಳಿದಿದೆ, ದಯವಿಟ್ಟು ಅದನ್ನು ಸಂರಕ್ಷಣೆ ಮಾಡಿ ಎಂದು ಕೇಳಿಕೊಳ್ಳುತ್ತಲೇ ಇದ್ದೇನೆ, ಇದುವರೆವಿಗೂ ಸರ್ಕಾರ ಅದರ ಬಗ್ಗೆ ಕ್ರಮ ಕೈಗೊಂಡಿಲ್ಲ.

ಶ್ರೀ ಜಿ. ಮಾದೇಗೌಡ.—ಯಾವಾಗ ಆಗಿದ್ದು ?

ಶ್ರೀ ಎಂ. ಸಿ. ನಾಣಯ್ಯ.—ಕಳೆದ ಹತ್ತಾರು ವರ್ಷಗಳಿಂದ ನಡೆದಿದೆ, ಹೋದದ್ದು ಹೋಯಿತು, ಇರತಕ್ಕ ೧೦,೦೦೦ ಎಕರೆ ಸಂರಕ್ಷಣೆ ಮಾಡಿಯೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಮಾದೇಗೌಡ.—ಎಲ್ಲಿ ಕೊಟ್ಟಿದ್ದೇವೆ ?

ಶ್ರೀ ಎಂ. ಸಿ. ನಾಣಯ್ಯ.—ಸ್ವಾಮಿ, ನಾನು ತಪ್ಪು ಹೇಳಿದ್ದರೆ, ದಯವಿಟ್ಟು ಅರಣ್ಯ ಮಂತ್ರಿಯವರು ಕ್ಷಮಿಸಬೇಕು. ಪಶ್ಚಿಮಘಟ್ಟದಲ್ಲಿರತಕ್ಕ ಕಾವೇರಿ ನದಿಯ ಅಚ್ಚುಕಟ್ಟು ಪ್ರದೇಶದಿಂದ ಇವತ್ತು ಒಂದು ವರ್ಷಕ್ಕೆ ಸುಮಾರು ೨೦ ಲಕ್ಷ ಕ್ಯೂಬಿಕ್ ಮೀಟರ್‌ನಷ್ಟು ಮರವನ್ನು ರವಾನೆ ಮಾಡುತ್ತಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದ ಒಂದೇ ಸಮನೆ ಮಾಡುತ್ತಿದ್ದಾರೆ. ೨೬ ವುಡ್ ಬೇಸಿಸ್ ಕೈಗಾರಿಕೆಗಳಿಗೆ ಲೀಸ್ ಬೇಸಿಸ್‌ನಲ್ಲಿ ಮಾಡಿಕೊಂಡಿರುವ ಪ್ರತಿಫಲದಿಂದ ಇದು ನಡೆಯುತ್ತಿದೆ.

ಶ್ರೀ ಜಿ. ಮಾದೇಗೌಡ.—ಇದನ್ನು ತಪ್ಪಿಸುವುದು ಹೇಗೆ ಹೇಳಿ.

ಶ್ರೀ ಎಂ. ಸಿ. ನಾಣಯ್ಯ.—ಕೈಗಾರಿಕೆಗಳ ಜೊತೆಯಲ್ಲಿ ಮಾಡಿರತಕ್ಕ ಅಗ್ರಿಮೆಂಟ್‌ಗಳು ಯಾವುದು ಇದೆ, ಅದನ್ನು ಏಕಾಏಕಿ ರದ್ದು ಮಾಡಿ. ರದ್ದು ಮಾಡುವುದಕ್ಕೆ ನೀವು ಹೋಗುವುದಿಲ್ಲ, ಅವರು ಹೈಕೋರ್ಟಿಗೆ ಹೋಗುತ್ತಾರೆಂದು ಸ್ಟೇ ತೆಗೆದುಕೊಂಡು ಬರುತ್ತಾರೆಂದು ಹೇಳುತ್ತೀರಿ ಹೌದು. ಆದರೆ, ನೀವು ಆಜ್ಞೆ ಮಾಡತಕ್ಕ ಸಂದರ್ಭದಲ್ಲಿ ಪಶ್ಚಿಮಘಟ್ಟದ ಜಲಾನಯನ ಪ್ರದೇಶದಲ್ಲಿ ಅರಣ್ಯವನ್ನು ಉಳಿಸದೇ ಹೋದರೆ ಮಳೆ ಬರುವುದಿಲ್ಲ; ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಒಳಗಾಗತಕ್ಕಂಥ ಪರಿಸ್ಥಿತಿ ಬರುತ್ತದೆ. ಜೊತೆಗೆ ಈ ಭಾಗದಲ್ಲಿರುವ ಮರಗಳು ಹೋದರೆ, ಕಾವೇರಿ ನದಿಯ ಅಚ್ಚುಕಟ್ಟು ಪ್ರದೇಶಗಳ ತೊಂದರೆಗೆ ಒಳಗಾಗುತ್ತದೆಂದು ಹೇಳಬೇಕು. You tell them, with a view to maintain the ecological balance of the State, with a view to see that the top soil of the State is not washed out and with a view to see that our reservoirs would not be silted in the interest of the State we are nullifying all the agreements. I want to know which High Court will come in the way. The persons who are deciding the cases must also survive. They know about it. But unfortunately you are not going forward with these representations. ಅದರ ಬದಲು ಕಳೆದ ವರ್ಷ ಇದೇ ಸದನದಲ್ಲಿ ಈ ವಿಷಯವನ್ನು ಎತ್ತಿ ಪಶ್ಚಿಮಘಟ್ಟದಲ್ಲಿರುವ ಉತ್ತಮವಾದಂಥ ಅರಣ್ಯವನ್ನು ನಾಶ ಮಾಡುವುದನ್ನು ತಪ್ಪಿಸಿ, ಸಂರಕ್ಷಣೆ ಮಾಡಿ ಎಂದು ಕೇಳಿದಾಗ, ತಾವು ಅಡ್ವೋಕೇಟ್ ಜನರಲ್ ಅವರಿಗೆ ಪತ್ರ ಬರೆದಿರಿ, ಆದ್ದರಿಂದ ಈ ಸಂದರ್ಭದಲ್ಲಿ ತಮ್ಮನ್ನು ಪ್ರಶಂಸೆ ಮಾಡುತ್ತೇನೆ. ಕೆಳಗಿನ ಕೋರ್ಟಿನಲ್ಲಿ ಏನೊಂದು ತೀರ್ಮಾನಕ್ಕೆ ತಡೆಯಾಜ್ಞೆ ಕೊಟ್ಟರು, ಅದಕ್ಕೆ ಅರ್ಜಿ ಹಾಕಿ ಎಂದು ಹೇಳಿದೆವು. ಮೇಲಿನ ಕೋರ್ಟಿಗೆ ಬಂದಾಗ ತಡೆಯಾಜ್ಞೆಯನ್ನು ಕೇಳದೇ ಹೋದರೆ ಹೈಕೋರ್ಟು ಏತಕ್ಕೆ ಕೊಡಬೇಕು ? ಇವರ ಮುಖಾಂತರ ಕಾಗದ ಕಳುಹಿಸಿ ತಡೆಯಾಜ್ಞೆ ಕೊಡಬೇಕೆಂದು ಕೇಳುವ ಬದಲು ರಾಜ್ಯದ ಅಡ್ವೋಕೇಟ್ ಜನರಲ್ ಅವರು ತಡೆಯಾಜ್ಞೆ ಕೇಳಲಿಲ್ಲ, ವಾದಿ ಜೊತೆಯಲ್ಲಿ ಜಾಮೀಲಾಗಿ ಜಾಯಿಂಟ್ ಮೆಮೋ ಫೈಲ್ ಮಾಡಿದ್ದಾರೆ. ಇಂಥ ಅಡ್ವೋಕೇಟ್ ಜನರಲ್ ಅವರಿಂದ, ಇಂಥ ಸರ್ಕಾರೀ ವಕೀಲರುಗಳಿಂದ ರಾಜ್ಯದ ಹಿತರಕ್ಷಣೆ ಮಾಡಲಿಕ್ಕೆ ಸಾಧ್ಯವೆ ? ಇವರನ್ನು ಮುಂದೆ ತೆಗೆದು ಹಾಕಿ. ರಾಜ್ಯದ ಹಿತವನ್ನು ಕಾಪಾಡತಕ್ಕ ವಕೀಲರುಗಳನ್ನು ಮದ್ರಾಸಿನಿಂದಲಾದರೂ ಕರೆಸಿ ನೇಮಕ ಮಾಡಿ, ಬೆಂಗಳೂರಿನಲ್ಲಿಯೂ ಕೂಡ ಉತ್ತಮವಾದ ವಕೀಲರುಗಳು ಇದ್ದಾರೆ, ಅವರಿಗೆ ೫-೧೦ ಸಾವಿರ ರೂಪಾಯಿಗಳನ್ನು ಕೊಡಿ. ಈ ಕೇಸನ್ನು ನಡೆಸುತ್ತಾರೆ. ಇದನ್ನು ಮಾಡುವುದನ್ನು ಬಿಟ್ಟು ಜಾಯಿಂಟ್ ಮೆಮೋ ಫೈಲ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೀರಿ. ಕಾನೂನು ಮಂತ್ರಿಗಳ ಆಫೀಸಿನಿಂದ ಹೋಗಿದೆ. ಯಾವ ಆಧಾರದ ಮೇಲೆ ಜಾಯಿಂಟ್ ಮೆಮೋ ಫೈಲ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ? ಇನ್ನೊಂದು ವಿಷಯ ಹರಿಹರ ಪಾಲಿ ಫೈಬರ್ ಕಾರ್ಖಾನೆಗೆ ಮರಗಳನ್ನು ಒದಗಿಸುವ ಬಗ್ಗೆ ಮಾಡಿಕೊಂಡಿರುವಂತ ಅಗ್ರಿಮೆಂಟ್‌ಗೆ ಸಂಬಂಧಪಟ್ಟಂತೆ ಮಾನ್ಯ ಆರ್ಥಿಕ ಮಂತ್ರಿಯವರು ಕಳೆದ ವರ್ಷ ಮುಂಗಡ ಪತ್ರವನ್ನು ಸಭೆಯ ಮುಂದೆ ಮಂಡಿಸುವಾಗ ಒಂದು ಮಾತನ್ನು ಹೇಳಿದ್ದರು. ಸೀನಿಯೋರೇಜ್ ವ್ಯಾಲ್ಯು ಬಗ್ಗೆ. ಕರ್ನಾಟಕ ಅರಣ್ಯ ಕಾಯಿದೆಗೆ ತಿದ್ದುಪಡಿ ತಂದು

ಹಲವಾರು ವರ್ಷಗಳಿಂದ ಅತಿ ಕಡಿಮೆ ಬೆಲೆಗೆ ಕೊಡುವಂತ ಮರಗಳ ಬೆಲೆಗಳನ್ನು ಏರಿಸಲಾಗುವುದೆಂದು ಘೋಷಣೆ ಮಾಡಿದರು. ೧೯ನೇ ಫೆಬ್ರುವರಿ ೧೯೮೧ರಲ್ಲಿ ಹೇಳಿದರು. ಸೀನಿಯೋರೇಜ್ ವ್ಯಾಲ್ಯೂ ಇದುವರೆಗೆ ಜಾರಿಗೆ ತರದೇ ಇರುವುದಕ್ಕೆ ಕಾರಣವೇನು ? ಸರ್ಕಾರಕ್ಕೆ ಮನಸ್ಸಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಜಿ. ಮಾದೇಗೌಡ.—ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ.

ಶ್ರೀ ಎಂ. ಸಿ. ನಾಣಯ್ಯ.—ಹರಿಹರ ಪಾಲಿ ಫೈಬರ್ ಒಂದಕ್ಕೆ ಮಾತ್ರ. ಸ್ವಾಮಿ, ತಾವು ಪಾರ್ಟ್ ಟೈಮ್ ಮಂತ್ರಿಯಾಗಿದ್ದೀರಿ, ನಾನು ಇನ್‌ಸ್ಟಾಲ್‌ಮೆಂಟ್ ಮಂತ್ರಿಯಾಗಿ ೫೯ ದಿವಸಗಳು ಮಾತ್ರ ಇದ್ದೆ. ನಾನು ಒಂದು ವರ್ಷ ಮಂತ್ರಿಯಾಗಿ ಮುಂದುವರಿದಿದ್ದರೂ ಕರ್ನಾಟಕ ರಾಜ್ಯದಲ್ಲಿರತಕ್ಕ ಟಿಂಬರ್ ವ್ಯಾಪಾರಿಗಳನ್ನು ಸಂಪೂರ್ಣವಾಗಿ ಕೇರಳಕ್ಕೆ ಕಳುಹಿಸುತ್ತಿದ್ದೆ. ಇವತ್ತು ತಾವು ಮಂತ್ರಿಯಾಗಿದ್ದೀರಿ, ಆ ಕೆಲಸವನ್ನು ದಯವಿಟ್ಟು ಮಾಡಿ. ಇವತ್ತು ಸೀನಿಯೋರೇಜ್ ವ್ಯಾಲ್ಯೂ ಮಾಡದೇ ಇರುವುದರಿಂದ ರಾಜ್ಯದ ಬೊಕ್ಕಸಕ್ಕೆ ಕೇವಲ ೨ ಕೋಟಿ ಮಾತ್ರ ಬರುತ್ತಿದೆ. ಇದನ್ನು ಮಾಡಿದ ಮೇಲೆ ರಾಜ್ಯದ ಬೊಕ್ಕಸಕ್ಕೆ ೧೯ ಕೋಟಿ ರೂಪಾಯಿ ಆದಾಯ ಬರುತ್ತದೆಂದು ನಿರೀಕ್ಷಣೆ ಮಾಡಿದ್ದೆವು. ೨೧ನೇ ಫೆಬ್ರುವರಿ ೧೯೮೧ರಲ್ಲಿ ತಿದ್ದುಪಡಿಯನ್ನು ತಂದು ಈ ಸದನದ ಒಪ್ಪಿಗೆಯನ್ನು ಪಡೆದರೂ ಅದನ್ನು ಜಾರಿಗೆ ತರದೇ ೨೮ನೇ ತಾರೀಖಿನಂದು ತಡೆಯಾಜ್ಞೆ ಕೊಟ್ಟಲ್ಲಿ ಇದು ಯಾವ ಮರ್ಮ ?

೪-೩೦ ಪಿ.ಎಂ.

ಅಧ್ಯಕ್ಷರೆ, ಇವರು ಏನೋ ಮರಗಳನ್ನು ಉಳಿಸಲಿಕ್ಕೆ ಅಂತ ಹೊರಟು ಈ ದರಗಳನ್ನು ಏರಿಸಿದರು. ಅದಕ್ಕೆ ಒಂದು ತಡೆ ಆಜ್ಞೆ ಕೊಟ್ಟು ಮರಗಳನ್ನು ಕಡಿದುಹಾಕಿದರು. ರಾಜ್ಯದ ಬೊಕ್ಕಸಕ್ಕೆ ಬರತಕ್ಕ ೧೭ ಕೋಟಿ ರೂಪಾಯಿ ಹೋಯಿತು.

ಶ್ರೀ ಜಿ. ಮಾದೇಗೌಡ.—ಅದನ್ನು ಜಾರಿಗೆ ಕೊಡುವುದಿಲ್ಲ ಎಂದು ಎಲ್ಲಿ ಹೇಳಿದ್ದೇನೆ. ಸ್ಟೇ ಆರ್ಡರ್ ಕೊಟ್ಟಾದ ಮೇಲೆ ಅದನ್ನು ನಾವು ಜಾರಿಗೆ ಕೊಡುವುದಿಲ್ಲ ಎಂದು ಏತಕ್ಕೆ ಊಹೆ ಮಾಡಿಕೊಳ್ಳುತ್ತೀರಿ.

ಶ್ರೀ ಹೆಚ್. ಗಂಗಾಧರನ್.—ಮರ ಎಲ್ಲಾ ಓಲ್ಡ್ ರೇಟಿನಲ್ಲಿ ಹೋಗುತ್ತಿದೆಯಲ್ಲ.

ಶ್ರೀ ಎಂ. ಸಿ. ನಾಣಯ್ಯ.—ಹರಿಹರ ಪಾಲಿಫೈಬರ್ಸ್‌ಗೆ ಯೂಕಲಿಫ್ಟ್ಸ್‌ಗೆ ನೀವು ಏರಿಸಿರತಕ್ಕ ಬೆಲೆಯಲ್ಲಿ ೧೬೧ ಮರಗಳಲ್ಲಿ ಅದು ಒಂದು. ೧೬೦ ಮರಗಳದು ಬೆಲೆಯಾಗಿದೆ. ಅದರ ಬಗ್ಗೆ ಯಾರೂ ಹೈಕೋರ್ಟಿಗೆ ಹೋಗಿಲ್ಲ. ಆದರೆ ಈ ಮರದ ವ್ಯಾಪಾರಿಗಳು ಈ ಪ್ಲೈವುಡ್ ಫ್ಯಾಕ್ಟರಿ ಮ್ಯಾನ್ಯು ಫ್ಯಾಕ್ಚರರ್ಸ್ ತಮ್ಮ ಹತ್ತಿರ ರೆಪ್ರಸೆಂಟೇಷನ್ ತಂದು ಸ್ವಾಮಿ ಮರಗಳ ಬೆಲೆಯನ್ನು ಏರಿಸಿಬಿಟ್ಟಿದ್ದೀರಲ್ಲ, ಇದರಿಂದ ಕಾರ್ಖಾನೆ ನಡೆಸಲಿಕ್ಕೆ ಆಗುತ್ತದೆಯೋ ಎಂದು ತಮ್ಮನ್ನು ಕೇಳಿದ ಮೇಲೆ ತಮಗೆ ಅನುಕಂಪ ಬಂತು. ೨೬ ಜನ ಬಂದು ನಿಮ್ಮನ್ನು ಕೇಳಿಬಿಟ್ಟರು, ೧೭ ಕೋಟಿ ರೂಪಾಯಿ ವರಮಾನ ಬರುತ್ತಿರತಕ್ಕಂಥ ಕಾನೂನನ್ನು ಬದಿಗೊತ್ತಿ ಅದಕ್ಕೆ ಸ್ಟೇ ಆರ್ಡರ್ ಕೊಟ್ಟು ಹಳೇ ವಸೂಲಾತಿ ಮಾಡ್ರಿ ಒಬ್ಬೊಬ್ಬರ ಕೈಗೆ ೫-೫ ಲಕ್ಷ ರೂಪಾಯಿ ಗ್ಯಾರಂಟಿ ಸಿಕ್ಕುತ್ತದೆ ಎನ್ನುವ ಮಟ್ಟಕ್ಕೆ ಆಯಿತು. ಅವರು ತೆಗೆದುಕೊಂಡು ಹೋಗುತ್ತಾ ಇರತಕ್ಕ ಮೊತ್ತ ಲಕ್ಷಾಂತರ ರೂಪಾಯಿಗಳು. ಹಳೇ ರೇಟ್‌ನಲ್ಲಿ ವಸೂಲಾತಿ ಮಾಡಿದರೆ ಮತ್ತೆ ಏತಕ್ಕೆ ಇದನ್ನು ಜಾರಿಗೆ ಕೊಟ್ರಿ. ಇದನ್ನು ಜಾರಿಗೆ ತರುವಾಗ ಕೂಲಂಕಷವಾಗಿ.........

ಶ್ರೀ ಜಿ. ಮಾದೇಗೌಡ.—ನೀವು ಕೊಡಗಿನಿಂದ ಬಂದಿರತಕ್ಕಂಥವರು ತಮ್ಮಲ್ಲಿ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಈಗ ನಾವು ಏನು ರೇಟು ರಿವೈಸ್ ಮಾಡಿದ್ದೇವೆ ಆ ರೇಟು ರೀಸನಬಲ್ ರೇಟು ಎಂದು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಂ. ಸಿ. ನಾಣಯ್ಯ.—ನೀವು ಮಾಡಿರತಕ್ಕಂಥ ರೇಟು ಸರಿಸಮಾನವಾದುದು......It is absolutely correct. Technically, your departmental officers have gone into the whole gamut of this question. ಮತ್ತೆ ೬ ತಿಂಗಳವರೆಗೆ ಜಿಜ್ಞಾಸೆ ನಡೆದು ಉತ್ತಮವಾದಂಥ ರೇಟನ್ನು ನಿಮ್ಮ ಮುಂದೆ ತಂದು ನಿಮ್ಮ ಒಪ್ಪಿಗೆಯನ್ನು ಪಡೆದಿದ್ದಾರೆ ಎನ್ನುವುದನ್ನು ಮರೆತು ಹೋಗಿದ್ದೀರಾ ?

ಶ್ರೀ ಜಿ. ಮಾದೇಗೌಡ.—ಯಾವ ದೇಶದಲ್ಲಾದರೂ ಆ ರೇಟು ಇದೆಯೇ ?

ಶ್ರೀ ಎಂ. ಸಿ. ನಾಣಯ್ಯ.—ಹಾಗಾದರೆ ಈ ರೇಟು ಜಾಸ್ತಿಯಾಗಿದೆ. ಮರದ ವ್ಯಾಪಾರಿಗಳಿಗೆ ಈ ರೇಟನ್ನು ಕಡಿಮೆ ಮಾಡಬೇಕೆಂದಿದ್ದರೆ ಸ್ಪಷ್ಟಪಡಿಸಿ ಆಗಲಾದರೂ ನಮಗೆ ಸ್ಪಷ್ಟವಾಗಿ ಗೊತ್ತಾಗಲಿ ತಮ್ಮ ಧೋರಣೆ ಏನು ಎಂದು.

ಶ್ರೀ ಜಿ. ಮಾದೇಗೌಡ.—ನಮ್ಮ ಧೋರಣೆ ಸರ್ಕಾರಕ್ಕೂ ವರಮಾನ ಬರಬೇಕು. ಇಂಡಸ್ಟ್ರಿಗಳು ಉಳಿಯಬೇಕು ಎನ್ನುವುದೇ ನಮ್ಮ ಧೋರಣೆ. ನೀವು ಹೇಳಿದಿರಿ ನಾನು ಫಾರೆಸ್ಟ್ ಮಿನಿಸ್ಟರ್ ಆಗಿದ್ದರೆ ಎಲ್ಲಾ ಇಂಡಸ್ಟ್ರಿಗಳವರನ್ನು ಕೇರಳಕ್ಕೆ ಕಳುಹಿಸಿಬಿಡುತ್ತಿದ್ದೆ ಎಂದು ಆ ಧೋರಣೆ ನಮ್ಮದು ಅಲ್ಲ. ಇವೊತ್ತು ಇಂಡಸ್ಟ್ರಿಗಳು ಇವೆ, ತಪ್ಪೋ, ರೈಟೋ ಇವು ನಮ್ಮ ಕಾಲದಲ್ಲಿಯೇ ಬಂದವಲ್ಲ, ಹಿಂದಿನ ಕಾಲದಿಂದಲೂ ಇಂಡಸ್ಟ್ರಿಗಳನ್ನು ಬೆಳೆಸಿಕೊಂಡು ಬಂದಿರುವುದರಿಂದ ಈ ಸರ್ಕಾರ ಅದಕ್ಕೆ ಹೊಣೆಯಲ್ಲ, ನೀವು ಮಂತ್ರಿಗಳಾಗಿದ್ದಿರಿ. ನೀವು ಇರತಕ್ಕ ದಿವಸಗಳಲ್ಲಿ ಅಧಿಕಾರ ಮಾಡಬೇಕಿದ್ದರೆ ನೀವು ಇದ್ದಂಥ ದಿವಸಗಳಲ್ಲಿಯೇ ಅವರನ್ನು ಕೇರಳಕ್ಕೆ ಕಳುಹಿಸಬಹುದಾಗಿತ್ತು ನೀವು ಏತಕ್ಕೆ ಆ ಕೆಲಸ ಮಾಡಲಿಲ್ಲ, ಏತಕ್ಕೆ ಕಣ್ಣು ಮುಚ್ಚಿಕೊಂಡು ಇದ್ದಿರಿ, ಅದಕ್ಕೆ ನೀವು ಜವಾಬ್ದಾರರು.

ಶ್ರೀ ಎಂ.ಸಿ. ನಾಣಯ್ಯ.—ನಾನು ಜವಾಬ್ದಾರಿ ಅಲ್ಲ.

ಶ್ರೀ ಜಿ. ಮಾದೇಗೌಡ.—ಸರ್ಕಾರ ಕಾನೂನು ಹೊರಡಿಸಲಿಕ್ಕೆ ಮೂರೇ ದಿವಸ ಸಾಕು ಅದಕ್ಕಿಂತಲೂ ಹೆಚ್ಚು ಟೈಮ್ ಬೇಕೇನು

ಶ್ರೀ ಎಂ.ಸಿ. ನಾಣಯ್ಯ.—ನಾನು ಮಾಡಿರತಕ್ಕಂಥ ಆಜ್ಞೆ ಒಂದು ಇದೆ. ಆ ಆಜ್ಞೆಯನ್ನು ಇವೊತ್ತು ಜಾರಿಗೆ ತನ್ನಿ. ಹಿಂದೆ ನಾನು ಮಾನ್ಯ ದೇವರಾಜ್ ಅರಸ್ ಅವರಿಗೆ ಒಂದು ಮಿನಿಟ್ ಹಾಕಿದ್ದೆ ಕರ್ನಾಟಕದಲ್ಲಿರತಕ್ಕಂಥ ಅರಣ್ಯ, ಈ ನ್ಯಾಷನಲ್ ಆ್ಯವರೇಜ್ ೨೬ ಪರ್‌ಸೆಂಟ್ ಇದ್ದುದು ಈಗ ೧೧ ಪರ್‌ಸೆಂಟ್‌ಗೆ ಇಳಿದಿದೆ. ನಮ್ಮಲ್ಲಿ ಮೇಜರ್ ರಿವರ್ಸ್ ಯಾವುದು ಇದೆ ಅಚ್ಚುಕಟ್ಟು ಪ್ರದೇಶ ಅದರಲ್ಲಿ ರತಕ್ಕ ಅರಣ್ಯಗಳು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳಿಂದ ೬೦ ಸಾವಿರ ಎಕರೆ ಹೋಯಿತು ಈ ವುಡ್ ವರ್ಕ್ ಇಂಡಸ್ಟ್ರೀಸ್‌ಗಳಿಗೆ ಕೊಟ್ಟಿರುವುದು ೩೦ ಎಕರೆ ಹೋಯಿತು. ಉಳಿದುಕೊಂಡಿರತಕ್ಕ ಅರಣ್ಯ ಎಷ್ಟು ಇದೆ ದಯವಿಟ್ಟು ಅದನ್ನಾದರೂ ಉಳಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕೆಂದು ಪಶ್ಚಿಮ ಘಟ್ಟದಲ್ಲಿರತಕ್ಕ ಅರಣ್ಯದಲ್ಲಿ ಒಂದೇ ಒಂದು ಮರವನ್ನು ಇನ್ನು ೧೦ ವರ್ಷಗಳವರೆಗೆ ಕಡಿಯದ ಹಾಗೆ ಕೈಗೊಳ್ಳಬೇಕೆಂದು ನಾನು ಒಂದು ನೋಟ್ ಬರೆದೆ ಅಂದಿನ ಮುಖ್ಯ ಮಂತ್ರಿಗಳಾದಂಥ ಮಾನ್ಯ ದೇವರಾಜ್‌ಅರಸ್ ಅವರ ಜೊತೆಯಲ್ಲಿ ಚರ್ಚೆ ಮಾಡಿದೆ, ಆಗ ಅವರು ಒಂದು ಆರ್ಡರ್ ಮಾಡಿದರು I agree with Forest Minister Issue Notification. ಅಧ್ಯಕ್ಷರೆ, ಅದನ್ನು ಮಾಡಿದ ಒಂದು ವಾರದಲ್ಲಿ ಅಧಿಕಾರ ಕಳೆದುಕೊಂಡೆವು.ಆದರೂ ನಾವು ನಿಷ್ಠೆಯಿಂದ ಇದನ್ನು ಮಾಡಬೇಕೆಂದು ಆಜ್ಞೆ ತಂದಿದ್ದೇವೆ. ಆ ಫೈಲು ಹುಡುಕಿ ನೋಡಿ, ಸಂಬಂಧಪಟ್ಟ ಸೆಕ್ರೆಟರಿ ಕನ್‌ಸರ್‌ವೇಟರ್ ಕರೆಸಿ ಆ ಆರ್ಡರ್ ಉಂಟೇ ಎಂದು ನೋಡಿ. ಕಾನೂನು ಇದ್ದರೆ ಅದನ್ನು ನಾಳೆಯೇ ಜಾರಿಗೆ ತನ್ನಿ. ಆಗ ನಾವು ಏನು ಮಾಡಿದ್ದೆವು ಎನ್ನುವುದು ಗೊತ್ತಾಗುತ್ತದೆ. ಮರಗಳ ಬೆಲೆಯನ್ನು ಏರಿಸಬೇಕೆಂದು ನೀವೆ ದಸಕತ್ ಹಾಕಿ, ಅದನ್ನು ಜಾರಿಗೆ ತಂದು ಆದಮೇಲೆ ಇದು ರೀಸನಬಲ್ ಅಲ್ಲ ಎಂದು ಮಂತ್ರಿಗಳು ಹೇಳುತ್ತಿದ್ದಾರಲ್ಲ ಇದರ ಅರ್ಥ ಏನು? ಹಾಗಿದ್ದರೆ, ಇವರು ಯಾರನ್ನು ರಕ್ಷಣೆ ಮಾಡಲಿಕ್ಕೆ ಹೊರಟಿದ್ದಾರೆ ಒಂದೇ ದಿವಸದಲ್ಲಿ ಇದನ್ನು ಜಾರಿಗೆ ತಂದಿದ್ದರೆ ಸುಮಾರು ೧೯ ಕೋಟಿ ರೂಪಾಯಿ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುತ್ತಿತ್ತು. ಅವರೆಲ್ಲರೂ ಮುಚ್ಚಿದರೆ ಅರಣ್ಯವೆಲ್ಲಾ ಉಳಿದುಕೊಳ್ಳುತ್ತದೆ ಎಂದು ನಮ್ಮ ಆಸೆ. ಪಶ್ಚಿಮಘಟ್ಟದಲ್ಲಿ ಅರಣ್ಯ ಏನಿದೆ ಅಲ್ಲಿ ರೋಪ್‌ವೇ ಮಾಡಿದರೆ ಅವರು ಮರಗಳನ್ನು ಕಡಿಯಲಿಕ್ಕೆ ಆಗುವುದಿಲ್ಲ. ಮಾನ್ಯ ಅರ್ಥಮಂತ್ರಿಗಳು ಒಂದು ಮಾತನ್ನು ಕಳೆದ ವರ್ಷ ಹೇಳಿದ್ದರು. ಈ ಮರಗಳ ಬೆಲೆಯನ್ನು ಹೆಚ್ಚಿಸಲಿಕ್ಕೆ ಕಾರಣ ಏನು ಎಂದರೆ ಈ ಮರದ ವ್ಯಾಪಾರಿಗಳು ಮರವನ್ನು ಕೇಳಲಿಕ್ಕೆ ಬರುವುದಿಲ್ಲ, ಅಷ್ಟರಮಟ್ಟಿಗಾದರೂ ನಾವು ಅವರಿಂದ ಪ್ರಿವೆಂಟ್ ಮಾಡುತ್ತೇವೆಂದು ಹೇಳಿದ್ದರು ಇವೊತ್ತು ಈ ಬೆಲೆಗೆ ಅವರು ಒಪ್ಪಿಕೊಳ್ಳದೇ ಹೋದರೆ ನೀವು ಏತಕ್ಕೆ ಅವರಿಗೆ ಮರಗಳನ್ನು ಕೊಡಬೇಕು ಮರಗಳು ಅರಣ್ಯದಲ್ಲೇ ಉಳಿದುಕೊಳ್ಳಲಿ, ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಈ ಮರಗಳು ಉಳಿದುಕೊಂಡರೆ ನಿಮಗೆ ನಾಳೆ ಒಂದೊಂದು ಮರದಿಂದಲೂ ಬರತಕ್ಕ ಲಾಭ ಎಷ್ಟು ಗೊತ್ತೇನು

ಶ್ರೀ ಜಿ. ಮಾದೇಗೌಡ.—ನಾಳೆ ಯಾರಿಗೆ ಮಾರುತ್ತೀರಾ?

ಶ್ರೀ ಎಂ.ಸಿ. ನಾಣಯ್ಯ.—ತಾವು ಯಾರಿಗೂ ಮಾರಬೇಡಿ ಫಾರೆಸ್ಟ್ ಸಲುವಾಗಿ ಇಡಿ. Keep it as bioreserve, I appeal to the Hon'ble Minister to kindly consider the entire western ghat as bio-reserue area just like Silent Valley of Kerala. For your information I tell you the Silient Valley of Kerala is about 72,000 acres. When a project was taken the Kerala Government contemplated that around 800 acres would be suhmerged but yet people have represented to the Government of India and opposed that submersion. At that time Government of India's interventsiou was sought to protect this area arouod the silent valley and they got a declaration that that area be treated as bio-reserve. Here you have not taken any such action. You do not want to project the Forest Wealth. you do not want to project the western ghat area. Now there isdispute between Tamil Nadu Kerala aud Karnataka regarding Cauvery Water Dispute. I do not know when this dispute is going to be settled. If it is settled the Forest areas of Karnataka as well as of Iamil Nadu will also de saved. At the same time you must also bear in mind an important point. You know that entire Mandya people, ಕಾವೇರಿ ನೀರಿನಿಂದ ಬದುಕುವುದು ಇದೆ. ತಲಕಾವೇರಿಯಲ್ಲಿ ಅಕ್ಟೋಬರ್ ೧೭ನೇ ತಾರೀಖು ತೀರ್ಥೋದ್ಭವವಾಗುತ್ತದೆ. ಅದು ಎಲ್ಲಿದೆ ಎಂದು ಇವರು ಯಾರು ಬಂದು ನೋಡುವುದಿಲ್ಲ, ಮಂಡ್ಯ ಜನತೆ ಕಾವೇರಿಯನ್ನು ನಂಬಿಕೊಂಡಿದ್ದಾರೆ. ಕಾವೇರಿ ನಮಗೆ ಕರ್ಸ್ Let me tell on this floor of this House that Cauvery is not useful to us. Whatever water flows from the top ultimately goes to the KRS reservoir and river cauvery is very useful to you people. ನಾವು ಅಷ್ಟಕ್ಕಾದರೂ ಧಾರಾಳವಾಗಿ ಬಿಟ್ಟುಕೊಡುತ್ತೇವೆ. ಕಾವೇರಿಯನ್ನು ಪ್ರಬಲವಾಗಿ ಹರಿಯುವಂತೆ ಮಾಡಿ, ಮಾನ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ಲಘುವಾದಂಥ ಪ್ರಶ್ನೆಯಲ್ಲ. ಇದು ಬಹಳ ಗಂಭೀರವಾದಂಥ ಪ್ರಶ್ನೆ. ತಾವು ಅಷ್ಟೇ ಗಂಭೀರತೆಯಿಂದ ನೋಡಬೇಕು. ತಾವು ಆ ರೀತಿ ನೋಡಿದರೆ ರಾಜ್ಯದ ಜನತೆಗೂ ಒಳ್ಳೆಯದು ರಾಜ್ಯಕ್ಕೂ ಒಳ್ಳೆಯದು. ತಾವು ಕಾವೇರಿ ನದಿ ಅಚ್ಚುಕಟ್ಟು ಪ್ರದೇಶದ ಪಶ್ಚಿಮಘಟ್ಟಕ್ಕೆ ಹೋಗಿ ಸಸಿಗಳನ್ನು ನೆಟ್ಟು ಬಂದಿದ್ದೀರಿ ಹುಣಿಸೇಮರ, ಹಲಸಿನಮರ, ಬೇವಿನಮರ ನೆಟ್ಟು ಬಂದಿದ್ದೀರಿ. ಇವೆಲ್ಲವೂ ಮನುಷ್ಯನೆಡತಕ್ಕ ಮರಗಳು ಆದರೆ ಕಾಡಿನಲ್ಲಿ ಹ್ಯರೇಂಜ್ ಫಾರೆಸ್ಟ್‌ನಲ್ಲಿ ಇರತಕ್ಕಂಥ ಪ್ರಕೃತಿದತ್ತವಾದಂಥ ಮರಗಳು ಏನಿವೆ ಅಂಥ ಮರಗಳನ್ನು ನಾವು ೫ ವರ್ಷ ಆದರೂ ಕೂಡ ಬೆಳೆಸಲಿಕ್ಕೆ ಸಾಧ್ಯವಿಲ್ಲ. ಪ್ರಕೃತಿಯಿಂದ ಬೆಳೆಯತಕ್ಕ ಮರಗಳನ್ನು ತಾವು ಬೆಳೆಸಲಿಕ್ಕೆ ಸಾಧ್ಯವೇ? ನೀವು ಎಷ್ಟೇ ಗೊಬ್ಬರ ಹಾಕಿ ಬೆಳೆಸುತ್ತೇವೆ ಎಂದರೂ ಸಾಧ್ಯವಿಲ್ಲ. ಆದ್ದರಿಂದ ಇಂಥ ಮರಗಳನ್ನು ದಯುವಿಟ್ಟು ಪ್ರೊಟೆಕ್ಟ್ ಮಾಡಿ. ಇನ್ನು ಸಿನೋರೇಜ್ ವ್ಯಾಲ್ಯು ಬಗ್ಗೆ ದಯುವಿಟ್ಟು ಹೇಳುತ್ತೇನೆ. ಇದನ್ನು ಪುನಃ ರಿವೈಸ್ ಮಾಡಲಿಕ್ಕೆ ಹೇಳಬೇಡಿ. ಇವೊತ್ತು ಪ್ಲೈವುಡ್ ಫ್ಯಾಕ್ಟರಿ ನೋಡಿಕೊಳ್ಳಬೇಡವೇ ಅಂದ: ಅವರನ್ನು ಏತಕ್ಕೆ ನೋಡಿಕೊಳ್ಳಬೇಕು, ಸ್ವಾಮಿ ಕರ್ನಾಟಕದಲ್ಲಿರತಕ್ಕ ಜನತೆ ಈ ಫ್ಲಷ್ ಡೋರ್ ಹಾಕತಕ್ಕವರು ಎಷ್ಟು ಜನ ಇದ್ದಾರೆ. ಜನತಾ ಮನೆಗಳಿಗೆ ಬಿದಿರು ಕೊಡಲಿಕ್ಕೆ ಆಗುವುದಿಲ್ಲ. ಪ್ಲೈವುಡ್ ಫ್ಯಾಕ್ಟರಿ ಬೆಳೆಸಲಿಕ್ಕೋಸ್ಕರ ದಯುವಿಟ್ಟು ಈ ತಪ್ಪು ಮಾಡಬೇಡಿ. ೨೦ ಜನರನ್ನು ಬದುಕಲಿಕ್ಕೋಸ್ಕರ ಕರ್ನಾಟಕದ ನಾಲ್ಕು ಕೋಟಿ ಜನತೆಯನ್ನು ದುರ್ಬಲವಾದಂಥ ಪರಿಸ್ಥಿತಿಗೆ ತರಬೇಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವತ್ತು ಉತ್ತರಕನ್ನಡ ಪ್ರದೇಶ ಅಂದರೆ ಬಿಜಾಪುರ, ಬೆಳಗಾಂ, ರಾಯಚೂರು ಏನಾಗಿದೆ?.........

ಶ್ರೀ ಜಿ. ಮಾದೇಗೌಡ.—ಸಮೃದ್ಧವಾಗಿ ಬೆಳೆಯಾಗಿದೆ.

ಶ್ರೀ ಎಂ.ಸಿ. ನಾಣಯ್ಯ.—ಏತಕ್ಕೆ ಹಾಗೆ ಹೇಳುತ್ತಿದ್ದೀರಿ, ಸ್ವಾಮಿ ಎಷ್ಟೋ ಒಂದೊಂದು ವರ್ಷ ಮಳೆ ಬೆಳೆ ಆಗಿರುವದನ್ನು ತಾವು ಹೇಳಬೇಡಿ. ಕೋಲಾರದಲ್ಲಿ ಮಳೆ ಆಯಿತು, ಅನಂತರ ಅಲ್ಲಿ ನೆಲ ಸಮ ಆಯಿತು. ಇದು ತಮಗೇ ಗೊತ್ತಿದೆ. ನಾನು ಹೇಳುವುದೇನೆಂದರೆ, ಇವರನ್ನೆಲ್ಲಾ ಕರೆದುಕೊಂಡು

ಹೋಗಿ ಉತ್ತಮ ಊಟ ಹಾಕಿಸಿ ಅವರ ಕೈಯಿಂದಲೇ ಆರ್ಡರ್ ಮಾಡಿಸಿ, you tell, I will not allow even a single tree to be cut. Let it be at the cost of your Office.

ಶ್ರೀ ಜಿ. ಮಾದೇಗೌಡ.—ನಾವು ಉಳಿಸಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ.—ನಾನು ಕೇಳುತ್ತಿರುವುದು ಈಗ ಎಷ್ಟು ಉಳಿದಿದೆಯೋ ಅದನ್ನಾದರೂ ಉಳಿಸಿಕೊಂಡು ಹೋಗುತ್ತೀರಾ ಎಂದು. ನನಗೆ ತಿಳಿದಿರುವಂತೆ ತಾವು ಏನೇನೂ ಉಳಿಸಿಲ್ಲ. ...

ಶ್ರೀ ಜಿ. ಮಾದೇಗೌಡ.—ನಾವು ಉಳಿಸಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ.—ತಾವು ಉಳಿಸಿಲ್ಲ. ಅರಣ್ಯವನ್ನು ಇವತ್ತೂ ನಾಶ ಮಾಡುತ್ತಿದ್ದೀರಿ ನಾಳೆಯೂ ಮಾಡುತ್ತೀರಿ, ಮುಂದೆಯೂ ಮಾಡುತ್ತೀರಿ. ಅದು ಗೊತ್ತಿದೆ. ನಾವು ಹೇಳಬೇಕಾದ್ದನ್ನು ಹೇಳುತ್ತೇವೆ. ಅದನ್ನು ತಾವು ಒಪ್ಪಿದರೆ ಒಪ್ಪಿ, ಇಲ್ಲದಿದ್ದರೆ ಬಿಡಿ. ಏಕೆಂದರೆ ಮುಂದೆ ನಾವೂ ಸಾಯುತ್ತೇವೆ. ನೀವೂ ಸಾಯುತ್ತೀರಿ. ಟ್ರೀ ಫಾರ್ ಸರ್ವೈವಲ್ ಅಂತ........

ಶ್ರೀ ಜಿ. ಮಾದೇಗೌಡ.—ಯಾರೋ ಮಾಡಿದ ತಪ್ಪನ್ನು ಈಗ ತಾವು ಹೇಳುತ್ತಿದ್ದೀರಿ. ಹೀಗೆ ಮಾಡಬಾರದಿತ್ತು ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ತಪ್ಪನ್ನು ಹೇಗೆ ಸರಿಪಡಿಸಬೇಕೆಂಬುದನ್ನು ಹೇಳಿ.

ಅಧ್ಯಕ್ಷರು.—೧೯೮೧ರಲ್ಲಿ ಸರ್ಕಾರದವರೇ ಒಂದು ನೋಟಿಫಿಕೇಷನ್ ಹೊರಡಿಸಿ ಏನು ಆದೇಶವನ್ನು ಕೊಟ್ಟರೋ ಅದನ್ನು ಜಾರಿಗೇ ಕೊಡಲಿಲ್ಲ. ಹೀಗಾಗಿ ೧೭ ಕೋಟಿ ರೂ. ಬೆಲೆಬಾಳುವ ಮರ ಹೋಯಿತು. ಇಷ್ಟೇ ಅಲ್ಲದೆ ಈ ಕಾಡು ಇನ್ನೂ ನಾಶವಾಗುತ್ತದೆ. ಆದ್ದರಿಂದ ಇವರ ಬಗ್ಗೆ ಪರಿಶೀಲಿಸುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಜಿ. ಮಾದೇಗೌಡ.—ಅವರು ಹೇಳುತ್ತಿರುವುದು ಫಾರೆಸ್ಟ್ ಇಂಡಸ್ಟ್ರೀಸ್‌ನಲ್ಲಿ ಪ್ಲೈವುಡ್ ಫ್ಯಾಕ್ಟರಿಗೆ ಮರವನ್ನು ಕೊಡುತ್ತಿದ್ದೀರಿ. ಆ ೨೮ ಜನರನ್ನು ಉಳಿಸುವುದಕ್ಕೆ ಹೋಗುವುದು ಬೇಡವೆಂದು ಹೇಳುತ್ತಿದ್ದಾರೆ. ಯಾವುದೋ ಕಾಲದಲ್ಲಿ ಯಾವುದೋ ಸರ್ಕಾರ ಆರ್ಡರ್ ಮಾಡಿತ್ತು. ಆದರೆ ಇವತ್ತು ಅದನ್ನು ವಜಾ ಮಾಡುವುದಕ್ಕಾಗುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ.—ನೀವು ಇದನ್ನು ನಿಲ್ಲಿಸುತ್ತೇವೆಂದು ಹೇಳುವುದಾದರೆ ಈ ಸದನದಲ್ಲಿ ೫ ಜನ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ನೇಮಕಮಾಡಿ ಅದಕ್ಕೆ ಒಬ್ಬ ವಕೀಲರನ್ನು ಇಡೋಣ. ಈ ಬಗ್ಗೆ ಯಾರಾದರೂ ಹೈಕೋರ್ಟ್‌ಗೆ ಹೋದರೆ ನಮ್ಮ ದೇಶದಲ್ಲಿರತಕ್ಕ ಕಾನೂನನ್ನು ರಕ್ಷಣೆ ಮಾಡುವುದಕ್ಕೆ ಆದೇಶ ಕೊಟ್ಟರೂ ಕೂಡ ಸಹಾ ಇದರ ಬಗ್ಗೆ ಅಡ್ಡಿಬರುವುದಿಲ್ಲವೆಂದು ನಾನು ವಕೀಲನಾಗಿ ಹೇಳುತ್ತಿದ್ದೇನೆ. ಇದನ್ನು ರದ್ದು ಮಾಡುತ್ತೇವೆಂದು ತಾವು ಭರವಸೆ ಕೊಟ್ಟರೆ ಇನ್ನು ಉಳಿದುದನ್ನು ನಾನು ನೋಡಿಕೊಳ್ಳುತ್ತೇನೆ.

ಶ್ರೀ ಜಿ. ಮಾದೇಗೌಡ.—ಈ ಅರಣ್ಯವನ್ನು ಉಳಿಸಿಕೊಳ್ಳಬೇಕೆಂಬ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೆ ಕಳಕಳಿ ನಮಗೂ ಇದೆ ಅರಣ್ಯವನ್ನು ನಾಶಮಾಡುತ್ತಿರುವ ಕೆಲಸ ಬಹಳ ವರ್ಷದಿಂದಲೂ ನಡೆದುಕೊಂಡೇ ಬರುತ್ತಿದೆ ಇದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಇವತ್ತು ಹೊಸದಾಗಿ ನಾವು ಯಾವುದಾದರೂ ಇಂಡಸ್ಟ್ರೀಸ್‌ಗೆ ಕೊಟ್ಟಿದ್ದರೆ, ತಾವು ಮಾಡಬಹುದಾದ ಆಪಾದನೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಯಾರೋ ಮಾಡಿದ ತಪ್ಪನ್ನು ನಮ್ಮ ಮೇಲೆ ಹೊರಿಸುವುದು ಸರಿಯಲ್ಲ. ಸಿನೋರೇಜ್ ವ್ಯಾಲ್ಯು ಬಗ್ಗೆ ಹೈಕೋರ್ಟ್‌ನಿಂದ ತಡೆಯಾಜ್ಞೆ ಬಂದಿದೆ ಈ ಫ್ಯಾಕ್ಟರಿಯನ್ನು ಮುಚ್ಚಬೇಕೆಂದು ಹೇಳುತ್ತಿದ್ದಾರೆ. ಬೇಕಾದಷ್ಟು ಜನರು ನಿರುದ್ಯೋಗಿಗಳಿದ್ದಾರೆಂದು ಹೇಳಿದಮೇಲೆ ನಾವು ಇದನ್ನು ಪುನರ್ ಪರಿಶೀಲಿಸಬೇಕೆಂದು ಒಂದು ಸಮಿತಿಯನ್ನು ಮಾಡಿ ಅದಕ್ಕೆ ರೆಫರ್ ಮಾಡಿದ್ದೇವೆ. ಆ ಸಮಿತಿಯ ವರದಿ ಬಂದಮೇಲೆ ನೋಡೋಣ. ಹಳೇ ರೇಟನ್ನೇ ಮುಂದುವರಿಸಿಕೊಂಡು ಹೋಗಬೇಕೆಂದು ನಮ್ಮಲ್ಲಿ ಯಾರಿಗೂ ಇಷ್ಟವಿಲ್ಲ. ನಾವು ನೇಮಕ ಮಾಡಿರುವ ಸಮಿತಿಯ ವರದಿ ಬಂದಕೂಡಲೇ ಸರ್ಕಾರದ ಹಿತವನ್ನೂ, ಆ ಕಾರ್ಖಾನೆಯ ಹಿತವನ್ನೂ ಗಮನದಲ್ಲಿ ಇಟ್ಟುಕೊಂಡು ಒಂದು ತೀರ್ಮಾನವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಸಿ. ನಾಣಯ್ಯ.—ಕಳಕಳಿಯಿಂದ ನಾನು ಏನು ಕೇಳಿಕೊಳ್ಳುತ್ತಿದ್ದೇನೆಂದರೆ ಈ ಫ್ಯಾಕ್ಟರಿಗಳಿಗೆ ಮರವನ್ನು ಕೊಡುವುದನ್ನು ತಾವು ನಿಲ್ಲಿಸಿದರೆ ನಮ್ಮಲ್ಲಿ ಅರಣ್ಯ ಸಂಪತ್ತು ಅಪಾರವಾಗಿ

ಉಳಿದುಕೊಳ್ಳುತ್ತದೆ. ನಮ್ಮ ರಾಜ್ಯದ ಜನಸಾಮಾನ್ಯರ ಹಿತವನ್ನು ಕಡೆಗಣಿಸಿ ಕೇವಲ ಈ ೨೬ ವ್ಯಕ್ತಿಗಳ ಬಗ್ಗೆ ಮಾತ್ರವೇ ನಿಮಗೆ ಏತಕ್ಕೆ ಈ ಅನುಕಂಪ ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ. ಈ ತಪ್ಪನ್ನು ಹಿಂದಿನವರು ಮಾಡಿದ್ದಾರೆ ಇದನ್ನು ನೀವು ಮಾಡಿದ್ದು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಿಮ್ಮನ್ನು ನಾನು ರೇಗಿಸಿದರೆ ಈ ಕೆಲಸವನ್ನು ನಾವು ಮಾಡುತ್ತೇವೆಂದು ನಾನು ಈ ರೀತಿ ಮಾತನಾಡುತ್ತಿದ್ದೇನೆ. ತಾವು ನೇಮಕ ಮಾಡಿರುವ ಸಮಿತಿಯನ್ನು ಮೊದಲು ರದ್ದು ಮಾಡಿ. ನಿಮ್ಮ ಇಲಾಖೆಯ ಅಧಿಕಾರಿಗಳನ್ನು ಕೇಳಿ. ಅವರೇ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಿಮ್ಮ ಅಧಿಕಾರಿಗಳನ್ನೂ ನಿಮ್ಮ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಿ. ಈ ಪ್ಲೈವುಡ್ ಫ್ಯಾಕ್ಟರಿಗಳಿಗೆ ಅರಣ್ಯದಲ್ಲಿ ಇರತಕ್ಕ ಮರಗಳನ್ನು ಕೊಡುತ್ತಾ ಹೋದರೆ ಇನ್ನು ಸ್ವಲ್ಪ ಕಾಲದಲ್ಲೇ ಅರಣ್ಯದಲ್ಲಿ ಯಾವುದೇ ಮರವು ಉಳಿಯುವುದಿಲ್ಲವೆಂದೂ ಹೇಳುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೆ, ಇದರ ಜೊತೆಯಲ್ಲಿ ಇನ್ನೊಂದು ವಿಚಾರವನ್ನು ಹೇಳುವುದಾದರೆ. ಯೂಕಲಿಪ್ಟಸ್ ಮರದ ವಿಚಾರ. ಕಳೆದಸಾರಿ ಸರ್ಕಾರದವರು ನನ್ನ ಪ್ರಶ್ನೆಗೆ ಉತ್ತರಿಸುತ್ತಾ ಸರ್ಕಾರೀ ಇಲಾಖೆಯ ಮುಖಾಂತರ ಈ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಪ್ರತಿ ಟನ್‌ಗೆ ೩೨೫ ರೂ.ಗಳ ಖರ್ಚು ಬೀಳುತ್ತದೆಂದು ಹೇಳಿದ್ದಾರೆ. ೧೯೬೯-೭೦ನೇ ಸಾಲಿನಲ್ಲಿ ಹರಿಹರ ಪಾಲಿಫೈಬರ್ಸ್‌ಗೆ ೧ ಟನ್‌ಗೆ ೨೪ ರೂ. ನಂತೆ ಸುಮಾರು ೨ ಲಕ್ಷ ಟನ್ ನೀಲಗಿರಿ ಮರವನ್ನು ಮಾರಾಟ ಮಾಡಿದ್ದಾರೆ. ಈ ಆಜ್ಞೆ ಇನ್ನೂ ೩೦ ವರ್ಷಗಳವರೆಗೂ ಅಂದರೆ ೨ನೇ ಶತಮಾನ ಮುಗಿಯುವವರೆಗೆ ಇರುತ್ತದೆ. ಒಂದು ಟನ್ ನೀಲಗಿರಿ ಮರವನ್ನು ಬೆಳೆಯುವುದಕ್ಕೆ ಹಿಂದೆ ೩೨೫ ರೂ. ಖರ್ಚು ಬರುತ್ತಿದ್ದುದು ಇವತ್ತಿನ ರೇಟಿನಲ್ಲಿ ೪೦೦ ರೂ. ಗಿಂತ ಜಾಸ್ತಿಯಾಗುತ್ತದೆ. ೪೦೦ ರೂ. ಖರ್ಚುಮಾಡಿ ಬೆಳೆಸಿದ ಮರವನ್ನು ಕೇವಲ ೨೪ರೂ. ನಂತೆ ಮಾರಿದರೆ ಪ್ರತಿವರ್ಷ ಎಷ್ಟು ನಷ್ಟ ನಮ್ಮ ಸರ್ಕಾರಕ್ಕೆ ಆಗುತ್ತಿದೆ ಎಂಬುದನ್ನು ನೋಡಿದ್ದೀರಾ? ಈಗ ಒಂದು ಟನ್‌ಗೆ ೮೦೦ ರೂ. ಪ್ರಕಾರ ನಿಗದಿ ಮಾಡಿದಕೂಡಲೇ ಹರಿಹರ ಪಾಲಿಫೈಬರ್ ಫ್ಯಾಕ್ಟರಿಯ ಮಾಲೀಕರಾದ ಬಿರ್ಲಾರವರು ಹೈಕೋರ್ಟಿಗೆ ಹೋಗಿ ಒಬ್ಬ ದೊಡ್ಡ ಲಾಯರ್‌ನ್ನು ಇಟ್ಟರು. ಅವರ ಹೆಸರು ಸಿದ್ಧಾರ್ಥ ಶಂಕರ ರೇ ಎಂದು. ಅವರ ಹೆಸರನ್ನು ಕೇಳಿದ ಕೂಡಲೇ ನಮ್ಮ ವಕೀಲರು ಭಯ ಪಟ್ಟರೇ? ಇವರಿಗೆ ಪುರುಷತ್ವ ಇಲ್ಲವೆ? ಆ ವಕೀಲರೊಡನೆ ಚರ್ಚೆ ಮಾಡುವುದಕ್ಕೆ ನಮ್ಮ ವಕೀಲರಿಗೆ ಪುರುಷತ್ವ ಇಲ್ಲದಿದ್ದರೆ ಬೇರೆ ವಕೀಲರನ್ನು ನೇಮಕ ಮಾಡಿ. ಅವರಿಗೆ ೧೦-೨೦ ಸಾವಿರ ರೂ. ಕೊಡಿ. ೧ ಟನ್‌ಗೆ ೮೦೦ ರೂ. ನಂತೆ ಇಲಾಖೆಯವರು ನಿಗದಿಮಾಡಿದ್ದನ್ನು ಕಡಿಮೆ ಮಾಡಬಾರದೆಂದುವಾದ ಮಾಡಿದಾಗ, ನಾವು ಬೇರೆ ಬೇರೆ ಕಡೆ ಟನ್ ೧ಕ್ಕೆ ೧೦೦-೧೦೫ ರೂ. ನಂತೆ ಖರೀದಿ ಮಾಡಿದ್ದೇವೆಂದು ಅವರು ಹೇಳಿದರಂತೆ. ಅವರು ಹೇಳಿದ ಮಾತಿಗೆ ನಮ್ಮ ವಕೀಲರೂ ತಮ್ಮ ಒಪ್ಪಿಗೆಯನ್ನು ಕೊಟ್ಟರಂತೆ. ಜಾಯಿಂಟ್ ಮೆಮೋ ಫೈಲ್ ಮಾಡಿದರಂತೆ. ಟನ್ ೧ಕ್ಕೆ ೮೦೦ ರೂ.ಗಿಂತ ಕಡಿಮೆ ಮಾಡುವುದಕ್ಕಾಗುವುದಿಲ್ಲವೆಂದು ವಾದ ಮಾಡಿದ್ದರೆ ಹೈಕೋರ್ಟ್‌ನವರು ನಮಗೆ ವಿರುದ್ಧವಾಗಿ ಆಜ್ಞೆಯನ್ನು ಮಾಡುತ್ತಿದ್ದರೆ? ನಾನಾದರೂ ತಮ್ಮನ್ನು ಕೇಳುತ್ತೇನೆ. ಯಾರನ್ನು ಕೇಳಿ ಇವರು ಜಾಯಿಂಟ್ ಮೆಮೋ ಫೈಲ್ ಮಾಡಿದರು? ಎಲ್ಲದರಲ್ಲೂ ಜಾಯಿಂಟ್ ಇದ್ದೇ ಇರುತ್ತದೆ. ಇದನ್ನು ನೀವು ಡಿಸ್‌ಜಾಯಿಂಟ್ ಯಾವಾಗ ಮಾಡುತ್ತೀರಿ? ನಾನು ಹೇಳುವುದೇನೆಂದರೆ, ಇದಕ್ಕೆ ಒಂದು ಸಮಿತಿಯನ್ನು ಮಾಡಿ ಸ್ವಲ್ಪ ಹಣವನ್ನು ಕೊಡಿ. ೧ಟನ್‌ಗೆ ೮೦೦ ರೂ. ನಂತೆ ೨ ಲಕ್ಷ ಟನ್ ನೀಲಗಿರಿ ಮರವನ್ನು ಮಾರಾಟ ಮಾಡಿದರೆ ವರ್ಷಕ್ಕೆ ೧೬ ಕೋಟಿ ರೂ. ನಮ್ಮ ಸರ್ಕಾರಕ್ಕೆ ಆದಾಯ ಬರುತ್ತದೆ. ಈಗ ನೀವು ತೆಗೆದುಕೊಳ್ಳುತ್ತಿರತಕ್ಕ ೩೦ರೂ. ಪ್ರಕಾರ ಲೆಕ್ಕ ಹಾಕಿದರೆ ಕೇವಲ ೬೦ಲಕ್ಷ ಲಕ್ಷ ರೂ, ಮಾತ್ರ ಆದಾಯ ಬರುವುದು ಅಂದರೆ ಈಗಿನ ೬೦ ಲಕ್ಷ ರೂ. ಎಲ್ಲಿ? ಆ ೧೬ ಕೋಟಿ ರೂ. ಎಲ್ಲಿ? ಈ ಸಿನೋರೇಜ್ ರೇಟನ್ನು ಹೆಚ್ಚು ಮಾಡುವುದಕ್ಕೆ ಈ ಸದನದಲ್ಲಿ ಒಂದು ತಿದ್ದುಪಡಿಯನ್ನು ತಂದು ಒಂದು ನೋಟಿಫಿಕೇಷನ್ ಹೊರಡಿಸದೇ ಇರುವುದನ್ನು ನೋಡಿದರೆ ನಾವು ಏನು ತಿಳಿದುಕೊಳ್ಳಬೇಕು? ಅಥವಾ ಇದರ ಬಗ್ಗೆ ತಮಗೆ ಮನಸ್ಸಿಲ್ಲವೆಂದು ನಾವು ತಿಳಿದುಕೊಳ್ಳಬೇಕೆ ಮಾನ್ಯ? ಸಚಿವರಾದ ಮಾದೇಗೌಡರ ಬಗ್ಗೆ ನನಗೆ ಅಪಾರವಾದ ಅಭಿಮಾನವಿದೆ. ನಂಬಿಕೆ ಇದೆ. ಆದರೆ ರಾಜ್ಯದ ಜನ ಏನು ತಿಳಿದುಕೊಳ್ಳುತ್ತಾರೆ?

ಶ್ರೀ ಜಿ. ಮಾದೇಗೌಡ.—ತಮ್ಮ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಹೇಳಿ ನೋಡೋಣ.

ಶ್ರೀ ಎಂ.ಸಿ. ನಾಣಯ್ಯ.—ನನ್ನ ಮನಸ್ಸಿನಲ್ಲಿರುವುದನ್ನು ಹೇಳುವುದಕ್ಕೆ ಬಹಳ ಬೇಸರವಾಗುತ್ತದೆ. ಇದು ಒಂದು ರೀತಿಯ ಸಂಶಯ ಬರುವ ರೀತಿಯಲ್ಲಿದೆ. ಇದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಡಿ. ಅವರಿಗೆ ಜಾಯಿಂಟ್ ಮೆಮೋ ಫೈಲ್ ಮಾಡುವುದಕ್ಕೆ ಯಾರು ಅಧಿಕಾರವನ್ನು ಕೊಟ್ಟರು ನಿಮ್ಮ ಸರ್ಕಾರೀ ವಕೀಲರನ್ನು ನಂಬಿಕೊಂಡು ಯಾವಾಗಲೂ ಕೆಲಸ ಮಾಡಬೇಡಿ. ದೊಡ್ಡ ದೊಡ್ಡ ಕೇಸುಗಳು ಬಂದಾಗ ನಿಮ್ಮ ಸರ್ಕಾರೀ ವಕೀಲರನ್ನು ಬಿಟ್ಟು ಬೇರೆ ವಕೀಲರನ್ನು ಇಟ್ಟುಕೊಳ್ಳಿ ಹಾಗೆ ಮಾಡಿದರೆ ಮಾತ್ರ ನಮ್ಮ ರಾಜ್ಯದ ಸಂಪತ್ತು ಉಳಿದುಕೊಳ್ಳುತ್ತದೆ. ಇಲ್ಲದೇ ಹೋದರೆ ಇಲ್ಲ. ನಿಮ್ಮ ಇಲಾಖೆಯವರನ್ನು ಹೇಳದೇ ಕೇಳದೆ ಜಾಯಿಂಟ್ ಮೆಮೋವನ್ನು ಯಾರದೋ ಜೊತೆಯಲ್ಲಿ ಸೇರಿಕೊಂಡು ಫೈಲ್ ಮಾಡಿದರು.

ಇದು ಇಲಾಖೆಯ ಕೆಲಸ, ಯಾರದೋ ಜೊತೆಯಲ್ಲಿ ಜಾಯಿಂಟ್ ಆದರು. ಈವತ್ತು ಮತ್ತೊಂದಕ್ಕೆ ಜಾಯಿಂಟ್ ಮಾಡುತ್ತಿರುತ್ತಾರೆ. ಆದ್ದರಿಂದ ನ್ಯಾಯಾಂಗ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇದರಿಂದ ಒಂದು ವರ್ಷಕ್ಕೆ ಆಗುತ್ತಿರತಕ್ಕಂಥ ನಷ್ಟ ೧೬ ಕೋಟಿ ೧೮ ರೂಪಾಯಿಗಳು. ಇದೇ ರೀತಿ ಮುಂದುವರೆದರೆ ನಾವು ಈವತ್ತು ೮೦ನೇ ಇಸವಿಯಲ್ಲಿ ಇದ್ದೇವೆ. ವರ್ಷದ ವರೆಗೆ ಇದೆ. ನಿಮ್ಮ ಒಂದು ಅಗ್ರಿಮೆಂಟ್ ಪ್ರಕಾರ ಹರಿಹರ ಪಾಲಿಫೈಬರ್ಸ್ ೧೮ ವರ್ಷಕ್ಕೆ ೧೬. ಕೋಟಿ ರೂಪಾಯಿಗಳಿಗೆ ಆಗುತ್ತಿರತಕ್ಕಂಥ ಹಣದ ಮೊತ್ತ ಎಷ್ಟು ಎಂದರೆ ೨೮೮ ಕೋಟಿ ರೂಪಾಯಿಗಳು. ಈ ೨೮೮ ಕೋಟಿ ರೂಪಾಯಿಗಳಿಗೆ ಎರಡು ಕಾಳಿನದಿ ಯೋಜನೆಗಳನ್ನು ಕಟ್ಟಬಹುದು. ಈವತ್ತು ನಾವು ಸರಿಯಾಗಿ ಹೈಕೋರ್ಟಿನಲ್ಲಿ, ಮತ್ತು ಸುಪ್ರೀಮ್ ಕೋರ್ಟಿನಲ್ಲಿ ವಾದ ಮಾಡಿದರೆ, ಇದರಲ್ಲಿ ಏನು ಒಂದು ಹೇಳುತ್ತಾರೆ ಎಂದರೆ ಒಂದು ಟನ್ ಯೂಕಲಿಪ್ಟಸ್ ಏನು ಇದೆ ಅವರು ೮ ನೂರು ರೂಪಾಯಿಗಳಿಗೆ ತೆಗೆದುಕೊಂಡು ಹೋದಲ್ಲಿ ಅದರ ಪ್ರಾಡಕ್ಟ್ ಏನು ಇವೆ ಅದರಿಂದ ಬರತಕ್ಕಂಥ ಲಾಭ ಒಂದು ಟನ್‌ಗೆ ಎಲ್ಲ ಖರ್ಚು ತೆಗೆದು ೨,೩೦೦ ರೂಪಾಯಿಗಳಾಗುತ್ತವೆ. ಇದನ್ನು ವ್ಯವಸ್ಥೆ ಮಾಡಲಿಕ್ಕೆ ಆಗುವುದಿಲ್ಲವೇ ? ೨೮೮ ಕೋಟಿ ರೂಪಾಯಿಗಳ ಆದಾಯ ೨೦ ವರ್ಷಗಳಲ್ಲಿ ನಮ್ಮ ಸರ್ಕಾರದ ಕೈಗೆ ಬರುತ್ತದೆ ಎಂದರೆ ಒಂದು ಕೋಟಿ ರೂಪಾಯಿಗಳನ್ನು ಯಾರಾದರೂ ಒಬ್ಬ ವಕೀಲರಿಗೆ ಕೊಟ್ಟು ಈ ಕೆಲಸವನ್ನು ಮಾಡಲಿಕ್ಕೆ ಆಗುವುದಿಲ್ಲವೇ ? ೧೫೦ ಲಕ್ಷ ರೂಪಾಯಿ ನಮಗೆ ಕೊಡಿ, ನಾವು ಕೆಲಸ ಮಾಡುತ್ತೇವೆ. ನಾವು ಲಕ್ಷ್ಮೀಸಾಗರ್ ಎಲ್ಲರೂ ಸೇರಿ ಮಾಡುತ್ತೇವೆ. ೫೦ ಲಕ್ಷ ರೂಪಾಯಿಗಳನ್ನು ಕೊಡುತ್ತೀರಾ ನಾವು ಈ ಕೇಸನ್ನು ಗೆದ್ದು ಕೊಡುತ್ತೇವೆ.

ಅಧ್ಯಕ್ಷರು.—ಗೆಲ್ಲುವ ಗ್ಯಾರಂಟಿ ಹೇಗೆ. ನಿಮಗೆ ಕೊಟ್ಟರೆ ವಾದಮಾಡಿ ಗೆಲ್ಲುವ ಗ್ಯಾರಂಟಿ ಹೇಗೆ ?

ಶ್ರೀ ಎಂ. ಸಿ. ನಾಣಯ್ಯ.—ಗೆಲ್ಲದೆ ಹೋದರೆ ಅಧ್ಯಕ್ಷರೇ ೫೦ ಲಕ್ಷ ರೂಪಾಯಿಗಳ ಜೊತೆಗೆ ಒಂದು ಲಕ್ಷ ರೂಪಾಯಿ ಸೇರಿಸಿ ಕೊಡುತ್ತೇವೆ.

ಅಧ್ಯಕ್ಷರು.—ಏನು ೫೦ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಒಂದು ಲಕ್ಷ ರೂಪಾಯಿಯನ್ನು ಕೊಡುತ್ತೀರಾ ?

ಶ್ರೀ ಎಂ. ಸಿ. ನಾಣಯ್ಯ.—ಅಂದರೆ ೫೦ ಪ್ಲಸ್ ಒಂದು. ನಾವು ಈ ದುಡ್ಡನ್ನು ತೆಗೆದುಕೊಳ್ಳುವುದೇ ಇಲ್ಲ. ತಾವು ಒಪ್ಪಿಗೆ ಕೊಡುತ್ತೀರೋ ?.

ಶ್ರೀ ಜಿ. ಮಾದೇಗೌಡ.—ಅವರಿಗೆ ಕಳಕಳಿ ಇದೆ. ಅದಕ್ಕೋಸ್ಕರವೇ ಅವರು ವಾಗ್ವಾದ ಮಾಡುತ್ತಿದ್ದಾರೆ. ಆದರೆ ನಾವು ಗೆಲ್ಲಬೇಕೆಂದೇ ಸುಪ್ರೀಮ್ ಕೋರ್ಟಿಗೂ ಕೂಡ ಹೋಗಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಒಳ್ಳೆಯ ಲಾಯರನ್ನೂ ಕೂಡ ಇಡಬೇಕೆಂದು ಅವರು ಹೇಳುತ್ತಾರೆ. ಅದರಂತೆ ನಾವೂ ಕೂಡ ಒಳ್ಳೆಯ ಲಾಯರನ್ನು ಇಡಬೇಕೆಂದು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇನೆ, ಮಾನ್ಯ ನಾಣಯ್ಯನವರು ನಾವೇ ಬೇಕಾದರೆ ದುಡ್ಡು ಕೊಡುತ್ತೇವೆಂದು ಹೇಳುತ್ತೇವೆಂದು ಹೇಳುತ್ತಾರೆ, ಅವರು ಏನಾದರೂ ಜಾಯಿಂಟ್ ಆಗಿ ದುಡ್ಡು ಕೊಡುವುದಾದರೆ ಅವರನ್ನೇ ಇಟ್ಟುಕೊಳ್ಳುತ್ತೇವೆ ಎನ್ನುವ ಭರವಸೆಯನ್ನೂ ಕೂಡ ಕೊಡುತ್ತೇವೆ.

ಶ್ರೀ ಎಂ. ಸಿ. ನಾಣಯ್ಯ.—ನಾನು ಸ್ವಲ್ಪ ಹಾನೆಸ್ಟಿಯಿಂದ ಕೆಲವೊಂದು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅರ್ಥ ಮಂತ್ರಿಗಳು ಈವತ್ತು ಬಂದಿ

ದ್ದಾರೆ. ಹೆಚ್ಚಿಗೆ ೧೬೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅವರು ಸ್ವಲ್ಪ ಅದನ್ನು ತೋರಿಸಿಕೊಟ್ಟರೆ ಒಳ್ಳೆಯದು. ಅವರು ಸ್ವಲ್ಪ ತೀವ್ರವಾಗಿ ಗಮನವನ್ನು ಹರಿಸಿ ನಾಳೆಯಿಂದಲೇ ಮರಗಳು ಹೋಗುತ್ತಿರತಕ್ಕಂಥದ್ದನ್ನು ನಿಲ್ಲಿಸುವುದಕ್ಕೆ ಆಜ್ಞೆ ಮಾಡಿಬಿಟ್ಟರೆ ಶರಣು.

ಶ್ರೀ ಜಿ. ಮಾದೇಗೌಡ. ನಾವು ಒಪ್ಪಿಕೊಳ್ಳುತ್ತೇವೆ. ಲಾಯರನ್ನೂ ಕೂಡ ಇಟ್ಟುಕೊಳ್ಳುತ್ತೇವೆ, ಕೇಸನ್ನು ಗೆದ್ದುಕೊಡುತ್ತೇವೆಂದು ಹೇಳಿದರೆ ಅದಕ್ಕೆ ನಾವು ಫೀಸನ್ನು ಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ.—ನೀವು ಫೀಸನ್ನೇ ಕೊಡಬೇಡಿ, ಫ್ರೀಯಾಗಿ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯಿಲಿಯವರು ಅರ್ಥ ಮಂತ್ರಿಗಳವರು ಸ್ವಲ್ಪ ಚಿಕ್ಕ ಚಿಕ್ಕ ಜೋಬಂಗಳಿಗೆ ಕೈ ಹಾಕಿ ಅಭ್ಯಾಸ. ಅವರು ದೊಡ್ಡ ದೊಡ್ಡ ಜೇಬುಗಳಿಗೆ ಕೈ ಹಾಕುವುದಕ್ಕೆ ಹೋಗುವುದಿಲ್ಲ. ಅಧ್ಯಕ್ಷರೇ, ಅವರಿಗೆ ಕಾಫಿ ಎಂದು ಹೇಳಿಬಿಟ್ಟರೆ ಅವರಿಗೆ ಅಲರ್ಜಿ, ಅವರು ಕಾಫಿ ತೋಟಗಳಿಗೆ ಬರಬೇಕು. ಕೊಡಗಿನಲ್ಲಿರತಕ್ಕಂಥ ಕಾಫಿ ಬೆಳೆಗಾರರು ಒಂದು ಎಕರೆಯಿಂದ ನೂರು ಎಕರೆಗಳವರೆಗೆ ಇರತಕ್ಕಂಥ ಬೊಡ್ಡ ದೊಡ್ಡ ಪ್ಲಾಂಟರ್ಸ್ ಇರುತ್ತಾರೆ. ೫ ಎಕರೆ ಒಳಗಡೆ ಇರತಕ್ಕಂಥ ಕಾಫಿ ಪ್ಲಾಂಟರ್ಸ್ ಎಷ್ಟೋ ಜನ ಇದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಕೊಡಗಿನಲ್ಲಿ ಕಾಫಿ ತೋಟವನ್ನು ತೆಗೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಯಾರೋ ಹೇಳಿದರು. ಅಧ್ಯಕ್ಷರೇ, ಅವರು ತೆಗೆದರೆ ಬಹಳ ಉತ್ತಮ, ಅವರು ತೆಗೆಯುವುದು ಸತ್ಯವೋ ಏನೋ ಎನ್ನುವುದು ನನಗೂ ಗೊತ್ತಿಲ್ಲ. ಕಾಫಿ ತೋಟ ಹೇಗೆ ಇರುತ್ತದೆಂದು ಗೊತ್ತಾಗುತ್ತದೆ. ಕಾಫಿ ತೋಟ ಮಾಲೀಕರ ಕಷ್ಟ ನಿಮಗೆ ಗೊತ್ತಾಗುತ್ತದೆ. ತಾವು ಏನಾದರೂ ಕಾಫಿತೋಟ ತೆಗೆಯಬೇಕೆಂದಿದ್ದರೆ ಬನ್ನಿ ನಿಮಗೆ ನಾನು ೧೦ ಎಕರೆ ತೋಟವನ್ನು ಕೊಡಿಸಿಕೊಡುತ್ತೇನೆ. ನಾನು ನೀವು ಒಟ್ಟಿಗೆ ಕೆಲಸಮಾಡಿದರೆ ಆಗ ನಿಮಗೆ ಅದರ ಕಷ್ಟ ಏನು ಎನ್ನುವುದು ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಆ ಕಾಫಿ ತೋಟಗಳು ನಿಮಗೆ ಇರಲಿ, ನಮಗೆಬೇಡ.

ಶ್ರೀ ಎಂ. ಸಿ. ನಾಣಯ್ಯ.—ನಿಮ್ಮನ್ನು ಕೊಡಗಿಗೆ ಬರಲಿಕ್ಕೆ ಬಿಟ್ಟರೆ ನಮಗೆ ತೊಂದರೆಯಾಗುತ್ತದೆ. ಕೊಡಗಿಗೆ ನೀವು ಬಂದು ಬೇರೆ ಏನಾದರೂ ಮಾಡುತ್ತೀರೋ ಎನ್ನುವುದೇ ತೊಂದರೆ ನಮಗೆ. ಆದ್ದರಿಂದ ಇದರ ಬಗ್ಗೆ ತಾವು ಏನು ಮಾಡಿದ್ದೀರಿ. ಅಧ್ಯಕ್ಷರೇ ಆರ್ಗನೈಸ್ಡ್ ಅಗ್ರಿಕಲ್ಚರ್ಸ್‌ಗೆ ಪ್ರೊಫೆಷನಲ್ ಟ್ಯಾಕ್ಸ್ ಎಂದು ಒಂದು ಹೊಸ ಪದ್ಧತಿಯನ್ನು ಜಾರಿಗೆ ತರುತ್ತಿದ್ದೀರಿ, ಆರ್ಗನೈಸ್ಡ್ ಟ್ರೇಡರ್ಸ್ ಎಂದಿದ್ದರೆ ಒಪ್ಪುತ್ತಿದ್ದೆ, ಆದರೆ ಆರ್ಗನೈಸ್ಡ್ ಅಗ್ರಿಕಲ್ಚರಿಸ್ಟ್ ಎಂದು ಹೇಳುವಿರಲ್ಲ, ಇದು ಎಲ್ಲಿರುತ್ತದೆ. ನಮ್ಮ ದೇಶದಲ್ಲಿ ಯಾವುದಾದರೂ ಒಂದು ವರ್ಗ ಆರ್ಗನೈಸ್ಡ್ ಆಗಿದ್ದುದು ಇದಿಯೋ. ಪಾಪ ಫಾರ್ಮರ್ಸ್ ಅವರು ಏನಾದರೂ ಆರ್ಗನೈಸ್ಡ್ ಆದರೆ ತಮ್ಮ ಕತೆ ಮುಗಿಯುತ್ತದೆ. ಅವರು ಆರ್ಗನೈಸ್ ಆಗಿಲ್ಲ. ಆರ್ಗನೈಸ್ಡ್ ಅಗ್ರಿಕಲ್ಚರ್ಸ್ ಎಂದು ಹೇಳಿ ಅವರ ಮೇಲೆ ಒಂದು ಪ್ರೊಫೇಷನಲ್ ಟ್ಯಾಕ್ಸ್‌ನ್ನು ಹೊರಿಸಿರುತ್ತೀರಿ. ಆರ್ಗನೈಸ್ಡ್ ಅಗ್ರಿಕಲ್ಚರ್ ಯಾವುದರಲ್ಲಿ ಬರುತ್ತಾರೆ ಎಂದರೆ ಕಬ್ಬು ಬೆಳೆ ಬೆಳೆಯುತಕ್ಕಂಥವರು ಆರ್ಗನೈಸ್ಡ್ ಅಗ್ರಿಕಲ್ಚರ್ಸ್ ಬರುತ್ತಾರೆ. ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಏನೇನು ಬೆಳೆದರೂ ಅವರೆಲ್ಲರೂ ಆರ್ಗನೈಸ್ಡ್ ಅಗ್ರಿಕಲ್ಚರ್ ಎಂದು ಹೇಳುವುದರ ಬಗ್ಗೆ ಏನಾದರೂ ನಿಮಗೆ ಕಲ್ಪನೆ ಇದಿಯೋ. ಯಾವ ಸಮಾಜದಲ್ಲಿ ಆರ್ಗನೈಸ್ಡ್ ಅಗ್ರಿಕಲ್ಚರ್ಸ್ ಎಂದು ಹೇಳುತ್ತೀರೋ ನನಗೆ ಗೊತ್ತಿಲ್ಲ. ಆದ್ದರಿಂದ ತಮ್ಮನ್ನು ಸರ್ಕಾರವನ್ನು ಅತಿ ವಿನಯದಿಂದ ಕೇಳಿಕೊಳ್ಳುವುದೇನೆಂದರೆ ಅಗ್ರಿಕಲ್ಚರ್ ಪ್ರೊಫೇಷನಲ್ ಟ್ಯಾಕ್ಸ್ ಎಂದು ಏನು ವಿಧಿಸಿರುತ್ತೀರಿ ಇದು ನಿಜವಾಗಿಯೂ ರೈತರಿಗೆ ಒಳ್ಳೆಯದು ಮಾಡತಕ್ಕಂಥ ಕೆಲಸವಲ್ಲ. ಆ ಒಂದು ವೃತ್ತಿ ತೆರಿಗೆಯನ್ನು ತೆಗೆದು ಹಾಕಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ವೃತ್ತಿ ತೆರಿಗೆಯನ್ನು ಹಾಕಿರುವುದರಿಂದ ಎರಡು ಇದ್ದವನೂ ಒಂದೇ ಟ್ಯಾಕ್ಸನ್ನು ಕೊಡಬೇಕು ೫೦೦ ಎಕರೆ ಇದ್ದವನೂ ಒಂದೇ ಪ್ರೊಫೆಷನಲ್ ಟ್ಯಾಕ್ಸ್ ಕೊಡಬೇಕು. ವೃತ್ತಿ ತೆರಿಗೆಯು ಡೆಫನ್ಷನ್ ಹೀಗೆ ಬರುತ್ತದೆ ಎಂದು ಹೇಳುತ್ತೇನೆ. ಆದ್ದರಿಂದ ಅಧ್ಯಕ್ಷರೇ ಕಳೆದ ವರ್ಷ ಅರ್ಥ ಮಂತ್ರಿಗಳು ಈ ಸಭೆಯಲ್ಲಿ ಅವರು ತಮ್ಮ ಭಾಷಣದಲ್ಲಿ ಮಾತನಾಡಿದ್ದಾರೆ, ಸ್ಮಾಲ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಬಗ್ಗೆ ಬಹಳ ಕಳಕಳಿ ಇದೆ ಎಂದು.

"Members are aware of the consistent stand taken by the Government on the issue of Co-operative Credit.

Proposals for writing off the interest dne from small farmers have been made in the context of continuned scarcity conditions having affected thousands of smal farmers. To provide further relief to these farmers, interest on short term loans from such farmers will be waived on past loans in cases where payments of the principal wave been completed before 31st December 1981. Hereafter, small and marginal farmers who avail of short term laons will be liable to pay interest to the Apex Bank only at tht Reserve Bank lending rate. Excess interest will be subsidised by the State, by payment to the concerned Co-operative Institutions''

ತಾವು ೧೯೮೧–೮೨ರ ಮುಂಗಡ ಪತ್ರದಲ್ಲಿ ಈ ಮಾತನ್ನು ಹೇಳಿದ್ದೀರಾ. ಈವತ್ತು ಬೆಳಿಗ್ಗೆ ಪ್ರಶ್ನೆಯನ್ನು ಕೇಳಿದರು ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ತಾವು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಹಣವನ್ನು ಮನ್ನಾ ಮಾಡಿದ್ದೇವೆಂದು. ೫ ಲಕ್ಷ ಅರ್ಜಿಗಳು ಬಂದಿದೆ ಈ ೫ ಲಕ್ಷ ಅರ್ಜಿಗಳಲ್ಲಿ ೧೨ ಕೋಟಿ ರೂಪಾಯಿ ಗಳಷ್ಟು ನಾವು ವಜಾ ಮಾಡಿರತಕ್ಕಂಥದ್ದು, ೧೨ ಸಾವಿರ ಜನರಿಗೆ ತಾವು ಕೊಟ್ಟಿರತಕ್ಕಂಥ ರಿಲೀಫ್ ೧೧ಲಕ್ಷ ರೂಪಾಯಿಗಳು. ಇದರ ಬಗ್ಗೆ ಎರಡೂವರೆ ಘಂಟೆಗಳ ಕಾಲ ಚರ್ಚೆ ಮಾಡಬೇಕೆಂದು ಹೇಳಿದಿರಿ. ಅಧ್ಯಕ್ಷರೇ ಏತಕ್ಕೆ ಮಾಡಬೇಕು. ತಾವು ಬಡ್ಜೆಟ್ ಭಾಷಣದಲ್ಲಿ ಹೇಳಬೇಕಾಗಿತ್ತು ಮತ್ತೊಮ್ಮೆ ಏನಾದರೂ ಕಾರ್ಯರೂಪಕ್ಕೆ ತಂದಿದ್ದಾರೆ?. ಸಾಲವನ್ನು ತೆಗೆದುಕೊಂಡಿದ್ದ ರೈತರಿಗೆ ಬಡ್ಡಿ ಮನ್ನಾ ಮಾಡಿದ್ದೇವೆ, ಮುಂದೆ ಎಲ್ಲ ಸಾಲವನ್ನು ಕಟ್ಟಿರತಕ್ಕಂಥ ರೈತರಿಗೆ ರಿಸರ್ವ್ ಬ್ಯಾಂಕ್ ಲೆಂಡಿಂಗ್ ರೇಟ್ ಏನು ಇದೆ ಏಳು ಮುಕ್ಕಾಲು ಪರ್ಸೆಂಟ್ ಅದನ್ನು ನಾವು ಒದಗಿಸುತ್ತೇವೆ, ಇಂಟರೆಸ್ಟ್ ಇರತಕ್ಕಂಥ ಅಂತರ ಏನು ಇದೆ ೧೨ ಪರ್ಸೆಂಟ್ ಇದರಲ್ಲಿ ೫ ಪರ್ಸೆಂಟ್ ಸರ್ಕಾರ ತುಂಬಿಕೊಡುತ್ತೇವೆಂದು ಹೇಳಿ ಒಂದು ದೊಡ್ಡ ಘೋಷಣೆ ಮಾಡಿದರಲ್ಲ, ಅದನ್ನು ಯಾರಿಗಾದರೂ ಮಾಡಿದ್ದೀರಾ ಎಂದು ಕೇಳುತ್ತೇನೆ. Who has made this utterance to give credit at the Reserve Bank lending rate ? Have you waived, it any time.? Why should you make such statements ? Dont 't deceive. It would amout to self deception. ಕಳೆದ ವರ್ಷ ಒಂದು ದೊಡ್ಡ ಘೋಷಣೆಯನ್ನು ಮಾಡಿದ್ದೀರಿ ೩೧ನೇ ಜೂನ್ ೧೯೮೧ರಲ್ಲಿ ಯಾರಾದರು ರೈತರು ಸಾಲವನ್ನು ಕೊಟ್ಟರೆ ಅಂಥವರಿಗೆ ಫೀನಲ್ ಇಂಟರೆಸ್ಟನ್ನು ವಜಾ ಮಾಡುತ್ತೇವೆಂದು ಹೇಳಿ; ಆದರೆ ಇಲ್ಲಿ ನೋಡಿದಾಗ ತಮಗೆ ಹಣವಿಲ್ಲವೆಂದು ಹೇಳಿ juggulery of figures ಮಾಡಿ ರೈತರಿಗೆ ಕೊಟ್ಟಿದ್ದೀರಿ.

೫–೦೦ ಪಿ.ಎಂ.

ಕಳೆದ ವರ್ಷ ಹೇಳಿರುವ ಮಾತುಗಳನ್ನು ಈ ವರ್ಷ ಉಳಿಸಿಕೊಳ್ಳುತ್ತೀರಾ ಎಂದು ? ಕಳೆದ ವರ್ಷ ಹೇಳಿರುವ ಕೆಲಸಗಳನ್ನು ಈ ವರ್ಷ ಮಾಡಿ. ರೈತರಿಗೆ ಕೊಡುವುದನ್ನು ಕೊಡಿ. ಸಮಯದ ಅಭಾವ ವಿರುವುದರಿಂದ ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ ಕೆಲವು ವಿಷಯಗಳ ಬಗ್ಗೆ ಸರ್ಕಾರದ ಗಮನ ವನ್ನು ಸೆಳೆದಿದ್ದೇನೆ, ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುವುದೇನೆಂದರೆ ಕೆಲವು ಅಂಶಗಳ ಬಗ್ಗೆ ಅಂದರೆ ನಮ್ಮ ಖೋತ ಬಡ್ಜೆಟ್ ಬಗ್ಗೆ ನೈಜವಾದ ಆರ್ಥಿಕ ಚಿತ್ರವನ್ನು ತಾವುಗಳು ಈ ಸದನಕ್ಕೆ ಕೊಡಿ. ಅದನ್ನು ತಾವು ಮಾಡದೇ ಹೋದರೆ, ಡಿಸೆಂಬರ್ ೩೧ ರಿಂದ ಮಾರ್ಚಿ ೩೧ರವರೆಗೆ ಯಾವುದೇ ಹಣವನ್ನು ಖರ್ಚು ಮಾಡದೆ ಸರ್ಕಾರದ ಬೊಕ್ಕಸದಲ್ಲಿ ಇಟ್ಟುಕೊಂಡು ಏಪ್ರಿಲ್‌ನಲ್ಲಿ ನಮ್ಮದು ಖೋತ ಇಷ್ಟು ಎಂದು ಖರ್ಚು ಮಾಡದೆ ಇರತಕ್ಕ ಹಣವನ್ನು ತೋರಿಸಿ ಜನರಿಗೆ ಮೋಸ ಮಾಡಬೇಡಿ. ಬಹಳ ಉತ್ತಮವಾದ ಶ್ಲೋಗನ್‌ಗಳನ್ನು ಹೇಳಿದ್ದೀರಿ 'ಆಕಾಶದೀಪ' 'ನೇಗಿಲಭಾಗ್ಯ' ಇನ್ನು ಏನೇನೋ ಹೇಳಿದ್ದಾರೆ. ಇನ್ನೊಂದು ಮಾತು ಹೇಳಿದ್ದಾರೆ ಅದು ನನಗೆ ಅರ್ಥವಾಗಲಿಲ್ಲ. ನಾನು ಬಹಳ ಓದಿದೆ ಅರ್ಥಮಾಡಿ ಕೊಳ್ಳುವುದಕ್ಕೆ ಪ್ರಯತ್ನಪಟ್ಟೆ ಅರ್ಥವಾಗಲಿಲ್ಲ. ಅರ್ಥಮಾಡಿಕೊಳ್ಳುವುದಕ್ಕೆ ನನ್ನಿಂದ ಸಾಧ್ಯವಾಗ ಲಿಲ್ಲ. ನನಗೆ ಗೊತ್ತಿರತಕ್ಕ ಇಂಗ್ಲೀಷ್ ಮಟ್ಟದಲ್ಲಿ ನೋಡಿದೆ ನನಗೂ ಅರ್ಥವಾಗಲಿಲ್ಲ. ಕನ್ನಡದ

ಆಯವ್ಯಯ ಪಟ್ಟಿಯನ್ನು ಓದಿ ನನಗೆ ಗೊತ್ತಿರುವ ಮಟ್ಟದಲ್ಲಿ ನೋಡಿದೆ ಅದರಲ್ಲೂ ಅರ್ಥವಾಗಲಿಲ್ಲ. ಇದರಲ್ಲಿ ಸರ್ಕಾರದ ಮತ್ತು ಮಾನ್ಯ ಆರ್ಥಿಕ ಸಚಿವರ ಅರ್ಥ ಏನಿರಬಹುದು? ನನಗೆ ಇನ್ನೂ ಹೊಳೆಯಲಿಲ್ಲ. ಪುಟ 32ರಲ್ಲಿ ಅವರು ಒಂದು ಹೇಳಿದ್ದಾರೆ.

I quote from page 32 of the budget speech of the Hon'ble Finance Minister.

> "During 1982-83, I shall provide Rs. 11.45 crores for the Welfare of Women and children under various schemes. We propose taking up 15 Integrated Child Development Schemes and 15 Integrated Family Welfare Schemes at a totally outlay of Rs. 25 lakhs In order to enable the women to supplement their family income the comprehensive 'GRIHA-KALYANA' scheme of subsidy for income generation will be introduced. This scheme will also be extended to widows, fallen women and female destitutes in order to ensure a stable family life for them."

I do not understand the meaning of "to extend the benefit of the scheme to widows, fallen women and female destitutes for a stable family life." ತಾವು ಯಾವ ಭಾವನೆಯಲ್ಲಿ ಯಾವ ಕಲ್ಪನೆಯಲ್ಲಿ ಮಾಡಿದ್ದಿರೋ ಗೊತ್ತಿಲ್ಲ. ಅರ್ಥ ಮಾಡಿಕೊಳ್ಳುವಷ್ಟು ಅರ್ಥಮಾಡಿಕೊಂಡಿದ್ದೇನೆ, ಹೆಂಗಸರಿಗೆ ಸ್ವಲ್ಪ ಸಬ್ಸಿಡಿ ಕೊಡಲಿಕ್ಕೆ ಹೊರಟಿದ್ದಾರೆ. If you are trying to justify the interpretation to the meaning, I have got nothing to say. When we say certain things, kindly try to accept it. ನನಗೆ ಯಾವುದು ಅರ್ಥವಾಗಲಿಲ್ಲ "This scheme will also be extended to widows, fallen women and female destitutes in order to enrure a stable family life to them. ಇಂಗ್ಲೀಷ್‌ನಲ್ಲಿ ತಪ್ಪು ಬರೆದಿದ್ದಾರೆಂದು ಕನ್ನಡವಲ್ಲಿ ಓದಿ ನೋಡಿದಾಗ, ಕನ್ನಡವಲ್ಲಿ ಈ ರೀತಿ ಇದೆ.

> "ಉತ್ತಮ ಪಾದಂತಹ ಸಮಗ್ರವಾದಂತಹ ಕುಟುಂಬ ಜೀವನವನ್ನು ಅವರಿಗೆ ಕಲ್ಪಿಸುವುದಕ್ಕೋಸ್ಕರವೆಂದು ಹೇಳಿದ್ದಾರೆ".

ಮಾನ್ಯ ಅರ್ಥಮಂತ್ರಿಗಳು ಏನು ಅರ್ಥಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಪ್ರಭಾಕರ್‌ರವರು ಹೇಳಿದ್ದಾರೆ ಅವರು ಅರ್ಥಮಾಡಿಕೊಂಡಿದ್ದಾರೆ, ನಿಮಗೆ ಅರ್ಥವಾಗಿಲ್ಲ. ಪ್ರಭಾಕರ್‌ರವರಿಗೆ ಹೊಳೆದಿದೆ ತಮಗೆ ಹೊಳೆದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮದುವೆಯಾದರೆ ಮಾತ್ರ ಅವರಿಗೆ ಕುಟುಂಬ ಜೀವನ ಮದುವೆಯಾಗದಿದ್ದ ಕೆಲವರು ಬ್ಯಾಚುಲರ್ಸ್ ಇದ್ದಾರೆ ಅವರಿಗೆ ಕುಟುಂಬ ಜೀವನ ಇಲ್ಲವೆ? It is meant to be a social welfare programme. Let us not decry it or just pooh-pooh it. We should not talk lightly about it. It is a programme for the fallen women, a rehabilitation programme to exploit their talents in respect of crafts, etc., so that they can have a decent living. That is the idea. These are some of the rehabilitation programmes for the orphans, widows, female destitutes. We can interprete anything. Have a plain reading and common understanding.

SRI M.C. NANAIAH.—I fully agree with you. These are social programmes but please do not stand on prestige. ನೀವು ಏನು ಹೇಳಿದ್ದೀರಿ

ಇವರು ಕುಟುಂಬ ಜೀವನ ಮಾಡಲಿಕ್ಕೆ ಇವರ ಲೀಡರ್‌ಶಿಪ್ ಯಾರು ತೆಗೆದುಕೊಳ್ಳುತ್ತಾರೆ ? ಅರ್ಥ ಮಂತ್ರಿಗಳಂತೂ ಲೀಡರ್ ಆಗುವುದಕ್ಕೆ ಸಾಧ್ಯವಿಲ್ಲ ಆದರೂ ನನ್ನ ಅಭ್ಯಂತರವಿಲ್ಲ. ಇದಕ್ಕೆ ತಾವು ಲೀಡರ್‌ಶಿಪ್ ತೆಗೆದುಕೊಳ್ಳುತ್ತೀರಾ ? ನೀವು ಪದಗಳನ್ನು ಬಳಸುವಾಗ ಸರಿಯಾದ ಪದಗಳನ್ನು ಬಳಸಿಲ್ಲ.

SRI M. VEERAPPA MOILY.—I do not stand on prestige. But you suggest some other words. I am prepared to accept it. Why should we argue on these small points ? You suggest programmes for rehabilitation, to provide a decent living to these women. But criticising for criticism sake will have no meaning. ಅದನ್ನೆ ಸುಮ್ಮನೆ ಆ ಅರ್ಥ ಈ ಅರ್ಥ ಎಂದು ಗೊಂದಲ ಮಾಡುವುದಕ್ಕೆ ಹೊರಟರೆ ಹೇಗೆ ? ತಮಗೆ ಒಂದು ಶಬ್ದ ಕಂಡ ಕೂಡಲೇ ಏನೋ ಅರ್ಥವಾಗುತ್ತದೆಂದು ಹೇಳುವುದು ಸರಿಯಾದುದಲ್ಲ. ಈ ಒಂದು ಸಣ್ಣ ವಿಚಾರದಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ನಾವು ಬಳಸಿರುವ ಪದ ಸರಿಯಲ್ಲ ಎಂದರೆ ತಾವು ಬೇರೆ ಪದ ಹೇಳಿ ಅದನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ.—ವಿಧವೆಯರಿಗೋಸ್ಕರ ಮಾಡಿರತಕ್ಕ ಒಂದು ಕೆಲಸ ನಿಮಗೆ ಎಷ್ಟು ಅನುಕಂಪ ಇದೆಯೋ ನಮಗೂ ಅಷ್ಟೇ ಅನುಕಂಪ ಇದೆ. I accept that this a social welfare programme. I am not pooh-poohing it. By doing this you are adding fuel to the fire. You are insulting that community which has already been humiliated. I know that this is not your intention and it cannot be your intention. But it is on record.

SRI M. VEERAPPA MOILY.—But why should you read the intention in between lines ? If you read anything in between lines, so many things could be said. Here is a programme for the widows, fallen women and female destitutes to have their decent living. Instead of sympathising and suggesting some programmes, you are trying to interpret in between lines and attribute something. This is not correct.

SRI M.C. NANAIAH.—It is not my intention to humiliate anybody Being the Finance Minister, before placing the budget, you must have read it ten times. You must be careful while drafting words in respect of certain programme and schemes. When we say that, you must accept it. This is the wrong word that has been used. That word should not have been used.

ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಯಾವುದೇ ಅರ್ಥದಲ್ಲಿ ತಿಳಿದುಕೊಂಡು ಇಲ್ಲಿ ಮಂಡಿಸಿದ್ದರು ಅದನ್ನು ಒಪ್ಪಿಕೊಂಡು ಅದು ಸರಿಯೆಂದು ಹೇಳಿ ಅವರಿಗೆ ಶಹಭಾಷ್‌ಗಿರಿ ಕೊಡಲಿಕ್ಕೆ ನಾನು ತಯಾರಾಗಿಲ್ಲ. ಆದರೆ ಮಾಡಿರುವಂತಹ ಕೆಲಸಗಳನ್ನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತೇನೆ. ನಾವು ಹೇಳುವ ಮಾತನ್ನು ಅವರು ಕೇಳಬೇಕು. ನಾವು ಹೇಳುವ ಮಾತನ್ನು ಕೇಳುವುದಕ್ಕೆ ಆಗುವುದಿಲ್ಲ ಅಂದರೆ ನಾನು ಏನು ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಜ್ಯದ ನಿಜವಾದ ಆರ್ಥಿಕ ಚಿತ್ರ ೧೬೧ ಕೋಟಿ ರೂಪಾಯಿ ಖೋತ ಬಜೆಟ್ ಎಂದು ನಾನು ಕೇಳಿದ್ದೇನೆ. ಈ ಒಂದು ಚಿತ್ರದ ಮೇಲೆ ಸರ್ಕಾರದಿಂದ ಕೆಲವು ವಿವರಣೆಗಳನ್ನು ಕೇಳಿದ್ದೇನೆ ಮುಂದೆ ವಿವರಗಳನ್ನು ಕೊಡಬೇಕು ನಾನು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.